ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಹಂಸಾ ವಾಡ್ಕರ್ ಆತ್ಮಕತೆ

ಜೂನ್ 1, 2011 ಪುಟ 20 ರೂ. 14/-



ಯಡ್ಡಿ ಬೋಪಯ್ಯ

ಕಿಲಾಡಿ ಜೋಡಿಯ ಕೊನೇ ಆಟ

ಶಾಸಕರ ಖರೀದಿಗೆ 200 ಕೋಟಿ

ಪ್ರಹ್ಲಾದ್ ಜೋಶಿ ಸಹೋದರ ೫೦ ಲಕ್ಷ ಕದ್ದ

ಮಂಡ್ಯ ನೀರಾ ದಂಧೆಗೆ ಐವರು ಬಲಿ

ಕೊಪ್ಪಳ ಬಡವರ ಮನೆಗೂ ಕೈಯಿಟ್ಟ ಕರಡಿ

ಉದಯ ಟಿವಿಲಿ ಜಗದೀಶ ವಿಲಾಸ!



ಚಟಗಳೇ ಕೈಕೊಟ್ಟವೇ?

ಅನಿವಾರ್ಯ ಕಾರಣಗಳಿಂದ ಈ ವಾರ ಶಿಮುಂದರ್ ಅವರ 'ಚಾರ್ವಾಕ' ಅಂಕಣ ಪ್ರಕಟವಾಗುತ್ತಿಲ್ಲ- ಸಂ

ಉದಯ ಟಿವಿಲಿ ಜಗದೀಶ ವಿಲಾಸ!

ನೋ ಕಾಮೆಂಟ್ಸ್

"ಬೆಂಗಳೂರು ನಗರದಲ್ಲಿ ಪ್ರಸ್ತುತ ಪೆಟ್ರೋಲ್ ದರ ಲೀಟರ್‌ಗೆ 71.09 ರೂ. ಇದೆ. ಈ ದರದಲ್ಲಿ 17.06 ರೂಪಾಯಿಗಳು ಅಬಕಾರಿ ಮತ್ತು ಸೀಮಾಸುಂಕದ ರೂಪದಲ್ಲಿ ಕೇಂದ್ರ ಸರ್ಕಾರಕ್ಕೆ ಹೋಗುತ್ತದೆ. ರೂ. 16.63ರಷ್ಟು ಹಣ ಸೇವಾ ಮತ್ತು ಪ್ರವೇಶ ಶುಲ್ಕದ ರೂಪದಲ್ಲಿ ರಾಜ್ಯ ಸರ್ಕಾರದ ಬೊಕ್ಕಸ ಸೇರುತ್ತಿದೆ. ಒಟ್ಟಾರೆ ಪ್ರತಿ ಲೀಟರ್ ಪೆಟ್ರೋಲ್ ದರದಲ್ಲಿ ರೂ. 33.69ರಷ್ಟು ಹಣ ತೆರಿಗೆ ರೂಪದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಹೋಗುತ್ತದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಈಗಲೂ ಸಾಗಣೆ ವೆಚ್ಚವನ್ನೂ ಒಳಗೊಂಡಂತೆ ಪ್ರತಿ ಲೀಟರ್‌ಗೆ 36.16 ರೂಪಾಯಿ ಮಾತ್ರ ಇದೆ. ಉಳಿದದ್ದೆಲ್ಲಾ ತೆರಿಗೆಯ ಪಾಲೇ. ಹೀಗಾಗಿ ಸರ್ಕಾರಗಳು ಮನಸ್ಸು ಮಾಡಿ ತೆರಿಗೆ ಕಡಿತ ಮಾಡಿದರೆ ಪೆಟ್ರೋಲ್-ಡೀಸೆಲ್ ಬೆಲೆ ತಾನಾಗಿಯೇ ಇಳಿಯುತ್ತದೆ."

• ಪತ್ರಿಕಾ ವರದಿ

"ಗೋಧ್ರಾ ರೈಲು ದುರಂತದ ನಂತರ ಹಿಂದೂಗಳು ತಮ್ಮ ಕೋಪ ತೋರಿಸಲು ಮುಕ್ತ ಅವಕಾಶ ಕೊಡಬೇಕು ಎಂಬ ನಿರ್ದೇಶನವನ್ನು ಪೊಲೀಸರಿಗೆ ನೀಡಿದ್ದ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ, ಗುಜರಾತ್ ಬಂದ್ ವೇಳೆ ಗುಲ್ಬರ್ಗ್ ಸೊಸೈಟಿ ಮೇಲೆ ಗುಂಪೊಂದು ದಾಳಿ ಮಾಡುತ್ತಿದೆ ಎಂಬ ಮಾಹಿತಿ ನೀಡಿದಾಗಲೂ ಗಲಭೆಯನ್ನು ಹತ್ತಿಕ್ಕಲು ಅವರು ಪೊಲೀಸರಿಗೆ ಯಾವುದೇ ರೀತಿಯ ಆದೇಶವನ್ನು ನೀಡಲಿಲ್ಲ."

• ಸಂಜೀವ್ ಭಟ್, ಪೊಲೀಸ್ ಅಧಿಕಾರಿ

ಯಡ್ಡಿ ದುಡ್ಡು ಇಸ್ಕೋಬಾರದು

"ಪ್ರಜಾಪ್ರಭುತ್ವ ಮೌಲ್ಯಗಳು ಉಳಿಯದಿದ್ದರೆ ದೇಶಕ್ಕೆ ಭವಿಷ್ಯವಿಲ್ಲ. ಇಂದು ಯಾವ ಪಕ್ಷದಲ್ಲೂ ನೈತಿಕತೆ ಉಳಿದಿಲ್ಲ. ಅವಕಾಶವಾದಿತನವೇ ಆದರ್ಶವಾಗಿದೆ."

• ನಿಡುಮಾಮಿಡಿ ಸ್ವಾಮೀಜಿ

ತಾವು ಮಾತ್ರ ಯಡ್ಡಿ ಮನೆ ಕಾವಲುಗಾರರು!

"ರಾಜ್ಯಪಾಲ ಹುದ್ದೆಗೆ ಭಾರದ್ವಾಜ್ ಅನರ್ಹರು. ಅವರು ಎಐಸಿಸಿಯ ಕಾಯಂ ಆಹ್ವಾನಿತರಾಗಲು ಯೋಗ್ಯ. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಅವರಿಗೆ ಸಹಾಯಕನಾಗಿರಲು ಅರ್ಹನಾಗಿರುವ ವ್ಯಕ್ತಿ."

• ನಿತಿನ್ ಗಡ್ಕರಿ


ಈ ಕುರುಡಿಗೆ ಹೆಸರೇನು?


"ಹಿಂದೂಗಳು ಅಮೆರಿಕನ್ ಬಿಳಿಯರಂತೆ ವರ್ತಿಸುತ್ತಿಲ್ಲ. ಅಮೆರಿಕನ್ ಬಿಳಿಯರಿಗೆ ಸಾಮಾಜಿಕ ಕಳಕಳಿಯಿತ್ತು. ಎರಡೂವರೆ ಶತಮಾನದಲ್ಲಿ ಕರಿಯರು ಸ್ವತಂತ್ರರಾದರು. ಅದಕ್ಕೆ ಅಂಬೇಡ್ಕರ್ ಅಮೆರಿಕವನ್ನು ಪ್ರೀತಿಸಿದರು."

• ಚಂದ್ರಭಾನ್ ಪ್ರಸಾದ್

ಉದಯ ಟಿವಿಯವರ ಯು-2 ಚಾನೆಲ್‌ನ ಪೋಲಿ ಜಗದೀಶ ರಾವ್ ಕತೆ ಇದು. ಆ್ಯಂಕರ್ ಆಗಬಯಸುವ ಹುಡುಗಿಯರನ್ನು ದಾರಿ ತಪ್ಪಿಸಿ ತಿನ್ನುವ ಹೀನ ಚಾಳಿಯನ್ನು ಜಗದೀಶ ಶುರುಮಾಡಿದ್ದಾನೆ.

ಈ ಯು-2 ಚಾನೆಲ್‌ನ ಪೋಲಿ ಪಟಾಲಂ ಬಗ್ಗೆ ಬರೆದರೆ ಅದೇ ಒಂದು ಮೆಗಾ ಸೀರಿಯಲ್ ಆಗುತ್ತದೆ. ಇಲ್ಲಿರುವ ಮುಖ್ಯಸ್ಥ ಹರೀಶ ಹಾಗೂ ಆನಂದ್ ಎಂಬ ಗಿರಾಕಿಗಳು ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಅನೇಕ ಹುಡುಗಿಯರ ಜೀವನ ಹಾಳಾಗಿತ್ತು. ಕೊನೆಗೆ ಆನಂದ್ ಕಟ್ಟಿಕೊಂಡ ಹೆಂಡತಿಗೇ ಹಿಂಸೆ ಕೊಟ್ಟು, ವಂಚಿಸಿ ಜೈಲಿಗೂ ಹೋಗಿ ಬಂದ. ಸರಿಯಾಗಿ ತನಿಖೆಯಾಗಿ ಜೈಲಿಗಾಕಿದರೆ ಈ ಹರೀಶ್ ಜೀವನಪರ್ಯಂತ ಜೈಲಲ್ಲೇ ಇರಬೇಕಾಗುತ್ತದೆ. ಇವರು ನಡೆಸಿರುವ ವಂಚನೆ, ಹುಡುಗಿಯರ ಶೋಷಣೆಯ ಪ್ರಮಾಣ ಅಷ್ಟು ಅಗಾಧವಾಗಿದೆ. ಈಗ ನೋಡಿದರೆ ಜಗದೀಶ ರಾವ್ ಎದ್ದು ನಿಂತಿದ್ದಾನೆ.


ಯು2 ಹರೀಶ


ಪೋರ್ಕಿ ಆನಂದ

ಯು-2ನಲ್ಲಿ ಎಡಿಟರ್ ಆಗಿ ಅಂದರೆ ಸಂಕಲನಕಾರನಾಗಿ ಕೆಲಸ ಮಾಡುತ್ತಿರುವ ಜಗದೀಶ ರಾವ್ ಇತ್ತೀಚೆಗೆ ಆ್ಯಂಕರ್ ಆಕಾಂಕ್ಷಿ ಹುಡುಗಿಯರಿಗೆ ಮೋಕ್ಷ ತೋರಿಸುವ ಕೆಲಸ ಚಾಲು ಮಾಡಿದ್ದಾನೆ.

"ಯು-2ನಲ್ಲಿ ಆ್ಯಂಕರ್ ಆಗಬೇಕಾದ್ರೆ ನಾನು ಹೇಳಿದ ಮಾತು ಕೇಳಬೇಕು" ಅನ್ನುವುದು ಇವನ ಮೊದಲ ಡೈಲಾಗ್. ನಂತರ "ನೀನು ಅವಳಿಗಿಂತ ಚೆನ್ನಾಗಿದ್ದೀಯ" ಅಂತ ಇವಳ ಹತ್ತಿರ ಮತ್ತು "ನೀನು ಇವಳಿಗಿಂತ ಚೆನ್ನಾಗಿದ್ದಿಯ' ಅಂತ ಅವಳ ಹತ್ತಿರವು ಹೇಳುತ್ತಾ ಹೋಗುವುದು ಎರಡನೇ ಡೈಲಾಗ್.

ಕೊನೆಗೆ

"ನಿನಗೆ ಟಿವಿ ಸೀರಿಯಲ್‌ನಲ್ಲಿ ಛಾನ್ಸ್ ಕೊಡಿಸ್ತೀನಿ, ಆರೇ ತಿಂಗಳಲ್ಲಿ ನಿನ್ನ ಫೇಮಸ್ ಮಾಡೆಲ್ ಮಾಡಿಬಿಡ್ತೀನಿ" ಅನ್ನೋದು ಇವನ ಕೊನೆಯ ಡೈಲಾಗ್!

ಇವನ ಮಾತುಗಳಿಗೆ ಯಾರಾದರೂ ಹುಡುಗಿ ಮರುಳಾದಳೋ ಆ ತಕ್ಷಣ ಜಗದೀಶ ಹೊಸ ಡೈಲಾಗ್ ಬಿಡುತ್ತಾನೆ.

ಅದು

"ಕಮಿಟ್‌ಮೆಂಟ್ ಮಾಡಿಕೊಳ್ಳಬೇಕು" ಎನ್ನುವುದು.

ಸಿನಿಮಾರಂಗದಲ್ಲಿ ಯಾವುದಕ್ಕೆ ಡಬಲ್ ಕಾಲ್‌ಶೀಟ್ ಅನ್ನುತ್ತಾರೋ ಅಥವಾ ಕಾಲ್‌ಶೀಟ್ ಅಂಡ್ ಬೆಡ್‌ಶೀಟ್ ಅನ್ನುತ್ತಾರೋ ಅದೇ ಕೆಲಸಕ್ಕೆ ಟಿವಿ ಜಗತ್ತಿನಲ್ಲಿ 'ಕಮಿಟ್‌ಮೆಂಟ್' ಅನ್ನುವ ಪದ ಬಳಕೆಯಲ್ಲಿದೆ. ಅಂದರೆ ಆ್ಯಂಕರ್ ಆಗಿ ಅಥವಾ ಟಿವಿ ಸೀರಿಯಲ್‌ಗಳಲ್ಲಿ ಪಾತ್ರ ಬಯಸಿ ಬರುವ ಮುಗ್ಧ ಹುಡುಗಿಯರು ಛಾನ್ಸ್ ಬೇಕೆಂದರೆ ಸಂಬಂಧಿಸಿದವರ ಎಲ್ಲಾ ತೀಟೆಗಳನ್ನು ತೀರಿಸಬೇಕೆಂಬ ಡಿಮ್ಯಾಂಡ್ ಅದು.

ಈ ಜಗದೀಶ್‌ರಾವ್ ಅಂತ ಕಮಿಟಿಮೆಂಟ್‌ಗಾಗಿ ಅನೇಕ ಹುಡುಗಿಯರಿಗೆ ಕಿರುಕುಳ ಕೊಡುತ್ತಿದ್ದಾನೆ.


ತೀರಾ ಇತ್ತೀಚೆಗೆ ಮಲೆನಾಡಿನ ಒಬ್ಬ ಹುಡುಗಿಗೆ ಬಲೆ ಬೀಸಿದ್ದಾನೆ ಜಗದೀಶ್. ಆ ಹುಡುಗಿ ಯು-2 ಆ್ಯಂಕರ್ ಆಗಿ ಅವಕಾಶ ಕೇಳಿಕೊಂಡು ಬಂದಿದ್ದಳು. ಆಗ ಆಕೆಗೆ "ಚೆನ್ನೈನ ರಮೇಶ್ ಜ್ಯುವೆಲ್ಲರ್ಸ್‌ಗೆ ಒಬ್ಬ ಮಾಡೆಲ್ ಬೇಕು. ಎರಡು ಕೋಟಿ ರೂಪಾಯಿ ಖರ್ಚು ಮಾಡಿ ಜಾಹೀರಾತು ಮಾಡಿಸುತ್ತಿದ್ದಾರೆ. ಅದರ ಮಾಲೀಕ ನನ್ನ ಫ್ರೆಂಡ್. ನಾನು ನಿನಗೆ ಆ ಮಾಡೆಲ್ ಛಾನ್ಸ್ ಕೊಡಿಸ್ತಿನಿ" ಎಂದು ಆಸೆ ಹುಟ್ಟಿಸಿದ್ದಾನೆ ಜಗದೀಶ್ ರಾವ್. ಆ ಹುಡುಗಿ ಅದು ನಿಜವಿರಬಹುದು ಎಂದು ನಂಬಿ ಜಗದೀಶನ ಹಿಂದೆ ವಾರಗಟ್ಟಲೆ ಓಡಾಡಿದಳು. ಆದರೆ ಕೊನೆಗೆ ಜಗದೀಶ್ "ಕಂಪೆನಿ ಮಾಲೀಕನಿಗೆ ಹಾರ್ಟ್ ಅಟ್ಯಾಕ್ ಆಗಿದೆ. ಹಾಗಾಗಿ ಪ್ರಾಜೆಕ್ಟ್ ನಿಧಾನ ಆಗುತ್ತೆ, ನೀನೇನೂ ಯೋಚನೆ ಮಾಡಬೇಡ, ನಾನು ನಿನಗೆ ಸಿನಿಮಾದಲ್ಲಿ ಛಾನ್ಸ್ ಕೊಡಿಸ್ತೀನಿ' ಅಂದ.

ಆದರೆ ಅದ್ಯಾವುದೂ ಆಗಲೇ ಇಲ್ಲ. ಈ ಜಗದೀಶನ ಜೊತೆಗೆ ಅನಿಲ್ ಎನ್ನುವ ಇನ್ನೊಬ್ಬ ಅಪಾಪೋಲಿ ಇದ್ದಾನೆ. ದಿನಬೆಳಗಾದರೆ ಇವರಿಬ್ಬರಿಗೂ ಹುಡುಗಿಯರ ಶಿಕಾರಿಗೆ ಹೊರಡುವುದೇ ಕಸುಬಾಗಿಬಿಟ್ಟಿದೆ.

ಉದಯ ಟಿವಿ ಮಾಲೀಕ ಸೆಲ್ವಂ ಈ ಪೋಲಿ ಪಟಾಲಂ ಬಗ್ಗೆ ನಿಗಾ ಇಡಬೇಕಿದೆ.

ಜಗದೀಶನ ಮೊಬೈಲ್ ನಂಬರ್ 9742279427 ಹಾಗೂ ಅನಿಲನ 9880620931ನ ಕಾಲ್‌ಗಳು ಹಾಗೂ ಮೆಸೇಜ್‌ಗಳನ್ನು ಒಂದು ಸಾರಿ ತನಿಖೆ ಮಾಡಿಸಿದರೂ ಸಾಕು. ಇವರಿಬ್ಬರೂ ಟಿವಿಯ ಹೆಸರೇಳಿಕೊಂಡು ಏನೇನು ಹಲ್ಕಟ್ ಕೆಲಸ ಮಾಡುತ್ತಿದ್ದಾರೆಂಬುದು ಗೊತ್ತಾಗುತ್ತದೆ.

ಉದಯ ಟಿವಿ ಮಾಲೀಕರು ಜಗದೀಶನನ್ನು ಒದ್ದು ಆಚೆಗೆ ಓಡಿಸಿದರೆ ಚಾನೆಲ್‌ನ ಮರ್ಯಾದೆಯಾದರೂ ಉಳಿಯುತ್ತದೆ. ಇಲ್ಲದಿದ್ದರೆ ಇವತ್ತಲ್ಲ ನಾಳೆ ವಂಚಿತ ಹುಡುಗಿಯರೆಲ್ಲಾ ಉದಯ ಟಿವಿ ಆಫೀಸಿನೆದುರು ಬಂದು ಧರಣಿ ಕುಳಿತರೂ ಆಶ್ಚರ್ಯವೇನಿಲ್ಲ.


ಜಗದೀಶ

ಅಂದಹಾಗೆ ಈ ಜಗದೀಶನ ಇನ್ನೊಂದು ಸ್ಪೆಷಾಲಿಟಿ ಏನೆಂದರೆ "ಓನರ್ ಸೆಲ್ವಂನೇ......... ಜೊತೆ ಅಫೇರ್ ಇಟ್ಟುಕೊಂಡಿದ್ದಾನೆ. ನನಗೆ ಸೆಲ್ವಂ ಜಾತಕ ಏನಂತ ಪೂರ್ತಿ ಗೊತ್ತು" ಅನ್ನುತ್ತಿರುತ್ತಾನೆ. ಇವನ ಓಳುಗಳಿಗೆ ಕೊನೆ ಮೊದಲೆಂಬುದೇ ಇಲ್ಲ.

"ನನಗೆ ರವಿಚಂದ್ರನ್ ಗೊತ್ತು. ಅವರ ಹತ್ತಿರ ಅಸೋಸಿಯೇಟ್ ಡೈರೆಕ್ಟರ್ ಆಗಿದ್ದೆ" ಅನ್ನುತ್ತಿರುತ್ತಾನೆ. ಕೇಳಿಸಿಕೊಳ್ಳುವ ಹುಡುಗಿ ಪೆದ್ದಿಯಾಗಿದ್ದರೆ ಸೌತ್ ಇಂಡಿಯಾದ ಫೇಮಸ್ ಡೈರೆಕ್ಟರ್‌ಗಳೂ, ಪ್ರೊಡ್ಯೂಸರ್‌ಗಳ ಹೆಸರನ್ನೆಲ್ಲಾ ಹೇಳಿ "ಅವರೆಲ್ಲಾ ನನಗೆ ಗೊತ್ತು" ಅಂದುಬಿಡುತ್ತಾನೆ. ಆ ರೇಂಜಿನಲ್ಲಿರುತ್ತದೆ ಇವನ ಮಾತಿನ ಗಾಳ. ಯಾರಾದರೂ ಹುಡುಗಿ ಮಾತು ಕೇಳಿ ನಂಬಿದಳೋ ಅವತ್ತೇ ಸರ್ವನಾಶ "ನೀನು ಛಾನ್ಸ್ ಬೇಕೆಂದರೆ ನನಗೆ ಕಮಿಟ್ ಆಗು" ಅಂತಾ ತರಲೆ ತೆಗೆಯುತ್ತಾನೆ. ಜೊತೆಗೆ" ನಿನ್ನ ಫೇಮಸ್ ಆರ್ಟಿಸ್ಟ್ ಮಾಡಿ ನಾನೇ ಮದುವೆ ಯಾಗ್ತೀನಿ" ಅನ್ನುವ ಚಾಳಿಯೂ ಇವನಿಗಿದೆ. ಜೊತೆಗೆ "ನನಗೆ ಇನ್ನೂ ಮದುವೆಯಾಗಿಲ್ಲ, ನಿನ್ನೇ ಮದುವೆಯಾಗ್ತೀನಿ, ಈಗ ನಾನು ಹೇಳಿದಂತೆ ಒಪ್ಪಿಕೋ" ಅನ್ನುವ ಹೀನಸುಳಿ ಇವನದ್ದು.

ಜಗದೀಶ ರಾವ್‌ನ ಛಾನ್ಸಡಿಗಳು ಪೂರ್ತಿಯಾಗಿ ಹೊರಬಂದು ಗಲಾಟೆಗಳಾಗುವ ಮೊದಲು ಮ್ಯಾನೇಜ್‌ಮೆಂಟನವರು ಈ ಅಯೋಗ್ಯನ ಬಾಲ ಕಟ್ ಮಾಡಿ ಚಾನೆಲ್‌ನಿಂದ ಆಚೆಗೆ ದಬ್ಬುವುದು ಕ್ಷೇಮ. ●

ಹೊಸ ಸಾಹಸಕ್ಕೆ ಅಣಿಯಾಗುತ್ತಾ...

ಜಾಬ್ ನ್ಯೂಸ್ ಇದೇ ಮೇ 25ರಂದು ಬಿಡುಗಡೆಯಾಗುತ್ತಿದೆ.

ಇದು ನಮ್ಮ ಸಂಸ್ಥೆಯ ಮೂರನೇ ಪತ್ರಿಕೆ ಹಾಗೂ ಹಾಗೂ ನಮ್ಮ ತಂಡದ ವಿಳನೆಯ **Venture**.

"ಸಾಕು ಮಾರಾಯ್ರೆ, ನೀವು ನನಗೆ ಬಿಡುವು ಕೊಡುವುದು ಯಾವಾಗ? ನಿಮಗ್ಯಾರಿಗೂ ಸುಸ್ತಾಗಲ್ವ" ಅಂತ ಕ್ಯಾಪ್ಟನ್ ಗೌರಿ ಆವಾಗೀವಾಗ ಹೇಳುವುದುಂಟು. ಆದರೆ ನಾವೀಗ ಸುಸ್ತೆಂದು ಸುಮ್ಮನಾದರೆ ನಮ್ಮೆಲ್ಲರನ್ನು ನಿತ್ರಾಣಗೊಳಿಸುವಂತೆ ಹೊರಗಿನ ಪರಿಸ್ಥಿತಿ ಇದೆ. ಭಯಂಕರ ಭ್ರಷ್ಟಾಚಾರಿಗಳೇ ಭ್ರಷ್ಟಾಚಾರದ ವಿರುದ್ಧ ಆಂದೋಲನ ನಡೆಸುವ ಕಾಲವಿದು. ಮಠಾಧೀಶರುಗಳೇ



ಕಳ್ಳರಿಗೆ ನಾಯಕತ್ವ ನೀಡಲು ಹಿಂಜರಿಯದ ಧರ್ಮ ಸಂಸ್ಥಾಪನೆಯ ಹಂತವಿದು. ಹೋರಾಟಗಾರರು ದಲ್ಲಾಳಿಗಳಾಗಿಯೂ ಮಾಫಿಯಾಗಳು 'ನ್ಯಾಯ'ದ ಪರ ಕೂಗು ಹಾಕುವವರಾಗಿಯೂ ಕಾಣಿಸಿಕೊಳ್ಳುತ್ತಿದ್ದಾರೆ. ಮತ್ತೊಂದೆಡೆ ಬಡ ಬ್ರಾಹ್ಮಣ ಲಿಂಗಾಯತ ದಲಿತ, ಒಕ್ಕಲಿಗ ಇತ್ಯಾದಿಗಳು ತಮ್ಮ ಜಾತಿ ಮುಖಂಡರ ಭ್ರಷ್ಟಾಚಾರಿ ಶ್ರೀಮಂತಿಕೆಗಳನ್ನು ಅವರು ದಕ್ಕಿಸಿಕೊಂಡಿರುವ ಅಧಿಕಾರವನ್ನು ಅದು ತಮಗೆ ವೈಯಕ್ತಿಕವಾಗಿ ಸಿಕ್ಕ ಟ್ರೋಫಿಗಳೆಂಬಂತೆ ಸಂಭ್ರಮಿಸುತ್ತಿದ್ದಾರೆ. ಇಂತಹ ಕೆಟ್ಟ ಕಾಲದಲ್ಲಿ ನಮ್ಮ ಅಸ್ತಿತ್ವ ಹಾಗೂ ಪ್ರಸ್ತುತತೆ ಉಳಿಸಿಕೊಳ್ಳಲು ಹೊಸಹೊಸ ಸಾಹಸಗಳಿಗೆ ಕೈಹಾಕಲೇ ಬೇಕಾಗುತ್ತದೆ.


ಇದೊಂಥರಾ ವಿಚಿತ್ರ ಪರಿಸ್ಥಿತಿ. ಅಷ್ಟೇ ಸಂಕೀರ್ಣವೂ ಹೌದು.

ಇಂತದ್ದನ್ನು ನಿಭಾಯಿಸಲು ನಮ್ಮ ತಂಡ ಏಕಕಾಲದಲ್ಲಿ ಹಲವು **segment** ಗಳಲ್ಲಿ ಕೆಲಸ ಮಾಡಲೇಬೇಕು. ತಕ್ಷಣದ ಅಗತ್ಯ ಹಾಗೂ ಭವಿಷ್ಯಕಾಲದ ಬಗೆಗಿನ ಒಂದು **optimism** ನಮ್ಮ ಈಗಿನ ಆದ್ಯತೆಗಳಾಗಿವೆ.

ಲಂಕೇಶ್ ವಾರಪತ್ರಿಕೆಯ ಜೊತೆಯಲ್ಲಿ ಗೈಡ್ ಮಾಸಿಕ ಇರುವಂತೆಯೇ ಈಗ ಜಾಬ್ ನ್ಯೂಸ್ ಪಾಕ್ಷಿಕ ಪತ್ರಿಕೆಯೂ ನಮ್ಮ ಸಂಸ್ಥೆಗೆ ಶಕ್ತಿ ತುಂಬುವ ಕೆಲಸ ಮಾಡಲಿದೆ. ಇನ್ನು ಜಾಬ್ ನ್ಯೂಸ್‌ನ ಸ್ವರೂಪದ ಬಗ್ಗೆ ಹೇಳಬೇಕೆಂದರೆ ಅದು ಕೆಲಸಕ್ಕಾಗಿ ತಲಾಶ್ ಮಾಡುತ್ತಿರುವವರಿಗೆ ಎಲ್ಲೆಲ್ಲಿ ಯಾವ್ಯಾವ ರೀತಿಯ ಅವಕಾಶಗಳಿವೆ ಎಂಬ ಮಾಹಿತಿ ಕೊಡಲಿದೆ. ಅದೇರೀತಿ ಕೆಲಸಗಾರರನ್ನು ಹುಡುಕುತ್ತಿರುವವರಿಗೂ ಜಾಬ್ ನ್ಯೂಸ್‌ನಲ್ಲಿ ಅಗತ್ಯ ಮಾಹಿತಿ ಸಿಗಲಿದೆ. ಸರ್ಕಾರಿ, ಅರೆಸರ್ಕಾರಿ ಹಾಗೂ ಖಾಸಗಿ ಕಂಪೆನಿಗಳು, ಶಿಕ್ಷಣ ಸಂಸ್ಥೆಗಳು ತಮ್ಮಲ್ಲಿ ಲಭ್ಯವಿರುವ ಉದ್ಯೋಗಾವಕಾಶಗಳ ಬಗ್ಗೆ ಜಾಬ್ ನ್ಯೂಸ್‌ನೊಂದಿಗೆ ಮಾಹಿತಿ ವಿನಿಮಯ ಮಾಡಿಕೊಳ್ಳಲಿವೆ.

ನೀವೂ ಕೂಡಾ ಕರ್ನಾಟಕದ ಯಾವುದೇ ಭಾಗದಲ್ಲಿ ಯಾವುದೇ ರೀತಿಯ ಉದ್ಯೋಗಾವಕಾಶ ಲಭ್ಯವಿರುವ ಬಗ್ಗೆ ನಿಮ್ಮ ಗಮನಕ್ಕೆ ಬಂದಲ್ಲಿ ಆದರ ಬಗ್ಗೆ ಜಾಬ್ ನ್ಯೂಸ್‌ಗೆ ಮಾಹಿತಿ ನೀಡಿ. ನಾವದನ್ನು ಉಚಿತವಾಗಿ ಪ್ರಕಟಿಸುತ್ತೇವೆ. ಹಾಗೇ ಜಾಬ್ ನ್ಯೂಸ್ ಬಗ್ಗೆ ಪರಿಚಿತರಿಗೆ ತಿಳಿಸಿ. ಆದರ ಉಪಯೋಗ ಎಲ್ಲರಿಗೂ ಸಿಗಲಿ.

ವಿಳಾಸ
ಸಂಪಾದಕರು.
ಜಾಬ್ ನ್ಯೂಸ್
ನಂ.9, ಇ.ಎ.ಟಿ. ರಸ್ತೆ, ಬಸವನಗುಡಿ, ಬೆಂಗಳೂರು-4
ಫೋನ್ : 080-26622652
ಮೊಬೈಲ್ : 8762764624
ಇ-ಮೇಲ್ : karnatakajobnews@gmail.com
ಫ್ಯಾಕ್ಸ್ : 080-26604536


ಜಾಬ್ ನ್ಯೂಸ್‌ನ ಮಾಸ್ಟ್‌ಹೆಡ್ ಅರಿಸುತ್ತಿರುವ ಗೌರಿ ಹಾಗೂ ಸಂಪಾದಕ ಗಿರೀಶ್

ಕೊನೆಯದಾಗಿ ಒಂದು ಮಾತು

ಇವತ್ತಿನ ಯಾವುದೇ ದಿನಪತ್ರಿಕೆಗಳಲ್ಲಿ ಒಂದು ಪೋಸ್ಟ್ ಕಾರ್ಡ್ ಸೈಜಿನ ಜಾಹೀರಾತು ಕೊಡಬೇಕೆಂದರೆ ಕನಿಷ್ಠ ಇಪ್ಪತ್ತೈದು ಸಾವಿರ ರೂಪಾಯಿ ಖರ್ಚಾಗುತ್ತದೆ. ಉದಾಹರಣೆಗೆ ಒಂದು ಖಾಸಗಿ ಶಾಲೆಗೆ ನಾಲ್ವರು ಶಿಕ್ಷಕರು ಬೇಕಾಗಿದ್ದರೆ ಅದರ ಜಾಹೀರಾತಿನ ಖರ್ಚೆ ಒಂದು ತಿಂಗಳ ಸಂಬಳದಷ್ಟಾಗಿ ಬಿಡುತ್ತದೆ. ಆದರೆ ಜಾಬ್ ನ್ಯೂಸ್ ಅಂತ ಜಾಹೀರಾತುಗಳನ್ನು ಫ್ರೀಯಾಗಿ ಪ್ರಕಟಿಸಲಿದೆ. ಈ ವಿಚಾರ ಕೇಳಿ ಪತ್ರಕರ್ತ ಮಿತ್ರರು 'ಇದೇನಿದು ನಿಮ್ಮ ಲೆಕ್ಕಾಚಾರ. ಅದು ಹೇಗೆ ವರ್ಕ್‌ಔಟ್ ಆಗುತ್ತೆ?' ಅನ್ನುತ್ತಿದ್ದಾರೆ. ಆದರೆ ಕೈಯಲ್ಲಿ ಕ್ಯಾಲುಕಲೇಟರ್ ಇಟ್ಟುಕೊಳ್ಳದೆ ನಾವು ಏನನ್ನೂ ಮಾಡುವುದಿಲ್ಲ ಅಂತಷ್ಟೇ ಈಗ ಹೇಳಬಹುದು. ಅದಿರಲಿ ಬಿಡಿ, ಯಾವುದೇ ಜಾಹೀರಾತು ಪಡೆಯದೆ ಬದುಕಿದ ಹೆಗ್ಗಳಿಕೆ 'ಲಂಕೇಶ್' ಪತ್ರಿಕೆಯದಾದರೆ ಈಗ ಅದೇ ಸಂಸ್ಥೆಯ ಜಾಬ್ ನ್ಯೂಸ್ ಯಾವುದೇ ಶುಲ್ಕ ವಿಧಿಸದೆ ಉಚಿತವಾಗಿ ಉದ್ಯೋಗಾವಕಾಶದ ಜಾಹೀರಾತುಗಳನ್ನು ಪ್ರಕಟಿಸುವ ಪ್ರಯೋಗ ನಡೆಸಲು ಹೊರಟಿದೆ. ನಮ್ಮ ಡೈಲಿಗಳಿಗೆ ಪುಟ್ಟ ಸವಾಲಿದು...

ನಿಮ್ಮ ಬೆಂಬಲ, ಹಾರೈಕೆ ನಮಗಿರಲಿ....

• ಪಾರ್ವತೀಶ

ಕುಸಿಯುತ್ತಿರುವ ಶಾಲೆಯೊಂದಿಗಿನ ನನ್ನ ನೆನಪುಗಳು



• ಗೌರಿ ಲಂಕೇಶ್


editorlankesh@gmail.com

ಕಂಡಹಾಗೆ

ಚೆಡ್ಡಿಗಳ ಮಂಗಾಟ, ರಾಜ್ಯಪಾಲರ ಭಂಡಾಟ, ಕಾಂಗ್ರೆಸ್ಸಿ ರ ತುಂಟಾಟಗಳು ರಾಜ್ಯದ ಮಾನ ಮರ್ಯಾದೆಯನ್ನೆಲ್ಲ ರಾಜು ಹಾಕುತ್ತಿರುವುದನ್ನು ನೋಡಿ ಬೇಸರಗೊಂಡಿದ್ದ ನ್ನನ್ನು ಮತ್ತಷ್ಟು ದುಗುಡಕ್ಕೆ ದೂಡಿದ್ದು ನನ್ನ ಪ್ರೀತಿಯ ಸ್ಥೆಯೊಂದಕ್ಕೆ ಎದುರಾಗಿರುವ ದುರಂತದಿಂದ.

ನಾನು ಚಿಕ್ಕವಳಾಗಿದ್ದಾಗಿನಿಂದಲೂ ಒಂಬತ್ತು ವರ್ಷಗಳ ಲ ನನ್ನನ್ನು ರೂಪಿಸಿದ್ದ, ಪೋಷಿಸಿದ್ದ, ಬೆಳೆಸಿದ್ದ ಸಂಸ್ಥೆ ದು. ಅದರ ಹೆಸರು 'ದಿ ಹೋಮ್ ಸ್ಕೂಲ್.'

1930 ರಲ್ಲಿ ಮಿಸ್ ರಾಬಿನ್‌ಸನ್ ಎಂಬ ಅಮೆರಿಕನ್ ರ್ಮಪ್ರಚಾರಕಿ ಸ್ಥಾಪಿಸಿದ ಈ ಸಂಸ್ಥೆ 60 ರ ದಶಕದ ೊತ್ತಿಗೆ ಬಸವನಗುಡಿಯ ಸುತ್ತಮುತ್ತ ಅತಿಹೆಚ್ಚು ನಪ್ರಿಯವಾಗಿದ್ದ ಶಾಲೆಯಾಗಿತ್ತು. ಅದಕ್ಕೆ ಕಾರಣ ಅಲ್ಲಿ ಂಗ್ಲಿಷ್ ಮಾಧ್ಯಮದಲ್ಲಿ ಉತ್ತಮ ಮಟ್ಟದ ಶಿಕ್ಷಣ ೀಡುತ್ತಿದ್ದದ್ದು, ದುಬಾರಿ ಅಲ್ಲದ ತಿಂಗಳ ಶುಲ್ಕ ಗೆದುಕೊಳ್ಳುತ್ತಿದ್ದದ್ದು ಮತ್ತು ಡೊನೇಷನ್ ಹೆಸರಲ್ಲಿ ೋಷಕರನ್ನು ಸುಲಿಯದೇ ಇರುತ್ತಿದ್ದದ್ದು. ಈ ಎಲ್ಲ ರಣಗಳಿಂದಾಗಿ ಸಹಜವಾಗಿಯೇ ಈ ಪ್ರದೇಶದ ುತ್ತಮುತ್ತ ವಾಸಿಸುತ್ತಿದ್ದ ತಂದೆತಾಯಂದಿರು ತಮ್ಮ ಮಕ್ಕಳನ್ನು ೋಮ್ ಸ್ಕೂಲಿಗೆ ಸೇರಿಸಲು ಸಾಲುಗಟ್ಟಿ ನಿಲ್ಲುತ್ತಿದ್ದರು. ದರೆ ತಮ್ಮ ಶಾಲೆಗೆ ಪ್ರವೇಶ ಪಡೆಯಲು ಅಪಾರ



ಹೋಮ್ ಸ್ಕೂಲ್ ಕಟ್ಟಡ...



ಶಾಲೆ ಸ್ಥಾಪಿಸಿದ ಆರಂಭದ ದಿನಗಳು.....

ಬೇಡಿಕೆ ಇದೆ ಎಂಬ ಕಾರಣಕ್ಕೆ ಹೆಚ್ಚು ಜನರನ್ನು ಸೇರಿಸಿಕೊಳ್ಳುತ್ತಿರಲಿಲ್ಲ. ಬದಲಾಗಿ ಪ್ರತಿ ತರಗತಿಗೆ ಎರಡು ಸೆಕ್ಷನ್‌ಗಳು ಮಾತ್ರ ಇದ್ದು ಪ್ರತಿ ಸೆಕ್ಷನ್‌ಗಳಿಗೆ 30 ಮಕ್ಕಳನ್ನು ಮಾತ್ರ ಸೇರಿಸಿಕೊಳ್ಳುತ್ತಿದ್ದರು. ಅದರ ಹಿಂದಿದ್ದ ಕಾರಣ ಪ್ರತಿ ವಿದ್ಯಾರ್ಥಿಯ ಮೇಲೆ ಶಿಕ್ಷಕರಿಗೆ ಗಮನ ಹರಿಸಲು ಸಾಧ್ಯವಾಗಬೇಕು ಎಂಬುದು.

ಈ ಶಾಲೆಗೆ ಯಾರನ್ನು ಸೇರಿಸಿಕೊಳ್ಳಬೇಕು, ಯಾರನ್ನು ಸೇರಿಸಿಕೊಳ್ಳಬಾರದೆಂದು ನಿರ್ಧರಿಸುತ್ತಿದ್ದದ್ದು ಮಿಸ್ ಮಾದಪ್ಪ ಎಂಬ ಪ್ರಿನ್ಸಿಪಾಲರು. ಕೊಡಗಿನವರಾಗಿದ್ದ ಆಂಗ್ಲೋ ಇಂಡಿಯನ್ ಮಿಸ್ ಮಾದಪ್ಪನವರು ತುಂಬಾ ಗಟ್ಟಿಗಿತ್ತಿ. ಮದುವೆ ಆಗಿರದಿದ್ದ ಅವರು ಆಗಿನ ಕಾಲಕ್ಕೆ ಬಾಬ್‌ಕಟ್ ಮಾಡಿಸಿಕೊಂಡು, ಉದ್ದನೆ ಗೌನ್ ಮತ್ತು ಪಂಚೆ ತರಹದ **wrap around** ಹಾಗು ಟಾಪ್‌ಗಳನ್ನು ಧರಿಸುತ್ತಿದ್ದರು. ಅಪ್ಪಟ ಬ್ರಿಟಿಷ್ ಇಂಗ್ಲಿಷ್‌ನಲ್ಲಿ ಮಾತನಾಡುತ್ತಿದ್ದರು. ಪ್ರತಿಯೊಂದರಲ್ಲೂ ಶಿಸ್ತು ಮತ್ತು ಅಚ್ಚುಕಟ್ಟುತನವನ್ನು ಬಯಸುತ್ತಿದ್ದರು.

ನನ್ನನ್ನು ಈ ಹೋಮ್ ಸ್ಕೂಲಿಗೆ ಸೇರಿಸಲು ಅಪ್ಪ ಮತ್ತು ಅಮ್ಮ ಕರೆದುಕೊಂಡು ಹೋಗಿದ್ದಾಗ ಮಿಸ್ ಮಾದಪ್ಪನವರ ಟೇಬಲ್ ಮೇಲೆ ನಾನೆಂದೂ ಕಂಡಿರದಂತಹ ಸುಂದರ ವಸ್ತುಗಳಿದ್ದವು. ಆ ವಯಸ್ಸಿಗೆ ಸಹಜವಾಗೇ ಅವುಗಳನ್ನೆಲ್ಲ ಮುಟ್ಟಿನೋಡುವ ಕುತೂಹಲ ನನಗೆ. ಆದರೆ ಮಿಸ್ ಮಾದಪ್ಪನವರ `strict' ಮುಖಭಾವವನ್ನು ಗಮನಿಸಿ ನನ್ನ ಕೈಗಳನ್ನು ಕಟ್ಟಿಕೊಂಡು ಸುಮ್ಮನಾಗಿದ್ದೆ.

ನಾನು ಎಲ್‌ಕೆಜಿ ಸೇರಿದಾಗ ನಮ್ಮ ಮನೆ ಜರ್ನಲಿಸ್ಟ್ ಕಾಲೋನಿಯಲ್ಲಿತ್ತು. ಆರಂಭದ ದಿನಗಳಲ್ಲಿ ಅಪ್ಪ ಬಾಡಿಗೆ ಸೈಕಲ್ಲಿನಲ್ಲಿ ನನ್ನನ್ನು ಬೆಳಗ್ಗೆ ಶಾಲೆಗೆ ಕರೆದುಕೊಂಡು ಹೋಗುತ್ತಿದ್ದರು. ಮೊದಲ ದಿನ ಸೈಕಲ್ಲಿನಲ್ಲಿ ಮಕ್ಕಳ ಸೀಟ್ ಇರಲಿಲ್ಲವಾದ್ದರಿಂದ ತೊಡೆಗಳಲ್ಲಿ ಬಹಳ ನೋವು ಅನುಭವಿಸಿದ್ದೆ. ಆ ನಂತರ ಮಕ್ಕಳ ಸೀಟ್ ಇರುವ ಸೈಕಲ್ಲಿನಲ್ಲಿ ಅಪ್ಪ ಕರೆದುಕೊಂಡು ಹೋಗುತ್ತಿದ್ದರು. ಆಗ ಒಂದು ದಿನ 'ಜುಂ' ಅಂತ ಸೈಕಲ್ಲಿನಲ್ಲಿ ಹೋಗುತ್ತಿದ್ದಾಗ ಮುಂದಿನ ತಂತಿಯಲ್ಲಿ ಬೆರಳನ್ನು ಇಟ್ಟು ಅಪ್ಪ ಬ್ರೇಕ್ ಹಾಕಿದಾಗ ನನ್ನ ಬೆರಳು ಸಿಕ್ಕಿಹಾಕಿಕೊಂಡು ಜೋರಾಗಿ ಅತ್ತಿದ್ದು ಇನ್ನೂ ನೆನಪಿದೆ.

ಹಚ್ಚ ಹಸಿರು ಗಿಡಮರಗಳ ನಡುವೆ ಕಂಗೊಳಿಸುತ್ತಿದ್ದ ಅಚ್ಚ ಬಿಳಿ ಕಟ್ಟಡಗಳಿಂದ ರೂಪಿತವಾಗಿದ್ದ ನನ್ನ ಈ ಶಾಲೆ ತನ್ನ ಹೆಸರಿಗೆ ತಕ್ಕಂತೆ 'ಪರ್ಯಾಯ ಮನೆ'ಯೆ ಆಗಿತ್ತು. ಅಲ್ಲಿನ ಟೀಚರ್‌ಗಳು ಮತ್ತು ಮಾಸ್ಟರ್‌ಗಳು ಪ್ರತಿ ಮಗುವಿನ ಬಗ್ಗೆ ಅಪಾರ ಕಾಳಜಿಯನ್ನು ಹೊಂದಿರುತ್ತಿದ್ದರು. ಯಾವುದೇ ಸಬ್ಜೆಕ್ಟಿನಲ್ಲಿ ಹಿಂದೆ ಬಿದ್ದರೆ ವಿಶೇಷ ಮುತುವರ್ಜಿ ವಹಿಸಿ ನಮ್ಮಲ್ಲಿ ಆಸಕ್ತಿಯನ್ನು ಮೂಡಿಸಿ ಮುಂದೆ ಬರುವಂತೆ ನೋಡಿಕೊಳ್ಳುತ್ತಿದ್ದರು.

ನಮ್ಮ ಯೂನಿಫಾರಂ, ಶೂ, ಕೂದಲು, ಪುಸ್ತಕ ಎಲ್ಲವೂ ಅಚ್ಚುಕಟ್ಟಾಗಿರಬೇಕಿತ್ತು. ಹಲವೊಮ್ಮೆ ದಿನದ ಪ್ರಾರ್ಥನೆ ಪ್ರಾರಂಭವಾಗುವ ಮುನ್ನವೇ ಮಿಸ್ ಮಾದಪ್ಪ ಪ್ರತ್ಯಕ್ಷವಾಗಿ ನಮ್ಮನ್ನು ಪರೀಕ್ಷೆಗೆ ಒಡ್ಡುತ್ತಿದ್ದರು. ಆಗ ಶಾಲೆಯ ಮಕ್ಕಳೆಲ್ಲಾ ಸಾಲಾಗಿ ನಿಂತಿರುತ್ತಿದ್ದೆವು. ಯಾರಾದರೂ ಗಲೀಜಾಗಿದ್ದ ಸಮವಸ್ತ್ರ ಅಥವಾ ಶೂ ಧರಿಸಿದ್ದರೆ ಅವರ ಪೋಷಕರಿಗೆ ಬುಲಾವ್ ಕಳುಹಿಸುತ್ತಿದ್ದರು. ಕೈ ಬೆರಳ ಉಗುರುಗಳು ಬೆಳೆದಿದ್ದರೆ ತಕ್ಷಣ ಅವುಗಳನ್ನು ಕತ್ತರಿಸುವಂತೆ ಟೀಚರ್‌ಗೆ ಹೇಳುತ್ತಿದ್ದರು. ಹುಡುಗರು ಸರಿಯಾಗಿ ಕ್ರಾಪ್ ಮಾಡಿಸಿಕೊಂಡಿರದಿದ್ದರೆ ಕ್ಷೌರಿಕನಿಂದ ಅವರಿಗೆ ಕ್ರಾಪ್ ಮಾಡಿಸಿ ಬರುವ ತಿಂಗಳ ಶುಲ್ಕದಲ್ಲಿ 'ಕ್ಷೌರಿಕನ ಬಾಬ್ತು' ಎಂದು ಐದು ರೂಪಾಯಿ ಹೆಚ್ಚಿಗೆ ಪಡೆಯುತ್ತಿದ್ದರು!

ನನ್ನ ಈ ಶಾಲೆಯಲ್ಲಿ ಕ್ರಿಶ್ಚಿಯನ್, ಹಿಂದೂ ಮತ್ತು ಮುಸಲ್ಮಾನ ಟೀಚರ್‌ಗಳು ಇದ್ದರು. ಸಾಮಾನ್ಯವಾಗಿ ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನ ಟೀಚರ್‌ಗಳಿರುತ್ತಾರೆ. ಆದರೆ ನನ್ನ ಶಾಲೆಯಲ್ಲಿ ಎಲ್ಲಾ ಟೀಚರ್‌ಗಳು ನಮ್ಮ ಬಗ್ಗೆ ಎಷ್ಟು ಪ್ರೀತಿ ತೋರುತ್ತಿದ್ದರೆಂದರೆ ಎಲ್ಲರೂ ನಮಗೆ ಅಚ್ಚುಮೆಚ್ಚಿನವರಾಗಿದ್ದರು!

ನನ್ನ ಶಾಲೆಯಲ್ಲಿ ಗಂಡುಮಕ್ಕಳು ಬೇರೆ, ಹೆಣ್ಣುಮಕ್ಕಳು ಬೇರೆ ಎಂದು ಪ್ರತ್ಯೇಕಿಸುತ್ತಿರಲಿಲ್ಲ. ಬದಲಾಗಿ ಎಲ್ಲರೂ ಸಮಾನರು, ಎಲ್ಲರ ನಡುವೆ ಸಹೋದರತ್ವ ಬೆಳೆಯಬೇಕೆಂಬ ಕಾರಣಕ್ಕೆ ಗಂಡು ಮತ್ತು ಹೆಣ್ಣುಮಕ್ಕಳನ್ನು ಅಕ್ಕಪಕ್ಕ ಕೂಡಿಸುತ್ತಿದ್ದರು. ಹಾಗೆಯೇ ನಮ್ಮನಮ್ಮ ನಡುವೆ ಗುಂಪುಗಾರಿಕೆ ಬೆಳೆಯಬಾರದೆಂದೂ, ಪ್ರತಿಯೊಬ್ಬರು ಎಲ್ಲರೊಂದಿಗೆ ಬೆರೆಯಬೇಕೆಂದೂ, ಪ್ರತಿ ತಿಂಗಳು ನಾವು ಕೂರುವ ಸ್ಥಳವನ್ನು ಬದಲಾಯಿಸುತ್ತಿದ್ದರು. ಈ ಕಾರಣಕ್ಕೆ ನಾವೆಲ್ಲರು ಜಾತಿ, ಧರ್ಮ, ವರ್ಗ ಎಂದೆಲ್ಲ ನೋಡದೆ ಸುಲಭವಾಗಿ ಎಲ್ಲರೊಂದಿಗೆ ಬೆರೆಯಲು ಸಾಧ್ಯವಾಗುತ್ತಿತ್ತು. ನನ್ನ ಶಾಲೆಯಲ್ಲಿ ಬೇರೆ ಕಡೆ ಇರುವಂತೆ ಐದಾರು ಜನ ಕೂರುವ ಬೆಂಚ್‌ಗಳಿರಲಿಲ್ಲ. ಬದಲಾಗಿ ಇಬ್ಬರು ವಿದ್ಯಾರ್ಥಿಗಳು ಮಾತ್ರ ಅಕ್ಕಪಕ್ಕ ಕೂರುವಂತಹ, ನಮ್ಮ ಪುಸ್ತಕ ಮತ್ತು ಸಾಮಾನುಗಳಿಗೆ ಸ್ಥಳಾವಕಾಶ ಇದ್ದಂತಹ ಬೆಂಚ್‌ಗಳಿರುತ್ತಿದ್ದವು.

ಈ ಶಾಲೆಯ ವಿದ್ಯಾರ್ಥಿಗಳು ಅಂತಿಮವಾಗಿ ಏಳನೇ ತರಗತಿಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ತೆಗೆದುಕೊಳ್ಳುತ್ತಿದ್ದರು. ಆದರೆ ಅದಕ್ಕಿಂತ ಹಿಂದಿನ ತರಗತಿಗಳಲ್ಲಿ ಬೇರೆ ಶಾಲೆಗಳಲ್ಲಿ ಇದ್ದಂತಹ ಪಠ್ಯಪುಸ್ತಕಗಳಿಗಿಂತ ಉತ್ತಮ ದರ್ಜೆಯ ಪಠ್ಯಗಳನ್ನು ಹೇಳಿಕೊಡುತ್ತಿದ್ದರು. ಆ ಕಾರಣಕ್ಕೆ ನಾವು ಗಣಿತ, ಭೂಗೋಳ ತರಹದ ವಿಷಯಗಳಲ್ಲಿ ಹೆಚ್ಚು ಸಿದ್ಧತೆ ಪಡೆಯುತ್ತಿದ್ದೆವು. ಇಂಗ್ಲಿಷ್‌ನಲ್ಲಂತೂ ವ್ಯಾಕರಣ ಮತ್ತು ಶಬ್ದ ಸಂಪತ್ತಿನಲ್ಲಿ ನಮ್ಮ ವಾರಿಗೆಯವರನ್ನು ಮೀರಿಸುವಂತೆ ರೂಪಗೊಳ್ಳುತ್ತಿದ್ದೆವು.

ಆದರೆ ಕನ್ನಡದ್ದೇ ಕೊರತೆ. ನಮಗೆ ಕನ್ನಡ ಹೇಳಿಕೊಡುತ್ತಿದ್ದ ಮೇಷ್ಟ್ರು, ರೂಪದಲ್ಲಿ ಕಾರ್ಟೂನಿಸ್ಟ್ ಆರ್.ಕೆ. ಲಕ್ಷ್ಮಣ್‌ರ **'common man'**ನ ಪಡಿಯಚ್ಚು. **common man**ನಂತೆ ನಮ್ಮ ಕನ್ನಡ ಮಾಸ್ಟರ್ ಬಿಳಿಕಚ್ಚೆ ಪಂಚೆ, ಅದರ ಮೇಲೊಂದು ಕಪ್ಪು ಕೋಟ್ ಧರಿಸುತ್ತಿದ್ದರು. ತಲೆ ಮೇಲೊಂದು ಟೋಪಿಯೂ ಇರುತ್ತಿತ್ತು. ಮಿಸ್



ಮಾದಪ್ಪನವರಿಗೆ ಕನ್ನಡ ಬರುತ್ತಿರಲಿಲ್ಲ ಎಂಬ ಕಾರಣಕ್ಕೋ ಏನೋ ಈ ಪುಣ್ಯಾತ್ಮ ನಮಗೆ ಹೇಗೆ ಕನ್ನಡ ಹೇಳಿಕೊಡುತ್ತಿದ್ದಾನೆ ಎಂದು ಯಾರೂ ಗಮನಿಸಲಿಲ್ಲ. ಮುದಿ ಬ್ರಾಹ್ಮಣನಾಗಿದ್ದ ಆತ ನಮಗೆ ಕನ್ನಡದ ವ್ಯಾಕರಣ ಹೇಳಿಕೊಡುವ ಬದಲಾಗಿ ರಾಮಾಯಣ ಮತ್ತು ಮಹಾಭಾರತದ ಕತೆಗಳನ್ನು ಹೇಳುತ್ತಿದ್ದ . ಮಕ್ಕಳಾದ ನಾವೆಲ್ಲರೂ ಸಹಜವಾಗಿಯೇ ಅವುಗಳನ್ನು ಆನಂದಿಸುತ್ತಿದ್ದೆವು. ಪರಿಣಾಮವಾಗಿ ನನಗೆ ಕನ್ನಡದ ಅಕ್ಷರ ಮತ್ತು ಸಂಧಿಗಳ ಬಗ್ಗೆ ಏನೇನೂ ಗೊತ್ತಿರದೆ ಹೋಗಿದ್ದರೂ ರಾಮಾಯಣ ಮತ್ತು ಮಹಾಭಾರತದ ಕತೆಗಳನ್ನೆಲ್ಲ ಕಲಿತೆ! ಆದರೆ ಈತನಿಂದಾದ ಅನಾಹುತದ ಬಗ್ಗೆ ಗೊತ್ತಾಗಿದ್ದು ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಎದುರಿಸಿದಾಗಲೇ. ಬೇರೆ ವಿಷಯಗಳಲ್ಲಿ ಚೆಂದವಾಗಿ ಉತ್ತರಿಸಿದ್ದ ನಾನು ಕನ್ನಡದಲ್ಲಿ ಫೇಲ್ ಆಗುತ್ತೇನೆ ಎಂದೇ ಭಯಭೀತಳಾಗಿದ್ದೆ. ಕೊನೆಗೆ ಕನ್ನಡದಲ್ಲಿ ಕಡಿಮೆ ಅಂಕ ಬಂದಿದ್ದರೂ ಫಸ್ಟ್ ಕ್ಲಾಸ್‌ನಲ್ಲಿ ಪಾಸಾಗಿದ್ದೆ.


ಅದೇನೇ ಇರಲಿ, ತನ್ನ ವಿದ್ಯಾರ್ಥಿಗಳಲ್ಲಿ ಉತ್ತಮ ಮೌಲ್ಯಗಳು ಮತ್ತು ಸಮಾಜಸೇವೆ ಮನೋಭಾವಗಳು ಬೆಳೆಯಬೇಕೆಂದು ನನ್ನ ಶಾಲೆ ಹಲವು ಕಾರ್ಯಕ್ರಮಗಳನ್ನು ರೂಪಿಸಿತ್ತು. ಮೊದಲನೆಯದಾಗಿ ಇಡೀ ಶಾಲೆಯ ವಿದ್ಯಾರ್ಥಿಗಳನ್ನು ನಾಲ್ಕು ತಂಡಗಳಾಗಿ ವಿಭಾಗಿಸಿ ಆ ತಂಡಗಳಿಗೆ **Courage** (ಧೈರ್ಯ), **Honour** (ಘನತೆ), **Loyalty** (ನಿಷ್ಠೆ) ಮತ್ತು **Service** (ಸೇವೆ) ಎಂದು ಹೆಸರಿಟ್ಟಿದ್ದರು. ನಾನು 'ಧೈರ್ಯ' ಎಂಬ 'ಕೆಂಪು' ತಂಡದ ಸದಸ್ಯೆಯಾಗಿದ್ದೆ. ಹಾಗೆಯೇ ರೆಡ್‌ಕ್ರಾಸ್ ಮತ್ತು ಸ್ಕೌಟ್ಸ್ ಹಾಗೂ ಗೈಡ್ ಸಂಘಟನೆಗಳ ಮೂಲ ತತ್ವಗಳ ಬಗ್ಗೆಯೂ ನಮಗೆ ಹೇಳಿಕೊಡುತ್ತಿದ್ದರು.

ಇಂತಹ ಉತ್ತಮ ಶಾಲೆಗೆ ಸಕಾಲದಲ್ಲಿ ಅರ್ಜಿ ಸಲ್ಲಿಸದಿದ್ದ ಕಾರಣ ನನ್ನ ತಂಗಿ ಬೇಬಿ ಈ ಶಾಲೆಯನ್ನು ಸೇರಲಾಗಲಿಲ್ಲ. ಆದರೆ ನನ್ನ ತಮ್ಮ ಅಜಿತು ಸೇರಿದ್ದ. ಶಿಸ್ತಿನ ಬಗ್ಗೆ ಈ ಶಾಲೆಯಲ್ಲಿ ಇದ್ದ ಕಟ್ಟುನಿಟ್ಟಿನ ಬಗ್ಗೆ ಒಂದು ಉದಾಹರಣೆಯನ್ನು ಕೊಡಬಹುದು. 77 ರಲ್ಲಿ ಅಪ್ಪನಿಗೆ 'ಪಲ್ಲವಿ' ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ದೊರಕಿದಾಗ ನಮ್ಮ ಇಡೀ ಕುಟುಂಬ ದೆಹಲಿಗೆ ಹೋಗಿತ್ತು. ಹೋಗುವ ಮುನ್ನ ಮಿಸ್ ಮಾದಪ್ಪನವರ ಅನುಮತಿಯನ್ನು ಅಪ್ಪ ಕೋರಿದ್ದರು. ಆದರೆ ಮಾದಪ್ಪ ಅದನ್ನು ನಿರಾಕರಿಸಿದ್ದರು. ಆದರೂ ನಾವೆಲ್ಲ ಹತ್ತು ದಿನಗಳ ಕಾಲ ದೆಹಲಿಗೆ

7ನೇ ಪುಟಕ್ಕೆ

ಚಂದ್ರಶೇಖರ ಐಜೂರ್‌ರಿಂದ ಪುಸ್ತಕಗಳ ಕಿರುವಿಮರ್ಶೆ

ಪತ್ರಿಕೆಯು ಸಾಹಿತ್ಯದ ಪುಟಗಳ ಚೆಂದ ಹೆಚ್ಚಿಸಲ ಪುಸ್ತಕ ವಿಮರ್ಶೆಯ ಹೊಸ ಅಂಕಣ ಆರಂಭಿಸಿರುವುದನ್ನು ನೀವು ಗಮನಿಸಿರಬಹುದು. ನಮ್ಮ ಬಳಗದ ಚಂದ್ರಶೇಖರ ಐಜೂರ್ ಈ ಅಂಕಣ ಬರೆಯುತ್ತಾರೆ. ಸಾಹಿತ್ಯದ ವಿದ್ಯಾರ್ಥಿಯಾದ ಐಜೂರ್ ಸಾಮಾಜಿಕ ಸಂಶೋಧಕರೂ ಹೌದು. ಕನ್ನಡದ ಯುವ ಬರಹಗಾರರಲ್ಲಿ ಸಾಹಿತ್ಯ ಸಾಂಸ್ಕೃತಿಕ ಸಂಗತಿಗಳನ್ನು ಗಮನಿಸುತ್ತಾ, ಖಚಿತವಾದ ನಿಲುವಿನಿಂದ ಬರೆಯುತ್ತಿರುವವರಲ್ಲಿ ಐಜೂರ್ ಕೂಡಾ ಒಬ್ಬರು.




ಕನ್ನಡದಲ್ಲೀಗ ಪ್ರತಿ ವರ್ಷ ಕನಿಷ್ಠ ನಾಲ್ಕೈದು ಸಾವಿರ ಪುಸ್ತಕಗಳು ಪ್ರಕಟವಾಗುತ್ತಿವೆ. ದಿನಪತ್ರಿಕೆಗಳು, ವಾರಪತ್ರಿಕೆ ಹಾಗೂ ಮಾಸಿಕಗಳಲೆಲ್ಲಾ ಪ್ರಕಟವಾಗುವ ಪುಸ್ತಕ ವಿಮರ್ಶೆಗಳ ಸಂಖ್ಯೆ ಒಂದು ಸಾವಿರವೂ ಆಗುವುದಿಲ್ಲ. ಹಾಗಾಗಿ ಎಷ್ಟೋ ಮಹತ್ವದ ಪುಸ್ತಕಗಳಿಗೆ ವಿಮರ್ಶೆಯ ಕೃಪೆ ಸಿಗುವುದೇ ಇಲ್ಲ. ಕೆಲವೊಮ್ಮೆ ಓದುಗರಿಗೆ ಆ ಪುಸ್ತಕಗಳ ಕಿರುಪರಿಚಯವೂ ಆಗುವುದಿಲ್ಲ. ಆ ಕೊರತೆ ನೀಗಲೆಂದೇ ಲಂಕೇಶ್‌ನಲ್ಲಿ ಪ್ರತಿ ವಾರ ಕೆಲ ಮಹತ್ವದ ಪುಸ್ತಕಗಳ ಕಿರುಪರಿಚಯ ಪ್ರಕಟಿಸಲು ನಿರ್ಧರಿಸಿದ್ದೇವೆ. ಇದರೊಂದಿಗೆ ರೆಗ್ಯುಲರ್ ಆಗಿ ಪುಸ್ತಕ ವಿಮರ್ಶೆಗಳೂ ಇರಲಿದೆ. ಲೇಖಕರು ಹಾಗೂ ಪುಸ್ತಕ ಪ್ರಕಾಶಕರು ತಪ್ಪದೆ ತಮ್ಮ ಹೊಸ ಪುಸ್ತಕಗಳನ್ನು 'ಲಂಕೇಶ್'ಗೆ ನೇರವಾಗಿ ಹಾಗೂ ಐಜೂರ್‌ರವರಿಗೂ ಕಳುಹಿಸಿ.

ಈ ಹೊಸ ಅಂಕಣ ನಿಮಗಿಷ್ಟವಾಗಬಹುದು ಎಂಬುದು ನಮ್ಮ ನಿರೀಕ್ಷೆ.

ಸಂಸ್ಕೃತ ವಿವಿಯಲ್ಲಿ ಅಸಂಸ್ಕೃತ ಕ್ರಿಮಿ

ಪ್ರಗತಿಪರರು-ಬುದ್ಧಿಜೀವಿಗಳ ವಿರೋಧವನ್ನೂ ಲೆಕ್ಕಿಸದೆ ಸಂಸ್ಕೃತ ವಿವಿಯನ್ನು ಹುಟ್ಟುಹಾಕಿದ ಯಡ್ಡಿ ಸರ್ಕಾರ ಈಗ ಅದರ ದುಷ್ಪರಿಣಾಮವನ್ನು ನುಂಗಬೇಕಾಗಿದೆ.


ಪ್ರಾಧ್ಯಾಪಕರಲ್ಲೇ ಗುಂಪುಗಾರಿಕೆ, ಹಾಸ್ಟೆಲ್ ಅವ್ಯವಸ್ಥೆ, ರಾಜಕೀಯದ ಹಸ್ತಕ್ಷೇಪ, ಬೋಧಕರ ಅಶಿಸ್ತು... ಇತ್ಯಾದಿ ಅರಾಜಕತೆಯಿಂದಾಗಿ ಹುಟ್ಟಿದ ಹೊಸದರಲ್ಲೇ ಸಂಸ್ಕೃತ ವಿವಿಗೆ ಬಾಲಬಾಧೆ ಆವರಿಸಿದೆ.


कर्णाटक-संस्कृत-विश्वविद्यालयः
KARNATAKA SAMSKRIT UNIVERSITY
Dr. Chandramouli S. Naikar
Registrar
ದಿನಾಂಕ: 13.05.2011

ಪ್ರಭುಲಿಂಗನಿಗೆ ಮಲ್ಲೇಪುರಂ ನೋಟಿಸ್

ಇಂಥ ಅವ್ಯವಸ್ಥೆಯ ಮೂಲ ಪುರುಷನಂತಿರುವವನು ಅಖಿಲ ಕರ್ನಾಟಕ ಸಂಸ್ಕೃತ ಕಾಲೇಜುಗಳ ಅಧ್ಯಾಪಕರ ಸಂಘದ ಅಧ್ಯಕ್ಷ ಡಾ. ಪ್ರಭುಲಿಂಗ ಹೆಬ್ಬಾಳನೆಂಬ ಹುಟ್ಟಾ ಅನಾಗರಿಕ. ಮಟಮಟ ಮಧ್ಯಾಹ್ನವೇ ಸಂಸ್ಕೃತ ಕಾಲೇಜಿಗೆ ನುಗ್ಗುತ್ತಾನೆ. ಕುಲಸಚಿವರನ್ನೂ ಲೆಕ್ಕಿಸದೇ ಅಲ್ಲಿನ ಸಿಬ್ಬಂದಿಯನ್ನು ವಾಚಾಮಗೋಚರ ಬಯ್ಯುತ್ತಾನೆ. ವಿವಿಯ ಆಡಳಿತಾಧಿಕಾರಿಗಳ ವಿರುದ್ಧ ವಿದ್ಯಾರ್ಥಿಗಳನ್ನು ಛೂ ಬಿಡುತ್ತಾನೆ. ಕೊನೆಗೆ ತಾನೇ ವಿದ್ಯಾರ್ಥಿಗಳ ಹಾಸ್ಟೆಲ್ ಆಕ್ರಮಿಸಿ ಹಾವಳಿಯಿಡುತ್ತಾನೆ.

ಸದ್ಯ ಚಾಮರಾಜಪೇಟೆಯ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜೇ ಈತನ ಅಡ್ಡೆ. ಪ್ರಭುಲಿಂಗ ಹೆಬ್ಬಾಳನೆ ಇದರ ಸಹಪ್ರಾಧ್ಯಾಪಕ. ಶುರುವಿನಿಂದಲೂ ಒಂದಲ್ಲ ಒಂದು ಕಿತಾಪತಿ ಮಾಡುತ್ತಲೇ ಬಂದ ಪ್ರಭುಲಿಂಗ ಹೆಬ್ಬಾಳ ಇದೇ ಮೇ 9ರಂದು ಸಂಜೆ ನಾಲ್ಕೂವರೆ ಹೊತ್ತಿಗೆ ಸಂಸ್ಕೃತ ಕಾಲೇಜಿಗೆ ನುಗ್ಗಿದ್ದೇ ಮರುಎಣಿಕೆಗಾಗಿ ಸಲ್ಲಿಸಿದ್ದ ಅರ್ಜಿಯನ್ನು ಪಡೆಯಲು ಕಾಲೇಜು ಸಿಬ್ಬಂದಿಗಳಾದ ಎಸ್. ಸುರೇಶ್, ಬಿ.ಚೆನ್ನಾಚಾರಿಯವರಿಗೆ ಗಂಟು ಬಿದ್ದಿದ್ದಾನೆ. ಸದ್ಯ ಸಂಸ್ಕೃತ ವಿವಿಯ ಕಚೇರಿ ಕೂಡ ಇದೇ ಕಾಲೇಜು ಆವರಣದಲ್ಲಿದ್ದು ಕುಲಸಚಿವ ಮಲ್ಲೇಪುರಂ ವೆಂಕಟೇಶ್‌ರ ಕಚೇರಿಯೂ ಅಲ್ಲೇ ಇದೆ.


ಮಲ್ಲೇಪುರಂ

ಪ್ರಭುಲಿಂಗನ ಬೈಗುಳ ಸಹಿಸದೇ ಪಕ್ಕದ ವಿವಿ ಕಚೇರಿಗೆ ಬಂದ ಚೆನ್ನಾಚಾರಿ ಮತ್ತು ಸುರೇಶ್‌ರನ್ನು ನಿರ್ದೇಶಕರ ಕಚೇರಿತನಕ ಬೆನ್ನಟ್ಟಿ ಬಂದು ಅವಾಚ್ಯವಾಗಿ ನಿಂದಿಸಿ ಮತ್ತೆ ರಂಪ ಎಬ್ಬಿಸಿದ್ದಾನೆ. ಅದೇ ಹೊತ್ತಿಗೆ ಕಚೇರಿಯಲ್ಲಿದ್ದ ವಿದ್ವಾನ್ ಗಂಗಣ್ಣ, ವಿದ್ವಾನ್ ದಯಾಶಂಕರ್, ವಿದ್ವಾನ್ ಎಚ್.ಬಿ.ರಾಮೇಗೌಡ, ಡಾ.ಶ್ರೀನಿವಾಸ್ ವರಖೇಡಿ ಮುಂತಾದವರನ್ನೂ ಅಡ್ಡಗಟ್ಟಿ ಪಕ್ಕಾ ಕೊಳಕು ಭಾಷೆಯಲ್ಲಿ ಬೈದಿದ್ದಾನೆ. ಅಷ್ಟಕ್ಕೂ ಪ್ರಭುಲಿಂಗ ತನ್ನ ರೌದ್ರಾವತಾರ ಮೆರೆದದ್ದು ಕ್ಷುಲ್ಲಕ ಕಾರಣಕ್ಕೆ. ಬೈಗುಳಕ್ಕೆ ಬಲಿಯಾದ ಕಾಲೇಜಿನ ಅಷ್ಟೂ ಸಿಬ್ಬಂದಿ ಈಗಾಗಲೇ ಕುಲಸಚಿವ ಮಲ್ಲೇಪುರಂಗೆ ಪ್ರಭುಲಿಂಗನ ವಿರುದ್ಧ ದೂರು ಕೊಟ್ಟಿದ್ದಾರೆ. ಕುಲಸಚಿವರು ಈಗಾಗಲೇ ಪ್ರಭುಲಿಂಗನಿಗೆ ಕಾರಣಕೇಳಿ ನೋಟಿಸನ್ನೂ ಜಾರಿಗೊಳಿಸಿದ್ದಾರೆ. ಆದರೆ ಶಿಕ್ಷಣ ಇಲಾಖೆಯ ಕೆಲ ಅಧಿಕಾರಿಗಳು ಆ ಕಾಲದಿಂದಲೂ ಈತನ ಪ್ರಸಾದ ತಿಂದು ಈತನ ಉಪಟಳಕ್ಕೆ ಬೆಂಗಾವಲಾಗಿರುವುದೇ ಅಸಲೀ ದುರಂತ.

ಮೂಲತಃ ಬೆಳಗಾವಿ ಜಿಲ್ಲೆಯವನಾದ ಪ್ರಭುಲಿಂಗ ತನ್ನನ್ನು ಅದೇನೆಂದು ತಿಳಿದುಕೊಂಡಿದ್ದಾನೋ ಗೊತ್ತಿಲ್ಲ, ಎಲ್ಲೆಂದರಲ್ಲಿ ತನ್ನ ಹೆಸರನ್ನು ಪ್ರಭುಲಿಂಗ ದೇವರು ಎಂದು ಸ್ವಯಂ ಘೋಷಿಸಿಕೊಂಡಿದ್ದಾನೆ. ಪ್ರಭುಲಿಂಗ ದೇವರು ಉತ್ತರ ಕರ್ನಾಟಕದಲ್ಲಿ ಜನತೆಯ ಮನ್ನಣೆ ಗಳಿಸಿದ್ದ ಜಂಗಮ ರೂಪಿ ಸಂತ. ಅಂಥವರ ಹೆಸರನ್ನು ತಾನು ಅನಧಿಕೃತವಾಗಿ ಬಳಸುತ್ತಾ ಸಂಸ್ಕೃತ ಕಾಲೇಜಿನ ವಿದ್ಯಾರ್ಥಿಗಳ ಹಾಸ್ಟೆಲಿನ ಒಂದು ಕೋಣೆಯನ್ನೇ ಆಕ್ರಮಿಸಿ ಅಲ್ಲಿ ತಾನು ವಾಸ ಮಾಡುತ್ತಿದ್ದಾನೆ. ತಾನು ಅವಿವಾಹಿತನೆಂದೂ ಆಜನ್ಮ ಬ್ರಹ್ಮಚಾರಿಯೆಂದೂ ಫೋಜು ಕೊಡುತ್ತಾನಾದರೂ ಈತನಿಗೆ ಯಾವುದೋ ಕಾಲಕ್ಕೆ ಮದುವೆಯಾಗಿದೆ. ಪ್ರತಿಷ್ಠಿತ ಬಡಾವಣೆಯಾದ ಕೋರಮಂಗಲದಲ್ಲಿ ಮನೆಯೂ ಇದೆ.

ಪ್ರಭುಲಿಂಗನ ಇಷ್ಟೆಲ್ಲಾ ಹಾವಳಿಯ ಆದಾಯ ಮೂಲ ಅಂತಿದ್ದರೆ ಅದು ಬೆಳಗಾವಿ ಜಿಲ್ಲೆಯ ಚಿಕ್ಕನಂದಿ ಗ್ರಾಮದಲ್ಲಿ ಈತ ಹುಟ್ಟುಹಾಕಿರುವ ಸಿದ್ಧಾರೂಢ ದರ್ಶನ ಎಂಬ ಢೋಂಗಿ ಸಂಸ್ಥೆ. ಸುಳ್ಳು ದಾಖಲೆ ಸೃಷ್ಟಿಸಿಕೊಂಡೇ ಈ ಸಂಸ್ಥೆ ಹೆಸರಲ್ಲಿ ಸರ್ಕಾರದಿಂದ ಲಕ್ಷಾಂತರ ರೂಪಾಯಿ ಅನುದಾನ ದೋಚುತ್ತಾನೆ. ಇಲ್ಲಿಗೆ ಹತ್ತುವರ್ಷದ ಹಿಂದೆ ಅಂದರೆ ಇಸವಿ 2000ದಲ್ಲೇ ಕಾಲೇಜಿನ ಸಿಬ್ಬಂದಿ ಈತನ ಗೂಂಡಾಗಿರಿ ವಿರುದ್ಧ ದೂರು ಸಲ್ಲಿಸಿದ್ದರು. ಆವತ್ತು ಇಲಾಖಾ ಮುಖ್ಯಸ್ಥರಿಗೆ ರೊಕ್ಕ ತಿನ್ನಿಸಿ ಇಲಾಖಾ ವಿಚಾರಣೆಯಿಂದ ಹೇಗೋ ಬಚಾವಾದ. ಈಗ ತನ್ನ ರೌಡಿ ಪ್ರವೃತ್ತಿಯನ್ನು ಸಂಸ್ಕೃತ ವಿವಿಗೂ ಹಬ್ಬಿಸುತ್ತಿದ್ದಾನೆ.

ದುರಂತವೆಂದರೆ ಇಂಥ ಗೂಂಡಾ ಬುದ್ಧಿಯ ಪ್ರಭುಲಿಂಗ ಸಂಸ್ಕೃತ ಅಧ್ಯಾಪಕರ ಸಂಘದ ರಾಜ್ಯ ಅಧ್ಯಕ್ಷ. ಅಧ್ಯಾಪಕರಿಗೆ ತನ್ಮೂಲಕ ಸಕಲ ಸಂಸ್ಕೃತ ಶಿಕ್ಷಾರ್ಥಿಗಳಿಗೆ ಆದರ್ಶಪ್ರಾಯನಾಗಬೇಕಿತ್ತು, ಬದಲಿಗೆ ತಾನೇ ಅನಾಗರಿಕ ಪರಂಪರೆ ಹುಟ್ಟು ಹಾಕಿದ್ದಾನೆ. ಕುಲಸಚಿವ ಮಲ್ಲೇಪುರಂ ಕನಿಷ್ಠ ಈಗಲಾದರೂ ಈತನನ್ನು ವಿದ್ಯಾರ್ಥಿಗಳ ಹಾಸ್ಟೆಲ್‌ನಿಂದ ರಿಕಾಣಿ ಎಬ್ಬಿಸಬೇಕು. ಈತನ ಗೂಂಡಾಗಿರಿ, ದಬ್ಬಾಳಿಕೆಯ ವಿರುದ್ಧ ಕ್ರಮಕೈಗೊಂಡು ಇಲ್ಲಿನ ಸಿಬ್ಬಂದಿಯನ್ನು ರಕ್ಷಿಸಬೇಕು. ಸಂಸ್ಕೃತ ಅಧ್ಯಾಪಕರ ಸಂಘದ ಅಧ್ಯಕ್ಷನೆಂದು ಕೇಸರಿ ಋಣಕ್ಕೆ ಬಿದ್ದು ಬಿಜೆಪಿ ಸರ್ಕಾರವೇನಾದರೂ ಈತನ ರಕ್ಷಣೆಗೆ ನಿಂತಿತೆಂದರೆ ಮುಂದೊಮ್ಮೆ ಸಂಸ್ಕೃತ ವಿವಿಯೇ ಅಸಂಸ್ಕೃತರ, ಅನಾಗರಿಕರ ಅಡ್ಡೆಯಾಗುವುದು ಶತಸಿದ್ಧ.

–ರಾ.ಸೋ.

ಡಿ.ಕೆ. ಸೂರಿಗ್ಯಾಕೆ ಸೆಕ್ಯುರಿಟಿ?


ಕನಕಪುರದ ಡಿಫ್ಯಾಕ್ಟೋ ಎಂಎಲ್‌ಎ, ಡಿಕೆ ಸಾಮ್ರಾಜ್ಯದ ಯುವ ರಾಜ ಡಿ.ಕೆ. ಸುರೇಶ್‌ಗೆ ಯಾರಿಂದಲಾದರೂ ಬೆದರಿಕೆ ಇದೆಯಾ?

ಹೌದೆಂದು ಖಚಿತವಾಗಿ ಯಾರೂ ಹೇಳುತ್ತಿಲ್ಲ. ಆದರೂ ಸೂರಿ ಸುತ್ತಾ ಈಗ ನಾಲ್ವರು ಸೆಕ್ಯುರಿಟಿ ಗಾರ್ಡ್‌ಗಳು ಕಾಣಿಸಿಕೊಂಡಿದ್ದಾರೆ. ಇವರೆಲ್ಲಾ ಖಾಸಗಿ ಬಾಡಿಗಾರ್ಡ್‌ಗಳು.

ಏನಿದರ ಮರ್ಮ?

ಒಂದೋ ಬೆದರಿಕೆ ಇದೆಯಾದ್ದರಿಂದ ಸೂರಿ ಸೆಕ್ಯುರಿಟಿ ಅರೇಂಜ್ ಮಾಡಿಕೊಂಡಿದ್ದಾನೆ ಅಥವಾ ಸೆಕ್ಯುರಿಟಿ ಇಟ್ಟುಕೊಂಡಿರುವುದನ್ನು ನೋಡಿದರೆ ಈ ಸೂರಿಗೆ ಯಾರಿಂದಲೋ ಎಂತದೋ ಡೇಂಜರ್ ಇದೆ ಅನ್ನುವ ಅರ್ಥವೂ ಬರುತ್ತದೆಯಲ್ಲವೆ?

ಇವೆರಡರಲ್ಲಿ ಸತ್ಯ ಯಾವುದೇ ಇರಲಿ, ಆದರೆ ಈ ಸೂರಿ ಸೆಕ್ಯುರಿಟಿ ಸ್ಟೋರಿಯ ಹಿಂದೆ ಕೆಲವು ಉಪಕತೆಗಳು ಕೇಳಿಬರುತ್ತಿವೆ. ಅದರಲ್ಲಿ ಮೊದಲ ರೂಮರ್ ಹೀಗಿದೆ. ಕೆಲ ದಿನಗಳ ಹಿಂದೆ ಬೆಂಗಳೂರಿನ ಸಿಸಿಬಿ ಪೊಲೀಸರು ಕನಕಪುರದ ಕೋಟೆಕೊಪ್ಪ ವಾಸಿ ಚಿಕ್ಕರಾಜ ಎನ್ನುವವನನ್ನು ಎಳೆದುಕೊಂಡು ಹೋಗಿದ್ದರಂತೆ. ಜನತಾದಳದ ಗ್ರಾಮ ಪಂಚಾಯತಿ ಸದಸ್ಯನಾಗಿರುವ ಚಿಕ್ಕರಾಜ ಯಾವಾಗಲೋ "ನೋಡೋತಂಕ ನೋಡಿ ಆಮೇಲೆ ಸೂರಿನ ಶೂಟ್ ಮಾಡಿಬಿಡ್ತೀನಿ" ಅಂದಿದ್ದ ಎನ್ನಲಾಗಿದೆ. ಈ ತಲೆ ಕೆಟ್ಟವನ ಮಾತು ಅವರಿವರ ಕಿವಿಗೆ ಬಿದ್ದು ಕೊನೆಗೆ ಪೊಲೀಸರ ತನಕ ಹೋಯಿತು ಎನ್ನಲಾಗಿದೆ. ಚಿಕ್ಕರಾಜನನ್ನು ಎತ್ತಾಕಿಕೊಂಡು ಹೋದ ಪೊಲೀಸರು ವಿಚಾರಣೆ ನಡೆಸಿ ತಲೆಮೇಲೆ ನಾಲ್ಕು ಬಾರಿಸಿ ಓಡಿಸಿದರೆಂತಲೂ ಹೇಳಲಾಗುತ್ತಿದೆ.



ಆದರೆ ಬೆಂಗಳೂರಿನ ಮಾಫಿಯಾ ಹುಡುಗರು 'ಚಿಕ್ಕರಾಜ'ನ ಬಗ್ಗೆ ಬೇರೆಯೇ ಕತೆ ಹೇಳುತ್ತಿದ್ದಾರೆ. ಅದು ದಿವಾನ್ ಆಲಿ ಕೊಲೆಗೆ ಸಂಬಂಧಿಸಿದ್ದು.

ಕಳೆದ ಬಾರಿಯ ಜಿಲ್ಲಾ ಪಂಚಾಯತಿ, ಗ್ರಾಮ ಪಂಚಾಯತಿ ಎಲೆಕ್ಷನ್ ಆದಾಗ ಈ ದಿವಾನ್ ಆಲಿಯ ಕಡೆಯವನೊಬ್ಬ ಕೋಡಿಹಳ್ಳಿ ಕ್ಷೇತ್ರದಿಂದ ಜಿಪಂಗೆ, ಜೆಡಿಎಸ್‌ನಿಂದ ನಿಂತಿದ್ದ. ಕಾಂಗ್ರೆಸ್‌ನ ಭದ್ರಕೋಟೆಯಾಗಿರುವ ಕೋಡಿಹಳ್ಳಿಗೆ ಆಗ ದಿವಾನ್ ಆಲಿ, ಶಾಸಕ ಜಮೀರ್ ಅಹಮದ್ ಎಲ್ಲಾ ದಾಂಗುಡಿಯಿಬಿಟ್ಟಿದ್ದರು. ಅವತ್ತು ಕೆಲವು ಬಾಯಿಬಡುಕರು ಡಿ.ಕೆ. ಶಿವಕುಮಾರ್ ಹಾಗೂ ಸೂರಿ ಬಗ್ಗೆ ಬೀದಿಜಗಳ ಆಡುವವರಂತೆ ಉಡಾಫೆಯ ಮಾತಾಡಿದ್ದರು. ಆದಾದ ಕೆಲ ವಾರಗಳಲ್ಲೇ ಬೆಂಗಳೂರಿನಲ್ಲಿ ಆಲಿ ಹತನಾದ. ಆಗ ಕೆಲವರು ಆಲಿ ಕೊಲೆಗೆ ಸೂರಿ ಹೆಸರು ತಳುಕು ಹಾಕಲು ನೋಡಿದ್ದರು. ಈಗಿನ ರೂಮರ್ ಏನೆಂದರೆ ಪರಪ್ಪನ ಅಗ್ರಹಾರ ಜೈಲಿನಲ್ಲಿರುವ ಕೆಲವರು ಆಲಿ ಬಂಟರು 'ಸೂರಿ ಮುಗಿಸಲು ಯಾರಿಗೋ ಸೂಪಾರಿ ಕೊಟ್ಟಿದ್ದರಂತೆ" ಎಂತಲೂ, ಚಿಕ್ಕರಾಜನ ಕೈಗೆ ರಿವಾಲ್ವಾರ್ ತಲುಪಿಸಿ ಅದನ್ನು ಸುಪಾರಿ ಕಿಲ್ಲರ್‌ಗಳ ಕೈಗೆ ತಲುಪಿಸಲು ಹೇಳಿದ್ದರೆಂತಲೂ ಇದೆ.

ಸಿಸಿಬಿ ಪೊಲೀಸರಿಗೆ ಈ ಸುದ್ದಿ ಗೊತ್ತಾಗಿ ಅವರು ಚಿಕ್ಕರಾಜನನ್ನು ಎಳೆದೊಯ್ದರಂತೆ!

ಇತ್ತ ಬೆಂಗಳೂರಿನ ಡಿಕೆ ಮನೆಯ ವಾತಾವರಣ ನೋಡಿದರೆ ಅಂತಾ ವಿಶೇಷವೇನೂ ಕಾಣುತ್ತಿಲ್ಲ. ಈಗ ಸೂರಿಯ ಬೆನ್ನಿಗಿರುವ ಬಾಡಿಗಾರ್ಡ್‌ಗಳು ಡಿಕೆಯ ಅಮೆರಿಕನ್ ನೆಂಟನ ಸೆಕ್ಯುರಿಟಿ ಏಜೆನ್ಸಿಯ ಹುಡುಗರು. ಸದಾ ಡಿಕೆ ಜೊತೆಗೆ ಓಡಾಡಿಕೊಂಡಿರುತ್ತಿದ್ದ ಆ ಹುಡುಗರಿಗೆ ಅಂತಾ ವಿಶೇಷ ಕೆಲಸಗಳೇನು ಇರಲಿಲ್ಲ. ಹಾಗಾಗಿ ಯಾವುದಕ್ಕೂ ಇರಲೆಂದು ಡಿಕೇನೆ "ಸೆಕ್ಯೂರಿಟಿ ಕರಕೊಂಡು ಓಡಾಡು' ಎಂದು ಸೂರಿಗೆ ಹೇಳಿದ್ದಾರಂತೆ.

ಈ ಸೂರಿ ಮಹಾನ್ ಚಾಲಾಕಿ ರಾಜಕಾರಣಿ. ಒಂದು ವಿಧಾನಸಭಾ ಕ್ಷೇತ್ರವನ್ನು ಹೇಗೆ ಹ್ಯಾಂಡಲ್ ಮಾಡಬೇಕೆಂಬುದು ಅವನಿಗೆ ಗೊತ್ತು. ಕನಕಪುರದಲ್ಲಿ ಹುಟ್ಟುವ ಯಾವ ರಾಜಕೀಯ ಜಗಳವೂ ಪ್ರಾಣಹಾನಿಯಾಗುವ ಲೆವೆಲ್‌ಗೆ ಹೋಗದಂತೆ ನೋಡಿಕೊಳ್ಳುವ ಜನರಿದ್ದಾರೆ.

ಸದ್ಯಕ್ಕೆ ಸೂರಿ ಸೆಕ್ಯೂರಿಟಿ ಬಗ್ಗೆ ಊಹಿಸಲು ಎರಡು ಕಾರಣಗಳಿವೆ.

ಒಂದೋ, ನಿಜಕ್ಕೂ ಯಾರಿಂದಲಾದರೂ ಬೆದರಿಕೆ ಬಂದು ಟೆಂಪರರಿಯಾಗಿ ಸೂರಿ ಬಾಡಿಗಾರ್ಡ್‌ಗಳನ್ನು ಇಟ್ಟುಕೊಂಡಿರಬಹುದು.

ಅಥವಾ ಇದು ಸುಮ್ಮನೆ show-off ಆಗಿರಲಿಕ್ಕೂ ಸಾಕು.

ಇದನ್ನೆಲ್ಲಾ ಮೀರಿದ ತಮಾಷೆ ಏನೆಂದರೆ "ಕನಕಪುರದ ಕಾಂಗ್ರೆಸ್‌ನವರು ಕೊಡುತ್ತಿರುವ ಕಾಟ, ಕಣ್ಣಿಗೆ ಬಿದ್ದ ತಕ್ಷಣ ಅರ್ಜೆಂಟಾಗಿ ಕಾಸು ಕೇಳುವ ಕಾರ್ಯಕರ್ತರಿಂದ ತಪ್ಪಿಸಿಕೊಳ್ಳಲೆಂದೇ ಸೂರಿ ಈ ಸೆಕ್ಯೂರಿಟಿ ಅರೇಂಜ್ ಮಾಡಿಕೊಂಡಿದ್ದಾನೆ" ಎನ್ನುವ ರೂಮರ್.

ಅಂದಹಾಗೆ ಇದು ಜನತಾದಳದವರ ಮಾತು. ●

ಸಂಸದ ಪ್ರಹ್ಲಾದ್ ಜೋಶಿ ಸೋದರನ ಕೈವಾಡ
ಕೆನರಾ ಬ್ಯಾಂಕಿಗೆ 50 ಲಕ್ಷ ವಂಚನೆ!

ಧಾರವಾಡದ ಬಿಜೆಪಿ ಸಂಸದ ಪ್ರಹ್ಲಾದ ಜೋಶಿ ಮತ್ತವನ ಅಣ್ಣ ಗೋಪಾಲ ಜೋಶಿ ಸೇರಿಕೊಂಡು ಕೆನರಾ ಬ್ಯಾಂಕಿಗೆ ಅನಾಮತ್ತು 50 ಲಕ್ಷ ರೂಪಾಯಿಗಳ ಉಂಡೆ ನಾಮ ತಿಕ್ಕಿ ಸಿಕ್ಕಿಬಿದ್ದಿರುವ ಪ್ರಕರಣ ಇದು.


ಮಂಕಿ ಬ್ರಾಂಡ್ ಕಸಬರಿಕೆ ತಯಾರು ಮಾಡಿ ಮಾರುತ್ತಾ ಈಗ ರಾಜಕಾರಣಿಯೂ ಆಗಿರುವ ಪ್ರಹ್ಲಾದ ಜೋಶಿ ಅಂಡ್ ಬ್ರದರ್ಸ್ ಅದೇ ಪರಕೆ ಹಿಡಿದು ಬ್ಯಾಂಕಿನ ಹಣವನ್ನು ಗುಡಿಸಿ ಗುಂಡಾಂತರ ಮಾಡಲು ಯತ್ನಿಸಿ ಈಗ ಸಿಕ್ಕಿಬಿದ್ದಿದ್ದಾರೆ.

ಇವರ ಬೇನಾಮಿ ವ್ಯವಹಾರದಲ್ಲಿ ಸಿಲುಕಿದ ಕೆನರಾ ಬ್ಯಾಂಕ್ 50 ಲಕ್ಷ ಕಳೆದುಕೊಂಡು ಇಂಗು ತಿಂದ ಮಂಗನಾಗಿದೆ.

ಈ ಮಂಕಿ ಬ್ರಾಂಡ್ ಸೋದರರ ಪೈಕಿ ಪ್ರಹ್ಲಾದ್ ಜೋಶಿ ಬಿಜೆಪಿಯ ಸಂಸದನಾದರೆ ಈತನ ಅಣ್ಣ ಗೋಪಾಲ ಜೋಶಿ ಧಾರವಾಡದ ಕೆನರಾ ಬ್ಯಾಂಕಿನ ಮುಖ್ಯ ಶಾಖೆಯಲ್ಲಿ ಸ್ಕೇಲ್ ಒನ್ ಆಫೀಸರ್ ಆಗಿದ್ದ. ಇವರಿಬ್ಬರೂ ಸೇರಿಕೊಂಡು ನಡೆಸಿರುವ ಬೇನಾಮಿ ವ್ಯವಹಾರವು ಕೆನರಾ ಬ್ಯಾಂಕಿನ ಅತಿ ದೊಡ್ಡ ವಂಚನೆಯ ಘಟನೆಯಾಗಿ ಈಗ ತನಿಖೆಯಾಗುತ್ತಿದೆ.

50 ಕೋಟಿ ರೂಪಾಯಿ ಬೇನಾಮಿ ಠೇವಣಿ

ಗೋಪಾಲ ಜೋಶಿ ಕಳೆದ ಎರಡು ವರ್ಷಗಳಿಂದ ಧಾರವಾಡದ ಮಾರ್ಕೆಟ್ ಬ್ರಾಂಚ್‌ನಲ್ಲಿ ಸ್ಕೇಲ್ ಒನ್ ಆಫೀಸರ್ ಆಗಿದ್ದಾನೆ. ಅಲ್ಲಿ ಇತ್ತೀಚಿನವರೆಗೂ ಬ್ಯಾಂಕ್‌ನ ಸರ್ಕಲ್ ಚೀಫ್ ಅಥವಾ ಡೆಪ್ಯೂಟಿ ಜನರಲ್ ಮ್ಯಾನೇಜರ್ ಆಗಿದ್ದವನು ಜಯಪ್ರಕಾಶ್ ಎಂಬಾತ. 2010 ರ ಮಾರ್ಚ್‌ನಲ್ಲಿ ಏನಾಯಿತೆಂದರೆ ಹಣಕಾಸು ವರ್ಷದ ಅಂತ್ಯ ಸಮೀಪಿಸುತ್ತಿದ್ದಾಗ ಆ ಹಣಕಾಸು ವರ್ಷದ ಠೇವಣಿಯ ಗುರಿ ಸಾಧಿಸಲು ಇವರಿಬ್ಬರೂ ಒಂದು ಕಳ್ಳ ಮಾರ್ಗ ಹಿಡಿದರು. ಅದರಂತೆ ಯಾರೋ ಕೆಲವರ ಬೇನಾಮಿ ಹೆಸರುಗಳಲ್ಲಿ ಅನಾಮತ್ತು ಐವತ್ತು ಕೋಟಿ ರೂಪಾಯಿಗಳಷ್ಟು ಹಣ ಡಿಪಾಸಿಟ್ ಆಗಿ ಬ್ಯಾಂಕಿಗೆ ಬಂದು ಬಿತ್ತು. ಇಷ್ಟು ದೊಡ್ಡ ಮೊತ್ತದ ಹಣವು ಕೆನರಾ ಬ್ಯಾಂಕ್‌ನ ಧಾರವಾಡ ಸರ್ಕಲ್‌ನ ಗದಗ, ಹುಬ್ಬಳ್ಳಿ ಹಾಗೂ ಧಾರವಾಡದ ಕೆನರಾ ಬ್ಯಾಂಕ್‌ನ ವಿವಿಧ ಬ್ರಾಂಚ್‌ಗಳಿಗೆ ಐದು ಕೋಟಿ, ಹತ್ತು ಕೋಟಿ ರೂಪಾಯಿಗಳ ಲೆಕ್ಕದಲ್ಲಿ ಠೇವಣಿಯಾಗಿ ಬಂದು ಬಿದ್ದಿತ್ತು. ಇಷ್ಟು ದೊಡ್ಡ ಮೊತ್ತದ ಹಣ ಡಿಪಾಸಿಟ್ ಇಟ್ಟವರೆಲ್ಲಾ ಸಂಸದ ಪ್ರಹ್ಲಾದ ಜೋಶಿಯ ಬೇನಾಮಿಗಳಾಗಿರಬಹುದೆಂಬ ಅನುಮಾನ ಈಗ ಬ್ಯಾಂಕ್‌ನವರಿಗೆ ಬಂದಿದೆ.



ಪ್ರಹ್ಲಾದ ಜೋಶಿ

ಅದೊಂದೆಡೆ ಇರಲಿ, ಇಲ್ಲಿ ಬ್ಯಾಂಕಿಗೆ ವಂಚನೆ ಹೇಗಾಯಿತೆಂದರೆ ಈ ಐವತ್ತು ಕೋಟಿ ರೂ.ಗಳ ಠೇವಣಿಗೆ ಕಿಕ್‌ಬ್ಯಾಕ್ ರೂಪದಲ್ಲಿ 50 ಲಕ್ಷ ರೂಪಾಯಿಯಷ್ಟು ಹಣವನ್ನು ಅಕ್ರಮವಾಗಿ ಕೈಬದಲು ಮಾಡಲಾಗಿದೆ.

ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ನ ಠೇವಣಿ ನಿಯಮಗಳಿಗೆ ವಿರುದ್ಧವಾಗಿ ಈ ಹಣಪಾವತಿ ಮಾಡಲಾಗಿದೆ. ಬ್ಯಾಂಕ್ ಪರಿಭಾಷೆಯಲ್ಲಿ ಇದನ್ನು **interest paid account** ಎನ್ನಲಾಗುತ್ತದೆ. ಏನಾಯಿತೆಂದರೆ ಐವತ್ತು ಕೋಟಿ ಹಣ ಡಿಪಾಸಿಟ್ ಆಗಿ ಬಂದನಂತರ ಹುಬ್ಬಳ್ಳಿಯ ಕೆನರಾ ಬ್ಯಾಂಕ್ ಶಾಖೆಯಿಂದ ಧಾರವಾಡ ಮೈನ್ ಬ್ರಾಂಚ್‌ಗೆ ಒಂದು ಇ-ಮೇಲ್ ಕಳುಹಿಸಿ ಹಣ ಡಿಪಾಸಿಟ್ ಮಾಡಿಸಿರುವ ಬಾಬ್ತು 50 ಲಕ್ಷ ರೂಪಾಯಿಗಳನ್ನು ಬಡ್ಡಿ ಹೆಸರಿನಲ್ಲಿ ಪಾವತಿಸುವಂತೆ ಆದೇಶ ಕಳುಹಿಸಲಾಗಿದೆ.

ವಾಸ್ತವದಲ್ಲಿ ಅದು ಕಿಕ್‌ಬ್ಯಾಕ್ ಆಗಿತ್ತು.

ಈ ಇ-ಮೇಲ್ ಧಾರವಾಡ ಬ್ರಾಂಚ್‌ನ ಜರಿಮಲ್ಲೈ ಎಂಬ ಸ್ಪೆಷಲ್ ಅಸಿಸ್ಟೆಂಟ್ ಕೈಗೆ ತಲುಪಿ ಅಲ್ಲಿಂದ ಮುಂದೆ ಕಿಕ್‌ಬ್ಯಾಕ್ ಹಣ ಬೇನಾಮಿಗಳ ಕೈಗೆ ತಲುಪಿದೆ.

ಈ ಇಡೀ ಡೀಲ್‌ನ ಹಿನ್ನೆಲೆ ಏನೆಂದರೆ "ನಾವ್ ಐವತ್ತು ಕೋಟಿ ರೂಪಾಯಿ ಡಿಪಾಸಿಟ್ ಇಟ್ಟರೆ ನಮಗೇನು ಕೊಡ್ತೀರಿ?" ಎಂದು ಹಣ ಇಟ್ಟವರು ಕೇಳಿದ್ದಾರೆ.

ನೆನಪಿಡಿ, 'ನಮಗೇನು ಕೊಡ್ತೀರಿ' ಎಂಬ ಪ್ರಶ್ನೆ ಡಿಪಾಸಿಟ್ ಒಂದಕ್ಕೆ ಬ್ಯಾಂಕ್ ಕೊಡಬಹುದಾದ ನಿಯಮಾನುಸಾರದ ಬಡ್ಡಿ ಹಣ ಹೊರತುಪಡಿಸಿದ ವಿಚಾರವಾಗಿತ್ತು. ಆಗ ಸಂಸದ ಪ್ರಹ್ಲಾದ್ ಜೋಶಿಯ ಅಣ್ಣ ಗೋಪಾಲ್ ಜೋಶಿ ಹಾಗೂ ಡಿಜಿಎಂ ಜಯಪ್ರಕಾಶ್ ಶಾಮೀಲಾಗಿ ಬ್ಯಾಂಕಿನ ಡಿಪಾಸಿಟ್ ನಿಯಮವೊಂದರ ದುರ್ಬಳಕೆ ಮಾಡಿಕೊಂಡು 50 ಲಕ್ಷ ರೂಪಾಯಿಗಳನ್ನು ಬಡ್ಡಿ ಪಾವತಿಸಿದಂತೆ ಕಳ್ಳಲೆಕ್ಕ ತೋರಿಸಿ ಬ್ಯಾಂಕಿಗೇ ವಂಚಿಸಿಬಿಟ್ಟರು.

ಈ ಕಳ್ಳತನದ ವಿಚಾರ ಕಳೆದ ಎರಡು ತಿಂಗಳ ಹಿಂದಿನವರೆಗೂ ಯಾರಿಗೂ ಗೊತ್ತಾಗಿರಲಿಲ್ಲ. ಆದರೆ 2010-11 ರ ಆರ್ಥಿಕ ವರ್ಷ ಕೊನೆಗೊಂಡ ನಂತರ ಕೆನರಾ ಬ್ಯಾಂಕ್‌ನಲ್ಲಿ ಆಂತರಿಕ ಆಡಿಟ್ ನಡೆಸುವ ಅಧಿಕಾರಿಗಳು ಬಂದರು. ಅವರಿಗೆ ಈ **interest paid account** ಮೂಲಕ ಯಾರ್‍ಯಾರೋ ಬೇನಾಮಿಗಳಿಗೆ 50 ಲಕ್ಷ ರೂಪಾಯಿಗಳನ್ನು ಅಕ್ರಮವಾಗಿ ನೀಡಿರುವುದು ಕಾಣಿಸಿತು. ಈ ನಡುವೆ ಕಳ್ಳತನಕ್ಕೆ ಸಹಕರಿಸಿದ್ದ ಡಿಜಿಎಂ ಜಯಪ್ರಕಾಶ್ ಆತುರಾತುರವಾಗಿ ಹೈದರಾಬಾದಿಗೆ ವರ್ಗಾ ಮಾಡಿಸಿಕೊಂಡು ಪರಾರಿಯಾಗಿದ್ದ. ಈ ಕೇಸ್‌ನ ಬೆನ್ನುಹತ್ತಿ ತನಿಖೆ ನಡೆಸಿದ ಆಡಿಟರ್‌ಗಳಿಗೆ ಗೋಪಾಲ್ ಜೋಶಿಯ ಕೈವಾಡ ಸ್ಪಷ್ಟವಾಗಿ ಕಾಣಿಸಿದೆ. ಹಾಗಾಗಿ ಜೋಶಿಯನ್ನು ಈಗ ಬ್ಯಾಂಕ್ ಸಸ್ಪೆಂಡ್ ಮಾಡಿದೆ. ಆದರೆ ಯಾವಾಗ ಆಡಿಟರ್‌ಗಳ ತನಿಖೆ ಶುರುವಾಯಿತೋ ಆಗಲೇ ಗಾಬರಿಯಾದ ಗೋಪಾಲ್ ಜೋಶಿ, ಜಯಪ್ರಕಾಶ್ ಗ್ಯಾಂಗ್ ತಾವು ಅಕ್ರಮವಾಗಿ ಕೊಡಿಸಿದ್ದ 50 ಲಕ್ಷ ರೂಪಾಯಿ ಹಣವನ್ನು ಬ್ಯಾಂಕ್‌ಗೆ ವಾಪಸ್ ಕಟ್ಟಿಸಿಬಿಟ್ಟರು.

ಆದರೂ ಗೋಪಾಲ್ ಜೋಶಿ ಸಸ್ಪೆಂಡಾಗುವುದು ತಪ್ಪಲಿಲ್ಲ. ಈ ನಡುವೆ ಅಕ್ರಮ ಬಡ್ಡಿ ಪಾವತಿಗೆ ಇ-ಮೇಲ್ ಮೂಲಕ ನೀಡಿದ್ದ ಆದೇಶವನ್ನು ಬೇಕೆಂತಲೆ ಕಂಪ್ಯೂಟರ್ ದಾಖಲೆಗಳಲ್ಲಿ ಈಗ ನಾಶ ಮಾಡಿದ್ದಾರೆ. ಆದರೆ ಸ್ಪೆಷಲ್ ಅಸಿಸ್ಟೆಂಟ್ ಜರಿಯಲ್ ಬಳಿ ಅದರ ಪ್ರಿಂಟ್‌ಔಟ್‌ಗಳಿವೆ. ತನಿಖಾಧಿಕಾರಿಗಳು ಕೇವಲ ಗೋಪಾಲ್ ಜೋಶಿಗೆ ಮಾತ್ರವಲ್ಲ ಡಿಜಿಎಂ ಆಗಿದ್ದ ಜಯಪ್ರಕಾಶ್ ಕೈವಾಡದ ಬಗ್ಗೆಯೂ ಸರಿಯಾದ ತನಿಖೆ ನಡೆಸಿ ಶಿಕ್ಷಿಸಬೇಕಿದೆ.

ಇನ್ನೊಂದು ಖಚಿತ ಮಾಹಿತಿಯ ಪ್ರಕಾರ 2010-11 ರ ಹಣಕಾಸು ವರ್ಷದ ಕೊನೆಯ ದಿನಗಳಲ್ಲೂ ಅದೇ ಕೆನರಾ ಬ್ಯಾಂಕ್‌ನ ಧಾರವಾಡದ ಶಾಖೆಗಳಲ್ಲಿ ಏಕಾಏಕಿ 15 ಕೋಟಿ ರೂಪಾಯಿ ಡಿಪಾಸಿಟ್ ಬಂದಿದೆ ಹಾಗೂ ಅದರ ಬಾಬ್ತು ಕಿಕ್‌ಬ್ಯಾಕ್ ಆಗಿ ಹದಿನೈದು ಲಕ್ಷ ರೂಪಾಯಿಗಳನ್ನು ಕಾನೂನುಬಾಹಿರವಾಗಿ ಕೆಲ ಬೇನಾಮಿ ವ್ಯಕ್ತಿಗಳಿಗೆ ಕೊಡಲಾಗಿದೆ ಎನ್ನಲಾಗಿದೆ.

ಕೆನರಾ ಬ್ಯಾಂಕ್‌ನ ಮೇಲಧಿಕಾರಿಗಳು ಈ ಅಕ್ರಮ ಡಿಪಾಸಿಟ್ ಹಾಗೂ ಕಾನೂನುಬಾಹಿರ ಕಿಕ್‌ಬ್ಯಾಕ್ ಬಡ್ಡಿ ಪಾವತಿ ದಂಧೆ ಬಗ್ಗೆ ಖಡಕ್ಕಾದ ತನಿಖೆ ನಡೆಸಲಿ. ಅಲ್ಲದೆ ಬ್ಯಾಂಕ್ ಆಫೀಸರ್ ಆಗಿದ್ದ ಗೋಪಾಲ್ ಜೋಶಿಗೂ ಅವನ ಸೋದರ ಪ್ರಹ್ಲಾದ ಜೋಶಿಗೂ ಬೇನಾಮಿ ಹೆಸರಲ್ಲಿ ಡಿಪಾಸಿಟ್ ಆಗಿದ್ದ 50 ಕೋಟಿ ರೂಪಾಯಿಗಳಿಗೂ ಯಾವ ರೀತಿಯ ಲಿಂಕ್ ಇವೆ ಎಂಬುದನ್ನು ತನಿಖೆ ಮಾಡಿಸಲಿ. ●

ಅಂಗಾದ್ರೆ ದಿವಂಗತ ಸಿದ್ಲಿಂಗಯ್ಯ ಅನ್ನಬವುದೇ?

ಬಿಜೆಪಿ ಸರ್ಕಾರವೆಂಬ ಹುಚ್ಚಾಸ್ಪತ್ರೆಯೊಳಗೆ ಕರ್ನಾಟಕ ರತ್ನ ಎಂಬ ಪ್ರಶಸ್ತಿಯನ್ನು ಹಂಚಲಾಯ್ತಂತಲ್ಲಾ. ಈ ಪೈಕಿ ವೀರೇಂದ್ರ ಹೆಗ್ಗಡೆಯೇನೋ ದಕ್ಷಿಣ ಕನ್ನಡದವರಿಗೆ ರತ್ನವೇ ಆಗಿ, ಮಂಜುನಾಥನ ಹುಂಡಿ ದುಡ್ಡನ್ನ ಭಕ್ತಾದಿಗಳಿಗೇ ಹಂಚುತ್ತಾ, ಜೊತೆಗೆ ತಮ್ಮ ಇಡೀ ಪರಿವಾರವೇ ರಾಜವೈಭೋಗದಲ್ಲಿ ಮೆರೆಯುತ್ತ, ಆ ಕಾಲದ ಹಂಪಾನ ಎಂಬ ಸಾಹಿತ್ಯದ ಪರಿಚಾರಕನ ಪ್ರಭಾವದಿಂದ ಸಾಹಿತ್ಯ ಸಮ್ಮೇಳನಗಳಲ್ಲೂ ಕಾಣಿಸಿಕೊಂಡು, ತಾನೂ ಕೂಡ ಯಾವ ಜೈನ ಸಾಹಿತಿಗೂ ಕಡಿಮೆಯಿಲ್ಲವೆಂಬ ಭ್ರಮೆಯಲ್ಲಿ ಮೆರೆದಿದ್ದಿದೆ. ಇವರಿಗೆ ಕರ್ನಾಟಕ ರತ್ನ ಎಂಬ ಪ್ರಶಸ್ತಿಗಿಂತಲೂ ದ.ಕ.ರತ್ನ ಪ್ರಶಸ್ತಿ ಕೊಡಬೇಕಿತ್ತೆಂದು ಘಟ್ಟದ ಮೇಲಿನ ಗಡವರು ಆಡಿಕೊಳ್ಳುತ್ತಿರಬೇಕಾದರೆ, ಮತ್ತೊಬ್ಬ ರತ್ನ ಪ್ರಶಸ್ತಿ ಫಲಾನುಭವಿ ದೇಜಗೌ ಕುವೆಂಪುಗೆ ಶನಿಯಂತೆ ಗಂಟುಬಿದ್ದು, ಅವರ ಕೃಪಾಕಟಾಕ್ಷದಿಂದಲೇ ಮೇಲೆ ಬಂದು, ಅವರ ಮೇಲೆ ಬಿದ್ದು ಆಸ್ತಿ ಅಡವು ಮಾಡಿಕೊಂಡು, ಭ್ರಷ್ಟ ಮಗನ ಪರ ಉಪವಾಸ ವನವಾಸವನ್ನೆಲ್ಲಾ ಮಾಡಿ, ಕನ್ನಡದ ಮರ್ಯಾದಸ್ಥರ ಮನಸ್ಸಿನಿಂದ ವನವಾಸಕ್ಕೆ ತಳ್ಳಲ್ಪಟ್ಟಿದ್ದಾರಲ್ಲಾ, ಈ ಕನ್ನಡದ ಕಲಿಗೆ ಕೊಟ್ಟ ಕರ್ನಾಟಕ ರತ್ನ ಪ್ರಶಸ್ತಿ ತನ್ನ ಘನತೆಯನ್ನೇ ಕಳೆದುಕೊಂಡಿದೆ. ಆದ್ದರಿಂದ ಅಂಥ ಪ್ರಶಸ್ತಿಯನ್ನು ಪಾಟೀಲ ಪುಟ್ಟಪ್ಪನವರು ಅಪೇಕ್ಷಿಸುವುದರ ಬದಲು ಯಾವುದಾದರೂ ಲೋಕಲ್ ಪ್ರಶಸ್ತಿ ಕುರಿತೇ ಧ್ಯಾನಿಸುವುದೊಳ್ಳೆಯದೆಂದು ಚಂಪಾ ಕಡೆಯ ಕಿಡಿಗೇಡಿಗಳು ಕುಹಕವಾಡುತ್ತಿವೆಯಂತಲ್ಲಾ, ಥೂತ್ತೇರಿ!

ಥೂತ್ತೇರಿ

ಯಾಹೂ

*****

ನಾವು ಬರೆಯುತ್ತಿರುವಂತೆ ಬದುಕಬೇಕೆ; ಅಥವಾ ಬದುಕೇ ಬೇರೆ, ಬರಹವೇ ಬೇರೆಯೇ, ಬರೆದಂತೆ ಬದುಕಬೇಕೆಂಬ ನಿಯಮವೆಲ್ಲಿದೆ- ಎಂದು ಠೇಂಕರಿಸುತ್ತಲೇ ರೀಮುಗಟ್ಟಲೇ ಬರೆಯುತ್ತಿರುವ ಭಂಡಬಾಳಿನವರ ಬಗ್ಗೆ ಯೋಚಿಸುತ್ತ ಗಡ್ಡ ಕೆರೆಯುತ್ತಿರಬೇಕಾದರೆ ದಲಿತ ಕವಿ ಸಿದ್ದಲಿಂಗಯ್ಯನವರ ಕುರುಚಲು ಗಡ್ಡ ನೆನಪಾಯ್ತು. ಈ ಸಮಯದ ಜಟಿಲತೆಯಿಂದ ಪಾರಾಗಲು ಅವರಿಗೇ ಫೋನೆತ್ತಿಕೊಂಡರೆ ರಿಂಗಾಯ್ತು.

ರಿಂಗ್‌ಟೋನ್: "ಬರುತಿಹೆವು ನಾವು ಬರುತಿಹೆವು, ಬರುತಿಹೆವು ನಾವು ಬರುತಿಹೆವು...."

"ಹಲೋ ಯಾರೂ?"

"ನಾನು ಸಾರ್ ಯಾಹೂ ಅಂತ."

"ಓಹೋ, ನಮ್ಮ ಗೌರು ಪತ್ರಿಕೆ ಯಾಹೂರವರೆ?"

"ಹೌದು ಸಾರ್ ನಾನೆ."

"ಆರಾಮಾಗಿ ಚೆನ್ನಾಗಿದ್ದೀರ?"

"ಸಂದಿಲ್ರಿ, ನೀವೇಗಿದ್ದೀರಿ ಸಾರ್?"

"ಚೆನ್ನಾಗಿದ್ದೀನಿ. ಈಗ ಯಾವ ಬ್ಯಾಡ್ ಹ್ಯಾಬಿಟ್ಟೂ ಇಲ್ಲ, ವಾಕ್ ಮಾಡ್ತಿನಿ. ಸರಕಾರ ಹೊಸ ಕಾರು ಕೊಟ್ಟದೆ. ಅದರಲ್ಲಿ ಅಲ್ಲಿಇಲ್ಲಿ ಹೋಗಿ ಬರ್ತೀನಿ. ನಾನು ಕೇಳದೆಯಿದ್ರೂ ಅಧಿಕಾರಿಗಳು ಹಣ್ಣುಹಂಪಲು ಕೊಡ್ತರೆ, ಬೇಡ ಅಂದ್ರೂ ಕೆಲವರು ಇನ್ನ ಏನೇನೊ ಕೊಡಕ್ಕೆ ಬರ್ತಾರೆ."

"ಕೊಟ್ರೂ ಒಳಗಡೆ ನಗ್ತರೆ, ಆಡಿಕೊಳ್ತರೆ ಸಾರ್."

"ಅದವ್ರ ಸ್ವಭಾವ. ಅದಕ್ಕೆಲ್ಲಾ ನಾವು ತಲೆಕೆಡಿಸಿಕೋಬಾರ್ದು."

"ಅಂಗಂತಿರಾ?"

"ಹೌದು. ನಮ್ಮ ಸುತ್ತಮುತ್ತಲ ಜನ ಆಡಿಕೊಳ್ಳೋದ್ರಲ್ಲೇ ಪರಮಾನಂದ ಪಡ್ತರೆ. ಸಾಮಾನ್ಯರು ಹೋಗಲಿ ಸಾಹಿತಿಗಳು ತುಂಬಾ ಟೀಕೆ ಮಾಡ್ತರೆ. ಅದಕ್ಕೆಲ್ಲಾ ನಾವು ತಲೆಕೆಡಿಸಿಕೊಂಡ್ರೆ ಬದುಕಕ್ಕಾಗಲ್ಲ."

"ಬದುಕಕ್ಕಾಗದೆಯಿರೊ ಅಂತದ್ದು ನಿಮಗೇನೂ ಆಗಿಲ್ಲ, ಹಿಕ್ಕೆಲ್ರಾ ವದಿರ್ಲ, ಈ ನನ ಮಕ್ಕಳ ಚರ್ಮ ಎಬ್ಬಿಸರ್ಲ ಅಂತ ಆ ಎಡೂರಪ್ಪ ಕಡಿಯೋರ ನೋಡಿ ಪದ ಬರಕಂಡು ಹಾಡಿ; ದಲಿತ್ರನ್ನಲ್ಲ ಎತ್ತಿಕಟ್ಟಿದೋರು ನೀವು. ಆದರೆ ಈಗ ಹೋಗಿ ಆ ಎಡೂರಪ್ಪನ್ನೇ ಆಧುನಿಕ ಬಸವಣ್ಣ ಅಂತ ಹೊಗಳಿದ್ದೀರಲ್ಲಾ, ನಿಮಗೇನು ಬಂದದೆ ಸಾರ್ ಆಪತ್ತು?"

"ಅದೇ ನೀವು ತಪ್ಪು ತಿಳಕೊಂಡಿರೋದು. ನಾನೀಗ ಸರಕಾರಿ ಸವಲತ್ತಿನಿಂದ ಬದುಕ್ತಾಯಿರೊ ಜೀವಿ. ಆದ್ರಿಂದ ಮುಖ್ಯಮಂತ್ರಿಗಳಿದ್ದ ಸಭೆಲಿ ಒಂದು ಸರ್ಕಾರಿ ಭಾಷಣ ಮಾಡಬೇಕಿತ್ತು, ಮಾಡಿದೆ. ನನ್ನಂಥ ಒಬ್ಬ ಮನುಷ್ಯ ಎಡೂರಪ್ಪನಂಥವರನ್ನ ಬಸವಣ್ಣನಿಗೆ ಹೋಲಿಸಿ ಭಾಷಣ ಮಾಡಿದೆ ಅಂದ್ರೆ, ತಾವು ಸ್ವಲ್ಪ ಯೋಚಿಸಬೇಕು. ಸದರಿ ಎಡೂರಪ್ಪನವರ ಕಾರ್ಯವೈಖರಿನ ಯಾರಾದ್ರು ದಲಿತರು ಅಧ್ಯಯನ ಮಾಡಿದ್ರೆ ಬಹಳ ಒಳ್ಳೆ ಮಾಹಿತಿಗಳಿವೆ. ಎಡೂರಪ್ಪ ಅಂಬೇಡ್ಕರ್‌ಗೆ ಗೌರವ ಕೊಡೋರಲ್ಲ, ಆದ್ರಿಂದ ಸಂವಿಧಾನಕ್ಕೂ ಕೇರ್ ಮಾಡಲ್ಲ. ಸಾಮಾಜಿಕ ನ್ಯಾಯದ ಪರಿಕಲ್ಪನೆ ಅವರಿಂದ ಬಹಳ ದೂರ. ಆದ್ರಿಂದ ಹಿಂದುಳಿದ ವರ್ಗದ ಶಾಶ್ವತ ಆಯೋಗಕ್ಕೆ ಆತ ಕಾಸಿನ ಕಿಮ್ಮತ್ತನ್ನು ಕೊಡಲಿಲ್ಲ..."

"ಯಾಕೆಂದ್ರೆ, ಅವರನ್ನ ಜೆಡಿಎಸ್ ನೇಮಕ ಮಾಡಿತ್ತು ಅನ್ನೊ ಸಿಟ್ಟಿತ್ತು ಸಾರ್."

"ಯಾರಾದ್ರೂ ನೇಮಕ ಮಾಡ್ಲಿ. ಆ ಸ್ಥಾನದಲ್ಲಿ ಪ್ರಾಮಾಣಿಕರಾಗಿ ಕೆಲಸ ಮಾಡಿದ್ರು ತಾನೇ. ಇನ್ನು ಸಾದ ಲಿಂಗಾಯತರಿಗೆ ಮೀಸಲಾತಿ ಸರ್ಟಿಫಿಕೇಟ್ ಸಿಗೋತರ ನೋಡಿಕೊಂಡ್ರು. ಎಲ್ಲಾ ಯುನಿವರ್ಸಿಟಿಗೆ ಲಿಂಗಾಯತರೇ ಉಪಕುಲಪತಿಗಳಾಗ್ಲಿ ಅಂತ ಮಸಲತ್ತು ನಡೆಸಿದ್ರು. ಹೇಳಹೋದ್ರೆ ಇವರು ಮೂರು ವರ್ಷದಲ್ಲಿ ಮಾಡಿರೊ ಮುನ್ನೂರು ಅನಾಹುತಗಳನ್ನ ಹೇಳಬಹುದು. ಹೀಗಿರುವಾಗ ನನ್ನಂಥ ಶ್ರೇಷ್ಠ ಕವಿಯ ಒಂದು ಸರ್ಕಾರಿ ಭಾಷಣವನ್ನು ನೀವು ಗಂಭೀರವಾಗಿ ಪರಿಗಣಿಸಬಾರದು. ನಾನು ನನ್ನ ಕಾವ್ಯಕ್ರಿಯೆಗೆ ಬದ್ಧನಾಗಿದ್ರೆ ಈ ಸ್ಥಾನವನ್ನು ಪಡಿಯಕ್ಕಾಗ್ತಿರಲಿಲ್ಲ."

"ಅಷ್ಟೊಂದು ಗೌರವಾನ್ವಿತ ಸ್ಥಾನನೆ ಅದು? ಅಲ್ಲಿ ಯಾರಾದ್ರು ಇರತಿದ್ರು. ಕವಿತ್ವಕ್ಕಿಂತ್ಲೂ ಶ್ರೇಷ್ಠವಾದ ಸ್ಥಾನನೆ ಅದು?"

"ಹಾಗಲ್ಲ, ನಾನು ಶಾಸಕನಾಗಿ, ಪ್ರಾಧಿಕಾರಗಳ ಅಧ್ಯಕ್ಷನಾಗಿ ನಂತರ ಸುಮ್ಮನೆ ಪಾಠ ಹೇಳೋ ಮೇಷ್ಟ್ರಾಗಿ ಕಾಲಕಳಿಯೋದು ತುಂಬ ಕಷ್ಟ ಆಯ್ತು. ಆದ್ರಿಂದ ಇಂತ ಸ್ಥಾನಗಳನ್ನ ಹುಡುಕಿಕೋಬೇಕಾಯ್ತು. ಯಾರೋ ಆರೆಸ್ಸೆಸ್ಸಿನವನು ಈ ಸ್ಥಾನದಲ್ಲಿರುವದಕ್ಕಿಂತ ನಿಮ್ಮವನಾದ ನಾನೇ ಇಲ್ಲಿದ್ರೆ ತಪ್ಪೇನು?"

"ಇರಿ ಸಾರ್, ಯಾರು ಬ್ಯಾಡ ಅಂದೋರು. ಆದ್ರೆ ನೀವು ಬರದಿದ್ದೇನು, ಬದುಕ್ತಾಯಿರದೇನು ಅಂತ ಯೋಚನೆ ಆಯ್ತು."

"ಬರಹವನ್ನ ಅಷ್ಟು ಗಂಭೀರವಾಗಿ ತಗೋಬೇಡಿ. ಬರಹಕ್ಕಿಂತ ಬದುಕೇ ಮುಖ್ಯ. ಬರಹ ಬರಿ ಸಮಯ ಸಂದರ್ಭದ ಸ್ಫೂರ್ತಿಯಿಂದ ಬರೋ ಅಂತದ್ದು. ನನಗೆ ನನ್ನ ಸುತ್ತಮುತ್ತಲ ಪರಿಸರ ನೋಡಿ ಬರಿಬೇಕು ಅನ್ನಿಸ್ತು ಬರದೆ. ಪಕ್ಕದಲ್ಲಿ ಎಡೂರಪ್ಪ ಕುಳಿತಿದ್ರು. ಅವರನ್ನ ಸ್ಫೂರ್ತಿಯಿಂದ ಆಧುನಿಕ ಬಸವಣ್ಣ ಅಂತ ಅಂದೆ. ಅದನ್ನ ಎಡೂರಪ್ಪ ಸೀರಿಯಸ್ಸಾಗೇ ತಕ್ಕೊಂಡು ಸುಖಿಸಿದ್ರು. ನೀವು ಬೇಜಾರಾದ್ರಿ. ಕೆಲವರು ನನಗೆ ಬೈದ್ರು. ಇನ್ನೊಂದು ತಿಳಕೊಳ್ಳಿ. ನನಗೆ ಯಾರೇ ಬೈದರೂ, ಎಷ್ಟೇ ಬೇಜಾರಾದ್ರು, ನನಗೇನೂ ಅನ್ನಿಸಲ್ಲ. ನನಗೇನಾದ್ರೂ ಅನ್ನಿಸಿದ್ರೆ ನಾನೊಬ್ಬ ಸಿನಿಕ ವ್ಯಕ್ತಿ ಆಗ್ತಿನಿ. ಶತಮಾನಗಳಿಂದ ದಲಿತರು ಹೇಗೆ ಮೇಲ್ಜಾತಿ ದಬ್ಬಾಳಿಕೆ, ಅಸ್ಪೃಶ್ಯತೆ, ಶೋಷಣೆಯನ್ನು ತಡಕೊಂಡು ಬಾಳಿದ್ರೊ, ಅದೇರೀತಿ ನಾನು ನಿಮ್ಮಂತವರ ಟೀಕೆ, ಟಿಪ್ಪಣಿ, ಆಡಿಕೆ, ಅಸೂಯೆಗೆ ತಲೆಕೆಡಿಸಿಕೊಳ್ಳಲ್ಲ. ನನಗೆ ಸರಿಕಂಡದ್ದನ್ನ ನಾನು ಮಾಡ್ತಿನಿ. ಖುಷಿಯಾಗಿರ್‍ತಿನಿ."


"ನಿಮ್ಮ ಬೆಂಕಿ ಉಂಡೆ ತರದ ಬರಹದ ಕತೆ ಹೇಳಿ."

"ನಾನಾಗ್ಲೆ ಹೇಳಿದ್ನಲ್ಲಾ ಬರಹನೆ ಬೇರೆ ಜೀವನಾನೆ ಬೇರೆ ಅಂತ."

"ಅಂಗಿದ್ರೆ ಬಂಡಾಯದ ಬೆಂಕಿ ಸಿದ್ಲಿಂಗಯ್ಯನ್ನ ದಿವಂಗತ ಸಿದ್ಲಿಂಗಯ್ಯ ಅನ್ನಬಹುದೆ?"

"ಅಂಗಂದ್ರೂ ನನಗೇನೂ ಬೇಜಾರಿಲ್ಲ. "ಇನ್ನ ಆಯುಸ್ಸು ಹೆಚ್ಚಾಗುತ್ತೆ."

"ಥೂತ್ತೇರಿ!!!" ●



ಇದು ಖಂಡಿತಾ ರಾಜ್ಯಪಾಲ ಭಾರದ್ವಾಜ್ ಹಾಗೂ ಸಿಎಂ ಯಡ್ಡಿಯ ಮಧ್ಯದ ವೈಯಕ್ತಿಕ ಜಗಳ ಅಲ್ಲ.

ಇದು ಕಾಂಗ್ರೆಸ್-ಬಿಜೆಪಿ ನಡುವಿನ ಅಧಿಕಾರಕ್ಕಾಗಿನ ಸೆಣಸಾಟ ಮಾತ್ರ ಅಲ್ಲ.

ಬಿಜೆಪಿಯ ಬಾಯಿಬಡುಕರು ಬೀದಿಗಳಲ್ಲಿ ಕಿರುಚಿಕೊಳ್ಳುತ್ತಿರುವಂತೆ ಮೆಜಾರಿಟಿ ಇರುವ ಸರ್ಕಾರವನ್ನೇ ಕೆಡುವುವ ಒಂದೇ ಉದ್ದೇಶ ಇವತ್ತಿನ ರಾಜಕೀಯ ಬೆಳವಣಿಗೆಗಳಲ್ಲಿ ಧ್ವನಿಸುತ್ತಿಲ್ಲ.


ಲಿಂಗಾಯತ ಮಠಾಧೀಶರು ಈಗೇನು ಹೇಳುತ್ತಾರೊ?

ನೀವು ನಿಶ್ಚಿತೆಯಿಂದ ಅಧಿಕಾರ ನಡೆಸಿ, ಅದೇನು ಬಂದರೂ ನಾವು ನಿಮ್ಮ ಜೊತೆ ಇರುತ್ತೇವೆ ಎಂದಿದ್ದ ರಾಜ್ಯದ ಕೆಲವು ಲಿಂಗಾಯತ ಮಠಾಧೀಶರು ಈಗೇನು ಹೇಳುತ್ತಾರೆ?


ಸುಪ್ರೀಂಕೋರ್ಟ್ ತನ್ನ ತೀರ್ಪಿನಲ್ಲಿ ಮುಖ್ಯಮಂತ್ರಿ ಯಡ್ಡಿ ಹಾಗೂ ಸ್ಪೀಕರ್ ಬೋಪಯ್ಯ ಸಂವಿಧಾನದ ಆಶಯಗಳನ್ನು ತಿರುಚಿದ್ದನ್ನು ಕಟುಮಾತುಗಳಲ್ಲಿ ಖಂಡಿಸಿದೆ. ಆದರೂ ಭಂಡ ಯಡ್ಡಿ ಕೋರ್ಟ್‌ನ ಅಭಿಪ್ರಾಯಕ್ಕೆ ಬೆಲೆ ಕೊಡದಂತೆ ವರ್ತಿಸುತ್ತಿದ್ದಾರೆ.

ಈಗಲೂ ಮಠಾಧೀಶರು ಯಡ್ಡಿ ಪರ ನಿಲ್ಲಬಾರದೇಕೆ?

ಏಕೆಂದರೆ ನಮ್ಮ ಮಠಾಧೀಶರಿಗೆ ಈ ನಾಡಿನ ಜನರ ನೆಮ್ಮದಿಗಿಂತ ತಮ್ಮ ಮಠಗಳಿಗಾಗುತ್ತಿದ್ದ ಲಾಭವೇ ಮುಖ್ಯವಲ್ಲವೆ?




ಯಡ್ಡಿ-ಬೋಪಯ್ಯ ಕಿಲಾಡಿ ಜೋಡಿಯ ಕೊನೆ ಆಟ



ಪ್ರಜಾಪ್ರಭುತ್ವದ ಮೌಲ್ಯ, ಸಂವಿಧಾನದ ಆಶಯಗಳು, ನ್ಯಾಯ-ನಿಚಾಯತಿಗಳ ಪ್ರಶ್ನೆಗಳೆಲ್ಲವೂ ಇವತ್ತು ಮೇಲೆದ್ದು ನಿಂತಿವೆ.

ಶಾಸನಸಭೆಯ ಮಹತ್ವವನ್ನು ನಲ್ಲಿ ಜಗಳದ ಲೆವೆಲ್ಲಿಗೆ ಇಳಿಸಿ, ಭಾರತ ಸಂವಿಧಾನದ ಆಶಯಗಳನ್ನೇ ಚಿಂದಿ ಮಾಡಿದ್ದ ಮುಖ್ಯಮಂತ್ರಿ ಯಡ್ಡಿ ಹಾಗೂ ಸ್ಪೀಕರ್ ಬೋಪಯ್ಯ ಸ್ವತಃ ಬಿಜೆಪಿ ಪಾರ್ಟಿಗೆ ನಾಚಿಕೆಯಾಗುವಂತೆ ಸುಪ್ರೀಂಕೋರ್ಟಿನಿಂದ ಛೀಮಾರಿ ಹಾಕಿಸಿಕೊಂಡಿದ್ದಾರೆ.

ವಸ್ತುಸ್ಥಿತಿ ಹೀಗಿದ್ದಾಗಲೂ ಬಿಜೆಪಿಗಳು ಜನಾಂದೋಲನ ನಡೆಸುವ, ಬೀದಿ ಮೆರವಣಿಗೆ ಮಾಡುವ ಧಮಕಿ ಕೊಡುತ್ತಿದ್ದಾರೆ. ಆದರೂ ಈ ಬಾರಿ ಯಡ್ಡಿ-ಬೋಪಯ್ಯನವರ ತಲೆ ಉರುಳಲೇಬೇಕಾದ ಸ್ಥಿತಿ ಬಂದಿದೆ. ಇದು ಯಡ್ಡಿ ತಾನಾಗೇ ಆಹ್ವಾನಿಸಿಕೊಂಡ ಆಪತ್ತು ಅಷ್ಟೆ.



ಬೋಪಯ್ಯ ತಪ್ಪುಗಳು

ಕಳೆದ ಆಕ್ಟೋಬರ್‌ನಲ್ಲಿ ನಡೆದ ವಿಶ್ವಾಸಮತ ಯಾಚನೆಯ ಅಧಿವೇಶನ ಆರಂಭವಾಗುವ ಕೆಲವೇ ಗಂಟೆಗಳ ಮುನ್ನ ಸ್ಪೀಕರ್ ಬೋಪಯ್ಯ ಬಿಜೆಪಿಯ ಹನ್ನೊಂದು ಹಾಗೂ ಐವರು ಪಕ್ಷೇತರ ಶಾಸಕರನ್ನು ಸದಸ್ಯತ್ವದಿಂದ ಅನರ್ಹಗೊಳಿಸಿದ್ದನ್ನು ಸುಪ್ರೀಂಕೋರ್ಟ್ ಗಂಭೀರವಾದ ಲೋಪ ಎಂದಿದೆ. ಇದಿಷ್ಟೇ ಅಲ್ಲದೆ ಅವತ್ತಿನ ಅಧಿವೇಶನದಲ್ಲಿ ಎಂಎಲ್‌ಸಿಗಳಾದ ಸೋಮಣ್ಣ, ಭಾರತಿ ಶೆಟ್ಟಿ, ವಿಜಯಶಂಕರ್-ಹೀಗೆ ಸಂಬಂಧಪಟ್ಟವರೆಲ್ಲಾ ಒಳನುಗ್ಗಿದ್ದರು. ಅವತ್ತಿನ ಸಿಟಿ ಪೊಲೀಸ್ ಕಮಿಷನರ್ ಶಂಕರ್ ಬಿದರಿಯೂ ವಿರೋಧ ಪಕ್ಷದ ಶಾಸಕರನ್ನು ದೈಹಿಕವಾಗಿ ತಡೆದು ನಿಲ್ಲಿಸಲು ಒಳಬಂದಿದ್ದರು. ವಿಶ್ವಾಸಮತ ಯಾಚನೆಯು ಸಾಮಾನ್ಯವಾಗಿ ತಲೆ ಎಣಿಕೆ ಅಥವಾ ಬಜರ್ ಒತ್ತುವಿಕೆ ಅಥವಾ ಸೀಕ್ರೆಟ್ ಬ್ಯಾಲೆಟ್ ಮೂಲಕ ನಡೆಯುತ್ತದೆ. ಆದರೆ ಅವತ್ತು ಸ್ಪೀಕರ್ ಅನುಸರಿಸಿದ ಕ್ರಮ ಪ್ರಶ್ನಾರ್ಹವಾಗಿತ್ತು. ಒಟ್ಟಾರೆ ಹೇಳಬೇಕೆಂದರೆ ಯಡ್ಡಿ ಸರ್ಕಾರಕ್ಕೆ ಅಗತ್ಯವಿದ್ದ ಬಹುಮತವನ್ನು ಕೊಡಿಸಲು ಖುದ್ದು ಸ್ಪೀಕರ್ರೇ ವೈಯಕ್ತಿಕ ಕಾಳಜಿ ವಹಿಸಿದಂತಿತ್ತು.

ಸುಪ್ರೀಂಕೋರ್ಟ್ ಇದನ್ನೆಲ್ಲ ಗಮನಿಸಿದೆ.

ಸ್ಪೀಕರ್‌ರ ಬಿಜೆಪಿ ಪರ ಪಕ್ಷಪಾತ ಅಲ್ಲಿಗೂ ನಿಲ್ಲಲಿಲ್ಲ. ಅವತ್ತಿನ ಅಧಿವೇಶನದಲ್ಲಿ ಗಲಾಟೆ ಮಾಡಿದರೆಂದು ಆರೋಪಿಸಿ ಬಿಜೆಪಿಯ ಅಪ್ಪಚ್ಚು ರಂಜನ್ ಸಮಿತಿಯ ಮೂಲಕ 15 ವಿರೋಧಿ ಶಾಸಕರನ್ನು ಅನರ್ಹಗೊಳಿಸುವ ಹೊಸ ಅಸ್ತ್ರವೊಂದನ್ನು ರೆಡಿ ಮಾಡಿಟ್ಟುಕೊಂಡರು.


ಹೀಗೆ ಆಡಳಿತ ಪಕ್ಷದ ರಕ್ಷಕನಂತೆ ಸ್ಪೀಕರ್ ಒಬ್ಬರು ವರ್ತಿಸಿರುವ ಉದಾಹರಣೆಯು ಭಾರತೀಯ ಪ್ರಜಾಪ್ರಭುತ್ವದ ಇತಿಹಾಸದಲ್ಲೇ ಸಿಗುವುದಿಲ್ಲ.

ಬೋಪಯ್ಯಗೆ ಈಗ ರಾಜೀನಾಮೆ ಕೊಡುವುದು ಬಿಟ್ಟರೆ ಬೇರೆ ಮಾರ್ಗವೇ ಇಲ್ಲ.

ಯಡ್ಡಿಯ ಧಮಕಿ

ರಾಜ್ಯಪಾಲರ ಶಿಫಾರಸ್ಸು ಆಧರಿಸಿ ರಾಷ್ಟ್ರಪತಿ ಒಂದು ವೇಳೆ ವಿಧಾನಸಭೆಯನ್ನು ತಾತ್ಕಾಲಿಕವಾಗಿ ಸಸ್ಪೆಂಡ್ ಮಾಡಿದರೆ ತಾನು ತೆರೆದ ಜೀಪಿನಲ್ಲಿ ಓಡಾಡಿ ಜನಾಂದೋಲನ ಮಾಡುವುದಾಗಿ ಯಡ್ಡಿ ಧಮಕಿ ಕೊಡುತ್ತಿರುವುದು ತಮಾಷೆಯಾಗಿದೆ.

ಕಂಠಪೂರ್ತಿ ಭ್ರಷ್ಟಾಚಾರದ ಹಗರಣಗಳು, ಜಾತಿರಾಜಕೀಯ, ಅದಕ್ಷತೆಯೇ ಮೈವೆತ್ತರಿತಿರುವ ಈ ಯಡ್ಡಿ ಲೋಕನಾಯಕನೇನಲ್ಲ. ಒಂದು ವೇಳೆ ಯಡ್ಡಿ ಜನಾಂದೋಲನ ಎಂದು ಜೀಪಿನಲ್ಲಿ ಮೆರವಣಿಗೆ ಹೊರಟರೂ ಕಾಂಗ್ರೆಸ್-ದಳಗಳೇನೂ ಕೈಕಟ್ಟಿ ಕೂರುವುದಿಲ್ಲ. ಯಡ್ಡಿಯ ಯಾತ್ರೆ ಬೆಂಗಳೂರಿನಿಂದ ಹೊರಟ ಮರುದಿನವೇ ಬಿಜೆಪಿ-ಕಾಂಗ್ರೆ-ಜೆಡಿಎಸ್ ಪಾರ್ಟಿ ಕಾರ್ಯಕರ್ತರ ನಡುವೆ ಬೀದಿಜಗಳ ಸ್ಫೋಟಿಸುವುದು ಖಚಿತ. ಅದು ಕಾನೂನು ಸುವ್ಯವಸ್ಥೆಯ ಸಮಸ್ಯೆಗೆ ಕಾರಣವಾಗಿ ಯಡ್ಡಿಯ ಅಧಿಕಾರ ಕಾಯಂ ಆಗಿ ಖಲಾಸ್ ಆಗಿ ಹೋಗಲಿದೆ. ಈ ಯಡ್ಡಿ ಎಂತಾ ಮಳ್ಳನೆಂದರೆ ಈಗ ಅರ್ಹತೆ ಪಡೆದಿರುವ ಶಾಸಕರು ತನ್ನ ಬೆಂಬಲಕ್ಕಿರುವ ಪತ್ರ ತೋರಿಸುತ್ತಿದ್ದಾರೆಯೇ ವಿನಃ ಸುಪ್ರೀಂಕೋರ್ಟ್ ತನ್ನ ಮುಖಕ್ಕೆ ಮಂಗಳಾರತಿ ಎತ್ತಿದ ಬಗ್ಗೆ ಮಾತೇ ಆಡುತ್ತಿಲ್ಲ. ಈ ಮೂರ್ಖ ನಾಯಕ ತನ್ನ ರುಂಡ ಹಾರುವ ಸನ್ನಿವೇಶ ಬಂದಿದ್ದರೂ ರಾಘವೇಂದ್ರ ಸ್ವಾಮಿ ಮಠ, ವೈಷ್ಣೋದೇವಿ ಮಂದಿರ ಹುಡುಕಿಕೊಂಡು ಒಡಾಡುತ್ತಿರುವುದು ಹಾಸ್ಯಾಸ್ಪದವಾಗಿ ಕಾಣುತ್ತಿಲ್ಲವೆ?



ಕುಮಾರಣ್ಣನ ಕೊರಗು

ನಾಳೆ ಏನಾದರೂ ಯಡ್ಡಿಯ ತಲೆ ಉರುಳಿಬಿದ್ದರೆ ಅದರ ಕ್ರೆಡಿಟ್ ಕುಮಾರಸ್ವಾಮಿಗೇ ಸೇರಬೇಕು. ಕಳೆದ ಸೆಪ್ಟೆಂಬರ್-ಅಕ್ಟೋಬರ್‌ನಲ್ಲಿ ಕುಮಾರಸ್ವಾಮಿ ಕುದುರಿಸಿದ ಡೀಲ್‌ಗಳಿಂದಲೇ ಒಟ್ಟಾರೆಯಾಗಿ ಇವತ್ತಿನ ಬೆಳವಣಿಗೆಗಳಿಗೆ ತಳಹದಿಯಾಗಿತ್ತು. ಆಪರೇಷನ್ ಕಮಲ ಹೇಗೊ ಅದೇ ರೀತಿ ಕುಮಾರಸ್ವಾಮಿ ಆಪರೇಷನ್ನು ಹಣದ ಕೈಬದಲಾವಣೆಗಳ ಪರಿಣಾಮವೇ ಆಗಿತ್ತು. ಈಗ ಕುಮಾರಸ್ವಾಮಿ "ನಾನು ನನ್ನ ಕೈಲಾಗಿದ್ದನ್ನೆಲ್ಲಾ ಮಾಡಿದೆ. ಈಗ ಕಾಂಗ್ರೆಸ್‌ನೋರು ಸರ್ಕಾರ ತೆಗೀಲಿಲ್ಲಾಂದ್ರೆ ನಾನೇನ್ ಮಾಡ್ಲಿ" ಎನ್ನುತ್ತಿದ್ದಾರೆ.

ಈ ನಡುವೆ ದೇವೇಗೌಡರ ನಡೆ ಕುತೂಹಲಕಾರಿಯಾಗಿದೆ. ಪ್ರಧಾನಿ ಸಿಂಗ್‌ರನ್ನು ಭೇಟಿ ಮಾಡಿದ ಗೌಡರು "ಸುಪ್ರೀಂ ಕೋರ್ಟ್ ತೀರ್ಪಿಗೆ ಮನ್ನಣೆ ನೀಡುವುದೆಂದರೆ ಸಿಎಂ ಯಡ್ಡಿ ಹಾಗೂ ಸ್ಪೀಕರ್ ಬೋಪಯ್ಯ ರಾಜೀನಾಮೆ ಕೊಡಲೇಬೇಕು. ಆಮೇಲೆ ಬಿಜೆಪಿ ಸರ್ಕಾರ ಹೊಸ ನಾಯಕನನ್ನು ಆರಿಸಿಕೊಂಡು ಮುಂದುವರೆದರೂ ತಪ್ಪೇನಿಲ್ಲ" ಎಂದಿದ್ದಾರಂತೆ.

ವಾಸ್ತವವಾಗಿ ಕಾಂಗ್ರೆಸ್‌ನ ಗುಪ್ತ ಆಸೆಯೂ ಅದೇ ಆಗಿದೆ.

ಅದನ್ನು ಸಾಧಿಸಲು ಯಾವ ದಾರಿ ಹುಡುಕುತ್ತಾರೆಂಬುದೇ ಈಗಿನ ಪ್ರಶ್ನೆ.


ಬಿಜೆಪಿಗಳು ಈಗ ಬೀಸುವ ದೊಣ್ಣೆಯಿಂದ ಪಾರಾಗಲು ಸ್ಪೀಕರ್ ಬೋಪಯ್ಯರಿಂದ ರಾಜೀನಾಮೆ ಕೊಡಿಸುವ ಸಾಧ್ಯತೆಯಿದೆ. ಆದರೆ ಅವರ ಭಯ ಏನೆಂದರೆ ಒಂದು ವೇಳೆ "ಬೋಪಯ್ಯ ರಾಜೀನಾಮೆ ಕೊಟ್ಟರೆ 2010 ರ ಅಕ್ಟೋಬರ್‌ನಲ್ಲಿ ಯಡ್ಡಿ ಪಡೆದಿದ್ದ ವಿಶ್ವಾಸಮತವೇ ತಪ್ಪು ಎಂದಾಗಿ ಬಿಡುತ್ತದೆ. ಆಗ ಯಡ್ಡಿಯೂ ರಾಜೀನಾಮೆ ಕೊಡಬೇಕಾಗಿ ಬರಬಹುದು" ಎಂಬುದು.

ಈಗಿನ ಬಿಕ್ಕಟ್ಟಿನಿಂದ ಯಡ್ಡಿ ಪಾರಾಗುವುದು ಬಹುತೇಕ ಕಷ್ಟ. ❖

ಸೆಕ್ರೆಟರಿಯೇಟ್ ಸಿಬ್ಬಂದಿ ನೇಮಕಾತಿ ಹಗರಣ

ಇದು ಸ್ಪೀಕರ್ ಬೋಪಯ್ಯನವರಿಗೆ ನೇರವಾಗಿ ಸಂಬಂಧಿಸಿದ್ದೋ ಅಲವ್ವೋ ಅವರೇ ಸ್ಪಷ್ಟಪಡಿಸಬೇಕು.

ವಿಧಾನಸಭೆಯ ಸೆಕ್ರೆಟರಿಯೇಟ್‌ನಲ್ಲಿ ಈಗೊಂದೆರಡು ವರ್ಷಗಳ ಹಿಂದೆ ಡಿ ಗ್ರೂಪ್ ನೌಕರರ ನೇಮಕಾತಿ ನಡೆಯಿತು. ಬೋಪಯ್ಯ ಆಗಲೂ ಸ್ಪೀಕರ್ ಆಗಿದ್ದರು. ಈ ನೇಮಕಾತಿ ಬಗ್ಗೆ ಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟವಾಗಿತ್ತಾದರೂ ಆ ನಂತರ ನಡೆದ ನೇಮಕಾತಿಗಳೇನು ಪಾರದರ್ಶಕವಾಗಿರಲಿಲ್ಲ. ಇಂಟರ್‌ವ್ಯೂ ಹೇಗೆ ನಡೆಯಿತು, ಯಾವ ಮಾನದಂಡಗಳ ಆಧಾರದಲ್ಲಿ ಅಭ್ಯರ್ಥಿಗಳ ಆಯ್ಕೆ ನಡೆಯಿತೆಂಬುದು ಯಾರಿಗೂ ಅರ್ಥವೇ ಆಗಲಿಲ್ಲ. ಕೊನೆಗೆ ಮೀಸಲಾತಿ ನಿಯಮಗಳನ್ನು ಅನುಸರಿಸಲಾಯಿತೇ ಎಂಬುದೂ ದೃಢಪಡಲಿಲ್ಲ. ಈ ಪ್ರಕ್ರಿಯೆ ನಡೆಯುತ್ತಿದ್ದಾಗ ವಿಧಾನಸೌಧದಲ್ಲಿ ಕೆಲಸ ಕೊಡಿಸುವ ಬ್ರೋಕರ್‌ಗಳ ಭರಾಟೆಯೂ ಜೋರಾಗಿತ್ತು.



ಮಾಹಿತಿ ನಿರಾಕರಿಸಿದ ಸ್ಪೀಕರ್ ಕಚೇರಿ ಪತ್ರ...

ಆ ನಂತರ ವಿನಾಯಕೆಂದರ ಅಂಬರೀಷ್ ಎಂಬ ಅಭ್ಯರ್ಥಿ ಮಾಹಿತಿ ಹಕ್ಕಿನಡಿ ಒಂದು ಅರ್ಜಿ ನೀಡಿ ಡಿ ಗ್ರೂಪ್ ನೇಮಕಾತಿಯ ಸಂಪೂರ್ಣ ವಿವರ' ಕೇಳಿದ. ಆದರೆ ಸ್ಪೀಕರ್ ಬೋಪಯ್ಯನವರ ಕಚೇರಿ ಮಾಹಿತಿ ನೀಡಲು ನಿರಾಕರಿಸಿಬಿಟ್ಟಿತು. ವಾಸ್ತವವಾಗಿ ಮಾಹಿತಿ ಹಕ್ಕಿನ 2005 ರ ಕಾಯ್ದೆಯ ಸೆಕ್ಷನ್ 2 ಪ್ರಕಾರ ವಿಧಾನಸಭೆ, ಲೋಕಸಭೆ ಹಾಗೂ ರಾಜ್ಯಸಭೆಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಜನರು ಕೇಳಿ ಪಡೆಯಬಹುದಾಗಿದೆ.

ವಿಧಾನಸಭಾ ಸ್ಪೀಕರ್ ಆಗಲಿ ಅಥವಾ ವಿಧಾನಸೌಧದ ಸೆಕ್ರೆಟರಿಯೇಟ್ ಆಗಲಿ ಮಾಹಿತಿ ಹಕ್ಕಿನ ವ್ಯಾಪ್ತಿಯ ಆಚೆ ಬರುವವರಲ್ಲ. ಈ ನಡುವೆ ಪ್ರಮೋದ್ ಹಳಕಟ್ಟಿ ಎಂಬುವರು ಸ್ಪೀಕರ್ ಕಚೇರಿಗೆ ಇನ್ನೊಂದು ಅರ್ಜಿ ನೀಡಿ 'ಕಳೆದ ಅಕ್ಟೋಬರ್‌ನಲ್ಲಿ ವಿಶ್ವಾಸಮತ ಯಾಚನೆ ನಡೆದ ದಿನ ಯಾವ್ಯಾವ ಶಾಸಕರಿಗೆ ಏನೇನು ದಿನಭತ್ಯೆ ನೀಡಲಾಯಿತು' ಬಗ್ಗೆ ಮಾಹಿತಿ ಕೇಳಿದ್ದರು. ಯಾಕೆಂದರೆ ಅವತ್ತು ಎರಡು ದಿನ ಹಗಲು-ರಾತ್ರಿ ಶಾಸಕರುಗಳು ಸದನದಲ್ಲೇ ಕಾಲ ಕಳೆದಿದ್ದರು. ಈ ಬಗ್ಗೆಯೂ ಮಾಹಿತಿ ನೀಡಲು ಬೋಪಯ್ಯ ನಿರಾಕರಿಸಿದ್ದಾರೆ.


ನಮ್ಮ ಸ್ಪೀಕರ್‌ಗೆ ಸಂವಿಧಾನದ ನಿಯಮಗಳ ಪರಿವೆ ಇಲ್ಲವಾ? ●

ಧಾರವಾಡ ಗಟಾರಕ್ಕೂ ಬಾಯಿಟ್ಟ ಬೆಲ್ಲದ ಫ್ಯಾಮಿಲಿ !




ಶಾಸಕ ಚಂದ್ರಕಾಂತ ಬೆಲ್ಲದನ ಫ್ಯಾಮಿಲಿಯ ಮಾನ ಧಾರವಾಡ ಶಹರದ ತುಂಬೆಲ್ಲಾ ಉಳ್ಯಾಡಲು ಶುರುವಿಟ್ಟಿದೆ. ಈತನ ಮಕ್ಕಳಾದಿಯಾಗಿ ಇಡೀ ಕುಟುಂಬದ ಶೇಂಕಾರ, ತಮ್ಮದು ಮುಖ್ಯಮಂತ್ರಿ ಯಡ್ಡಿಯ ಸಂಬಂಧಿಕ ಮನೆತನ ವೆಂಬ ಒಣ ಅಹಮ್ಮಿಕೆಗಳೆಲ್ಲ ಖುದ್ದು ಆರಿಸಿ ಕಳಿಸಿದ ಜನರಲ್ಲೇ ಅಸಹ್ಯ ಹುಟ್ಟಿಸಿವೆ. ಇದೆಲ್ಲದರ ನಡುವೆ ಬೆಲ್ಲದನ ಪುತ್ರರತ್ನರು ನಡೆಸುತ್ತಿರುವ ವೆಹಿಕಲ್ ಶೋರೂಂ ಹಾಗೂ ವರ್ಕ್‌ಶಾಪ್ ಗಟಾರವನ್ನೇ ಆಪೋಶನ ತೆಗೆದುಕೊಂಡಿರುವ ವಿಚಾರ ಹೊರಬಿದ್ದಿದೆ.

ಚಂದ್ರಕಾಂತ ಬೆಲ್ಲದನ ಪುತ್ರರಾದ ಪ್ರಶಾಂತ ಹಾಗೂ ಮಹೇಶ ನಡೆಸುವ ಪುಂಡಾಟಗಳಿಗೆ ಕೊನೆಯೇ ಇಲ್ಲ ವೆಂಬಂತಾಗಿದೆ. ಕನಿಷ್ಠ ಘನತೆಯನ್ನೂ ಮೈಗೂಡಿಸಿ ಕೊಳ್ಳದ ಇವುಗಳು ಅಕ್ಷರಶಃ ಬಿಡಾಡಿಗಳಂತಾಗಿವೆ. ಇಂಥ ಎಲಿಮೆಂಟುಗಳು ಎಲ್ಲಾ ಬಗೆಯ ವಾಹನಗಳ ಮಾರಾಟ ಉದ್ದಿಮೆಯನ್ನು ಲಾಭಕರ ರೀತಿಯಲ್ಲಿ ನಡೆಸುತ್ತಿವೆ. ಹುಬ್ಬಳ್ಳಿ-ಧಾರವಾಡ ಅವಳಿ ನಗರದ ತುಂಬಾ ಇವರ ಒಡೆತನದಲ್ಲಿ ಹನ್ನೆರಡು ಶೋರೂಮುಗಳು ಹಾಗೂ ಸರ್ವೀಸ್ ಸೆಂಟರ್‌ಗಳಿವೆ. ಇದನ್ನಾದರೂ ವಂಚನೆಯಿಲ್ಲದೆ ನಡೆಸಿದ್ದಿದ್ದರೆ ಒಪ್ಪಿಕೊಳ್ಳಬಹುದಿತ್ತು, ಆದರೆ ಪ್ರಶಾಂತ್ ಹಾಗೂ ಮಹೇಶ್ ಈ ವ್ಯವಹಾರದ ಪ್ರತಿ ಹಂತದಲ್ಲೂ ಕಂಡಕಂಡವರಿಗೆ ನಾಮ ತೀಡುವುದನ್ನೇ ಕಸುಬಾಗಿಸಿ ಕೊಂಡಿದ್ದಾರೆ. ಇವರ ಕೈಕೆಳಗೆ ಕೆಲಸ ಮಾಡೋ ಸಾಮಾನ್ಯ ಕೆಲಸಗಾರ ರಿಂದ ಮೊದಲ್ಗೊಂಡು, ವಾಹನ ಸರಬರಾಜು ಮಾಡುವ ಟ್ರಾನ್ಸ್ ಪೋರ್ಟ್ ಕಂಪೆನಿಗಳವರೆಗೆ ಎಲ್ಲರೂ ಒಂದಲ್ಲ ಒಂದು ರೀತಿ ಯಲ್ಲಿ ನಾಮ ತೀಡಿಸಿಕೊಂಡವರೇ. ಈ ಸಹೋದರರು ತೀರಾ ಕಟ್ಟಡ ಕಟ್ಟಿದವರನ್ನೂ ವಂಚಿಸಿದ್ದಾರೆಂದರೆ ಅವರ ಯೋಗ್ಯತೆ ಎಂಥದ್ದಿರಿರ ಬಹುದೆಂಬುದು ಸ್ಪಷ್ಟವಾಗುತ್ತದೆ.


ಬೆಲ್ಲದ ಮಗ

ಇಂಥ ವಂಚಕ ಸಹೋದರರಿಗೆ ಹುಬ್ಬಳ್ಳಿಯ ಉಣಕಲ್ ಕ್ರಾಸ್‌ನ ಶಿವಗಿರಿ ಕಾಲೋನಿಯಲ್ಲಿ ಶೋರೂಮ್ ಹಾಗೂ ವರ್ಕ್‌ಶಾಪ್ ಇದೆ. ಒಂದಷ್ಟು ಜಮೀನನ್ನು ಕಾನೂನು ಪ್ರಕಾರ ಖರೀದಿಸಿದ್ದು ನಿಜ. ಆದರೆ ಆ ಭೂಮಿಗೆ ತಾಳೆಯಾಗದ ರೀತಿಯಲ್ಲಿ ಆಸುಪಾಸಿನ ಜಾಗಗಳನ್ನು ಕಬಳಿಸಲಾಗಿದೆ. ತೀರಾ ಪಾಲಿಕೆ ನಿರ್ಮಿಸಿದ್ದ ಗಟಾರದ ಮೇಲೆಯೇ ಈ ಶೋರೂಂ ಹಾಗೂ ವರ್ಕ್‌ಶಾಪ್ ತಲೆಯೆತ್ತಿರುವುದು ಕೋಲಾಹಲ ಸೃಷ್ಟಿಸಿದೆ. ವಾರ್ಡ್ ನಂ.25ರಲ್ಲಿ ಬರುವ 6-113/2 ನಿವೇಶನ ಸಂಖ್ಯೆಯಲ್ಲಿ 1999-2000ದಲ್ಲಿ ಬೆಲ್ಲದ ಫ್ಯಾಮಿಲಿ ಭರ್ಜರಿ ಕಟ್ಟಡ ಎಬ್ಬಿಸಿ ಶೋರೂಂ ತೆರೆದಿತ್ತು. ಇದರ ವಿರುದ್ಧ ಆರಂಭದಿಂದಲೇ ಈ ಭಾಗದ ನಿವಾಸಿಗಳು ದನಿಯೆತ್ತಿದ್ದರು.



ಅದಕ್ಕೆ ಕಾರಣ ಇಲ್ಲದಿರಲಿಲ್ಲ, ಈ ಜಮೀನನ್ನು ವಾಣಿಜ್ಯ ಉದ್ದೇಶಕ್ಕಾಗಿ ಮಾತ್ರ ಬಳಸುವಂತಿದೆ. ಅಷ್ಟಕ್ಕೂ ಇಲ್ಲಿ ಮೋಟಾರ್ ವಾಹನಗಳ ಮಾರಾಟ ಮಳಿಗೆ ತೆರೆಯಬಹುದೇ ಹೊರತು ವರ್ಕ್‌ಶಾಪ್ ತೆರೆಯು ವಂತಿಲ್ಲ. ಮಹಾನಗರ ಪಾಲಿಕೆ ಝೊನಲ್ ರೆಗ್ಯುಲೇಷನ್ ಕಾಯ್ದೆ ಪ್ರಕಾರ ವರ್ಕ್‌ಶಾಪ್‌ಗಳನ್ನು ಇಂಡಸ್ಟ್ರಿಯಲ್ ಏರಿಯಾಗಳಲ್ಲಷ್ಟೇ ಸ್ಥಾಪಿಸಬಹುದು. ಇದಕ್ಕೆ ವಿರುದ್ಧವಾಗಿ ಬೆಲ್ಲದನ ಮಕ್ಕಳು ನಡೆದು ಕೊಂಡರೂ ಪಾಲಿಕೆಯ ಮಂದಿ ತುಟಿಕ್‌ಪಿಟಿಕೆನ್ನದಿರು ವುದಕ್ಕೆ ಆತನ ಶಾಸಕತ್ವದ ಖದರು ಮತ್ತು ಎಂಜಲಿನ ಆಸೆಯಲ್ಲದೆ ಬೇರ್ಯಾವ ಕಾರಣಗಳೂ ಕಾಣಸಿಗುವುದಿಲ್ಲ.

ಕಳೆದೊಂದು ದಶಕದಿಂದಲೂ ಈ ವರ್ಕ್‌ಶಾಪ್ ಅವ್ಯಾಹತವಾಗಿ ಅನಾಹುತಗಳನ್ನು ಸೃಷ್ಟಿಸುತ್ತಲೇ ಇದೆ. ಇದಕ್ಕೆ ಹೊಂದಿಕೊಂಡೇ ನೀರಿನ ನಾಲೆಯೊಂದು ಹರಿಯುತ್ತವೆ. ಇದು ಅನೇಕ ಹೊಲಗಳಿಗೆ, ಕುಡಿಯುವ ನೀರಿಗೆ ಬಳಕೆಯಾಗುತ್ತದೆ. ಇದು ಉಣಕಲ್ ಕೆರೆಗೂ ಸಂಪರ್ಕ ಹೊಂದಿದೆ. ಈ ವರ್ಕ್‌ಶಾಪ್‌ನ ಸಕಲ ತ್ಯಾಜ್ಯಗಳೂ ಆ ನಾಲೆ ಸೇರುತ್ತಿವೆ. ಇನ್ನು ಶಬ್ಧ ಮಾಲಿನ್ಯವೂ ಸೇರಿದಂತೆ ಥರಥರದ ಅವಘಡಗಳು ಇದರಿಂದ ಸೃಷ್ಟಿಯಾಗುತ್ತಿವೆ. ಇದೆಲ್ಲದರ ವಿರುದ್ಧ ಶಿವಗಿರಿ ಕಾಲೋನಿಯ ನಾಗರಿಕರೇ 2006ರಲ್ಲಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದನ್ನು ಸಲ್ಲಿಸಿದ್ದರು. ಇನ್ನು ಸರ್ಕಾರಿ ಜಮೀನು ಒತ್ತುವರಿ ಸಂಬಂಧ ಸರ್ಕಾರಿ ಜಮೀನು ಸಂರಕ್ಷಣ ಪಡೆಗೂ ತಕರಾರು ಅರ್ಜಿ ಸಲ್ಲಿಸಲಾಗಿತ್ತು.

ಇದಾಗುತ್ತಲೇ ತಮ್ಮ ಸಕಲ ನಿಯತ್ತುಗಳನ್ನೂ ಬೆಲ್ಲದ ಫ್ಯಾಮಿಲಿಗೆ ಅಡವಿಟ್ಟಂತಿರುವ ಕಂದಾಯ ಇಲಾಖೆ ಅಧಿಕಾರಿ ಗಳು ಒತ್ತುವರಿಯಾದ ದಾಖಲೆಗಳನ್ನೇ ತಿದ್ದಿ ಸರಿಪಡಿಸಿ ಕೂತರು. ಆದರೆ ಸರ್ಕಾರಿ ಜಮೀನು ಸಂರಕ್ಷಣಾ ಪಡೆ ಇದನ್ನು ಪತ್ತೆ ಹಚ್ಚಿತು. ತಕ್ಷಣ ಕಂದಾಯ ಇಲಾಖೆ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಕೇಸು ಜಡಿದ ಪಡೆ ಬೆಲ್ಲದ ಫ್ಯಾಮಿಲಿಗೂ ಇದೇ ಗತಿ ಕಾಣಿಸುವಂತೆ ಧಾರವಾಡ ಜಿಲ್ಲಾಧಿ ಕಾರಿ ದರ್ಪಣ್ ಜೈನ್‌ರಿಗೆ ಸೂಚಿಸಿತು.


ದರ್ಪಣ್ ಜೈನ್

ಈ ನಡುವೆ ಶಬ್ದಮಾಲಿನ್ಯ ನಿಯಂತ್ರಣ ಮಂಡಳಿ ಸದರಿ ಶೋರೂಂ ಕಮ್ ವರ್ಕ್‌ಶಾಪನ್ನು ನಿಗದಿತ ಮಟ್ಟಕ್ಕಿಂತ ಹೆಚ್ಚು ಮಾಲಿನ್ಯವಿರುವುದಾಗಿ ವರದಿ ನೀಡಿತು. ಇದೇ ಸಂದರ್ಭದಲ್ಲಿ ಶಿವಗಿರಿ ನಿವಾಸಿಗಳ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಪರಿಶೀಲಿಸಿದ ಹೈಕೋರ್ಟ್ ವರ್ಕ್‌ಶಾಪ್ ಅನ್ನು ತಕ್ಷಣ ನಿಲ್ಲಿಸುವಂತೆ ಆದೇಶಿಸಿತು. ದುರಂತವೆಂದರೆ ಶಿವಗಿರಿ ನಿವಾಸಿಗಳು ಇಂಥ ಆದೇಶಗಳ ಪ್ರತಿ ಹಿಡಿದು ಕೊಂಡು ಕಂಡ ಕಂಡ ಕಚೇರಿಗಳಿಗೆ ಅಲೆದಾಡುತ್ತಿದ್ದಾರೆ. ಬೆಲ್ಲದನ ಫ್ಯಾಮಿಲಿ ಮಾತ್ರ ಯಾವುದಕ್ಕೂ ಕ್ಯಾರೇ ಅನ್ನದೆ ಮೆರೆಯುತ್ತಿದೆ.

ಈ ವರ್ಕ್‌ಶಾಪ್ ಬಗ್ಗೆ ತಲಾಶೆಗಿಳಿದರೆ ಮಹಾಮೋಸದ ಝುಲಕುಗಳು ಒಂದೊಂದಾಗಿ ಬಿಚ್ಚಿಕೊಳ್ಳುತ್ತವೆ. ತೀರಾ ಕಟ್ಟಡದ ಪರವಾನಗಿ ಪಡೆಯುವ ಹಂತದಲ್ಲೇ ಗೋಲ್ ಮಾಲ್ ನಡೆದಿರುವುದೂ ಬೆಳಕಿಗೆ ಬರುತ್ತದೆ. ಜನ ಸಾಮಾನ್ಯರು ಕಟ್ಟಡ ಪರವಾನಗಿ ಪಡೆಯಲು ಬಂದರೆ ತಿಂಗಳುಗಟ್ಟಲೆ ಅಲೆದಾಡಿಸುವ ಪಾಲಿಕೆಯ ಮಂದಿ ಬೆಲ್ಲದನ ಕೆಲಸವನ್ನು ರಣವೇಗದಲ್ಲಿ ಮಾಡಿ ಮುಗಿಸಿದ್ದಾರೆ. 1-3-2007ರಲ್ಲಿ ಸದರಿ ಕಟ್ಟಡ ಪರವಾನಗಿ ಮಂಜೂರಾತಿ ನೀಡಲಾಗಿದೆ. ಅದಾಗಿ ಒಂದೇ ದಿನದಲ್ಲಿ ಅಂದರೆ 2-3-07ರಂದು ಕಟ್ಟಡ ಪೂರ್ಣಗೊಂಡ ಬಗ್ಗೆ ಮುಕ್ತಾಯ ಪ್ರಮಾಣ ಪತ್ರವನ್ನೂ ನಿಡಲಾಗಿದೆ! ಈ ಬೃಹತ್ ಕಟ್ಟಡ ಒಂದೇ ದಿನದಲ್ಲಿ ನಿರ್ಮಾಣಗೊಂಡಿದೆಯೆಂದರೆ ಈ ಚೋದ್ಯಕ್ಕೆ ಏನನ್ನಬೇಕು?

ಹಣಬಲದಿಂದಲೇ ಅಡಿಗಡಿಗೆ ಆರಿಸಿ ಬರುತ್ತಿರುವ ಬೆಲ್ಲದ ತನ್ನವರು ಏನೇ ಅಡ್ನಾಡಿ ಕೆಲಸ ಮಾಡಿದರೂ ದಕ್ಕಿಸಿಕೊಳ್ಳುತ್ತಾ ಮುಂದುವರೆಯುತ್ತಿದ್ದಾನೆ. ಹೋಗಲಿ, ಈ ಮಂದಿ ತಮ್ಮ ಕೈಕೆಳಗಿನ ಕೆಲಸಗಾರರನ್ನಾದರೂ ಸರಿಯಾಗಿ ನಡೆಸಿಕೊಳ್ಳುತ್ತಾರಾ ಅಂತ ನೋಡಹೋದರೆ ಹಲವಾರು ಅಮಾನವೀಯ ಘಟನೆಗಳು ಎದುರಾಗುತ್ತವೆ.

ಇಂಥವುಗಳಲ್ಲಿ ಈಗ್ಗೆ ಎರಡು ವರ್ಷಗಳ ಹಿಂದೆ ನಡೆದೊಂದು ಘಟನೆ ಬೆಲ್ಲದನ ಫ್ಯಾಮಿಲಿಯ ರಾಕ್ಷಸತ್ವಕ್ಕೆ ಉದಾಹರಣೆಯಂತಿದೆ. ಇದೀಗ ವಿವಾದಕ್ಕೀಡಾಗಿರುವ ಶಿವಗಿರಿಯ ಸರ್ವೀಸ್ ಸೆಂಟರ್‌ನಲ್ಲಿ ಬಡಪಾಯಿಯೊಬ್ಬ ಮೆಕಾನಿಕ್ ಆಗಿ ಕೆಲಸ ಮಾಡುತ್ತಿದ್ದ. ಅದೊಂದು ದಿನ ಆತನ ಕಾಲ ಬೆರಳುಗಳು ಯಂತ್ರಕ್ಕೆ ಸಿಕ್ಕಿ ಕತ್ತರಿಸಿಹೋಗಿದ್ದವು. ಆದರೆ ಪ್ರಶಾಂತ ಹಾಗೂ ಮಹೇಶ್ ಬೆಲ್ಲದ ನೆಂಬ ದುಷ್ಟರು ಆತನನ್ನು ಯಾವುದೇ ಪರಿಹಾರ ಕೊಡದೆ ನಿರ್ದಯವಾಗಿ ಕೆಲಸದಿಂದ ತೆಗೆದು ಹಾಕಿದರು.

ಇಂಥ ದುಷ್ಟತನಕ್ಕೆಲ್ಲ ಚಂದ್ರಕಾಂತ ಬೆಲ್ಲದ ಶಾಸಕತ್ವದ ಖದರಿನಿಂದ ನೀರೆರೆಯುತ್ತಿದ್ದಾನೆ. ಆದರೆ ತಡವಾಗಿಯಾದರೂ ಈ ಭಾಗದ ಜನರಿಗೆ ಬುದ್ಧಿ ಬಂದಂತಿದೆ. ಅವರೆಲ್ಲ ಒಟ್ಟಾಗಿ ಈ ಬಾರಿ ಚುನಾವಣೆಯಲ್ಲಿ ಬೆಲ್ಲದನಿಗೊಂದು ಗತಿ ಕಾಣಿಸಲು ತಹತಹಿಸುತ್ತಿದ್ದಾರೆ. ಹಾಗಾದಲ್ಲಿ ಬೆಲ್ಲದ ಫ್ಯಾಮಿಲಿಗೆ ಗಟಾರ ವಾಸವೇ ಖಾಯ ಮ್ಮಾಗೋದು ಖರೇ!

• ಹುಬ್ಬಳ್ಳಿಯಾಂವ

ಕುಸಿಯಲಿರುವ ಶಾಲೆಯ ಸುತ್ತ....


ಮಿಸ್ ಮಾದಪ್ಪ

3ನೇ ಪುಟದಿಂದ...

ಹೋಗಿಬಂದೆವು. ಅಜಿತು ಎಂಟು ದಿನಗಳ ಮಟ್ಟಿಗೆ ಶಾಲೆಯಿಂದ ಗೈರುಹಾಜರಾಗಿದ್ದ, ಇದನ್ನು ಕಂಡು ಮಿಸ್ ಮಾದಪ್ಪ ಕುಪಿತರಾದರು. ಅಪ್ಪನನ್ನು ಕರೆಸಿ "ಹೀಗೆ ಎಂಟು ದಿನಗಳ ಕಾಲ ರಜೆ ಕೊಡಲಾಗುವುದಿಲ್ಲ, ನೀವು ದೆಹಲಿಗೆ ಹೋಗುವುದಿದ್ದರೆ ನಿಮ್ಮ ಮಗನನ್ನು ಇಲ್ಲೇ ಸಂಬಂಧಿಕ ರೊಂದಿಗೆ ಬಿಟ್ಟು ಹೋಗಬೇಕಿತ್ತು, ಆಗ ನಿಮ್ಮ ಮಗ ಇಷ್ಟೊಂದು ಶಾಲಾ ದಿನಗಳನ್ನು ಕಳೆದುಕೊಳ್ಳುತ್ತಿರಲಿಲ್ಲ" ಎಂದರಂತೆ. ಮಿಸ್ ಮಾದಪ್ಪರಿಗೆ ಇದ್ದ ಜಂಭಕ್ಕಿಂತ ಅಪ್ಪನ ಜಂಭ ಹೆಚ್ಚಿನದ್ದು, "ಹಾಗಾದರೆ ನನ್ನ ಮಗನ ಟಿಸಿ ಕೊಡಿ" ಎಂದು ಅಪ್ಪ ಹೇಳಿದರಂತೆ. ಕೂಡಲೇ ಮಾದಪ್ಪ ಟಿಸಿ ಕೊಟ್ಟು ಅಜಿತ್‌ನನ್ನು ಶಾಲೆಯಿಂದ ಹೊರಗೆ ಹಾಕಿದ್ದರು.


ಆದರೆ ಶಿಸ್ತಿನಷ್ಟೇ ಮಾನವೀಯತೆಯೂ ಆ ಶಾಲೆಯಲ್ಲಿ ಮುಖ್ಯವಾಗಿತ್ತು, ಅಜಿತು ಪ್ರಕರಣಕ್ಕಿಂತ ಹಲವು ವರ್ಷಗಳ ಮುನ್ನ ನಾನು ಏಳನೇ ತರಗತಿಯಲ್ಲಿದ್ದಾಗ ನನಗೆ ಬ್ರೈನ್ ಫೀವರ್ ಬಂದು ಸಾವಿನ ಅಂಚಿಗೆ ಹೋಗಿಬಂದಿದ್ದೆ. ಆ ಕಾಯಿಲೆಯಿಂದಾಗಿ ನಾನು ಸುಮಾರು ಎರಡು ತಿಂಗಳ [illegible]

ಪಾಠಗಳನ್ನು ಮಿಸ್ ಮಾಡಿಕೊಂಡಿದ್ದರಿಂದ ನಾನು ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳನ್ನು ಸಮರ್ಥವಾಗಿ ಎದುರಿಸ ಲಾರೆ ಎಂಬ ಭಯ ನನ್ನ ಅಮ್ಮನಿಗೆ. ಆದರೆ ನನ್ನ ಟೀಚರ್‌ಗಳು ನನ್ನ ಬಗ್ಗೆ ವಿಶೇಷ ಕಾಳಜಿ ವಹಿಸಿ, ಹೆಚ್ಚಿನ ಪಾಠವನ್ನು ಹೇಳಿಕೊಟ್ಟು ನಾನು ಆ ಪರೀಕ್ಷೆ ಯಲ್ಲಿ ಫಸ್ಟ್ ಕ್ಲಾಸ್ ಪಡೆಯುವಷ್ಟು ನನ್ನನ್ನು ತಯಾರು ಮಾಡಿದರು.

ಹೋಮ್ ಸ್ಕೂಲ್‌ನಲ್ಲಿ ಆಚರಿಸುತ್ತಿದ್ದ ಕ್ರಿಸ್‌ಮಸ್ ಹಬ್ಬಗಳು, ಪಿಕ್‌ನಿಕ್‌ಗಳು, ಪಿಯಾನೋ ಜೊತೆಗೆ ಹಾಡುತ್ತಿದ್ದ ಬೆಳಗ್ಗಿನ ಪ್ರಾರ್ಥನೆಗಳು, ಹಾಕಿ ಆಟಗಳು, ಬಹಳಷ್ಟು ನೆನಪುಗಳು ಕಾಡುತ್ತಿವೆ.

1990 ರಲ್ಲಿ ಮಿಸ್ ಮಾದಪ್ಪ ತೀರಿಕೊಂಡಾಗ ಅವರ ಬಗ್ಗೆ ಮರೆಯುವ ಮುನ್ನದಲ್ಲಿ ಅಪ್ಪ ಹೀಗೆ ದಾಖಲಿಸಿದ್ದರು: "ಹೋಮ್ ಸ್ಕೂಲ್‌ನ ಸರ್ವಾಧಿಕಾರಿಣಿ ಮಿಸ್ ಮಾದಪ್ಪ ಕೊಡಗಿನ ಹೆಂಗಸು. ಒಮ್ಮೆಯೂ ಕನ್ನಡ ಮಾತಾಡದೆ ಇದ್ದಂಥ ಹೆಣ್ಣುಮಗಳು. ಗಂಡ, ಮಕ್ಕಳು, ಸ್ನೇಹಿತರು ಯಾರೂ ಇದ್ದಂತಿರಲಿಲ್ಲ. ಸ್ಕೂಲ್ ಚೆನ್ನಾಗಿ ನಡೆಸುತ್ತಿದ್ದರು. ಶಿಸ್ತಿನಿಂದ, ಸೂಕ್ಷ್ಮವಾಗಿ, ಕಟ್ಟುನಿಟ್ಟಾಗಿ. ಈಕೆ ಯಾರ ಹಂಗಿನಲ್ಲೂ ಇರಲಿಲ್ಲ, ಭ್ರಷ್ಟಳಾಗಿರಲಿಲ್ಲ, ಮಕ್ಕಳನ್ನು ಪ್ರೀತಿಸುತ್ತಿದ್ದಳು, ಮಕ್ಕಳಿಗೆ ಶಿಕ್ಷಣ ನೀಡುವುದರಲ್ಲಿ ಸಾರ್ಥಕ್ಯ ಪಡೆದಿದ್ದಳು. ಎಲ್ಲಕ್ಕಿಂತ ಹೆಚ್ಚಾಗಿ ಈಕೆ ನಮ್ಮ ಮಕ್ಕಳಿಗೆ ನಾವೆಲ್ಲ ಕೊಡಲಾಗದಂಥ ಘನತೆ, ವ್ಯಕ್ತಿತ್ವ, ಆತ್ಮವಿಶ್ವಾಸ, ಸ್ವಾವಲಂಬನೆ ಇದನ್ನೆಲ್ಲ ಕೊಡಬಹುದು ಎಂದು ಆಶೆ ನಮ್ಮಲ್ಲಿತ್ತು, ...ವೇಳೆ, ಸ್ವಚ್ಛತೆ, ಗ್ರಹಿಕೆ ಮುಂತಾದ್ದನ್ನು ಕುರಿತು ಮಿಸ್ ಮಾದಪ್ಪನಿಗಿದ್ದ ಕಾಳಜಿ ಎಷ್ಟೆಂದರೆ, ಆಕೆಯ ಈ ಮೌಲ್ಯಗಳನ್ನು ಮೈಗೂಡಿಸಿಕೊಂಡಿದ್ದವನು ಕನ್ನಡದ ಅನಿವಾರ್ಯತೆಯನ್ನು ತಿಳಿದುಕೊಳ್ಳಲುಬೇಕಾದ [illegible]"

....ಹೀಗೆ ಎಂಟು ದಶಕಗಳ ಕಾಲ ಸಾವಿರಾರು ಮಕ್ಕಳನ್ನು ರೂಪಿಸಿದ ನನ್ನ ಶಾಲೆ ಇವತ್ತು ತನ್ನ ಜಾಗದಿಂದ ಎತ್ತಂಗಡಿ ಆಗಿದೆ. ಶಾಲೆ ಇದ್ದ ಸ್ಥಳದ ಸುತ್ತ ನ್ಯಾಯಾಲಯ ದಲ್ಲಿ ವಾದ ವಿವಾದಗಳು ನಡೆದು ಅದೀಗ ಕನಕಪುರ


ಹೋಮ್ ಸ್ಕೂಲಿನ ಒಂದು ಕೊಠಡಿ...

ರಸ್ತೆಯಲ್ಲಿರುವ ಬೇರೊಂದು ಕಟ್ಟಡಕ್ಕೆ ಸ್ಥಳಾಂತರಗೊಂಡಿದೆ. ಈಗಲೂ ತನ್ನ ಹಳೇ ಮೌಲ್ಯಗಳಿಗೆ ಅಂಟಿಕೊಂಡು ಪ್ರತಿ ವರ್ಷ ಕೇವಲ 30 ಮಕ್ಕಳನ್ನು ಸೇರಿಸಿಕೊಳ್ಳುವ, ಡೊನೇಷನ್ ತೆಗೆದುಕೊಳ್ಳದಿರುವ ಕಾರಣಕ್ಕೆ ಶಾಲೆ ಆರ್ಥಿಕ ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ.

ಸದ್ಯದಲ್ಲೇ ನನ್ನ ಈ ಪ್ರೀತಿಯ ಶಾಲೆಯ ಕಟ್ಟಡವನ್ನು ನೆಲಸಮಗೊಳಿಸುತ್ತಾರಂತೆ ಎಂಬ ಸುದ್ದಿ ಕೇಳಿ ಕೊನೆಬಾರಿಗೆ ಅದನ್ನು ನೋಡಲು ಹೋದೆ. ಸಾವಿರಾರು ಮಕ್ಕಳಿಗೆ ನೆರಳು ನೀಡಿದ್ದ ದೈತ್ಯಾಕಾರದ ರೈನ್ ಟ್ರೀ ಮತ್ತು ಗುಲ್ ಮೊಹರ್ ಮರಗಳು ಹಾಗೆಯೇ ನಿಂತಿದ್ದವು. ಹತ್ತಾರು ಗಿಡಗಳಲ್ಲಿ ಬಣ್ಣಬಣ್ಣದ ಹೂಗಳು ಅರಳಿ ಕಂಗೊಳಿಸುತ್ತಿದ್ದವು. ಸುತ್ತಲಿನ ಅದೇ ಹಚ್ಚಹಸಿರು ಗಿಡ ಮರಗಳು, ಅವುಗಳ ಮಧ್ಯೆ ಅದೇ ಅಚ್ಚ ಬಿಳಿ ಬಣ್ಣದ ಕಟ್ಟಡಗಳು. ಕೊಠಡಿಗಳೊಳಗೆ ಇಬ್ಬರು ಮಕ್ಕಳು ಕೂರುವಂತಹ ಅದೇ ಚಿಕ್ಕಪುಟ್ಟ ಬೆಂಚುಗಳು...

ಎಲ್ಲೆಡೆ ಇದ್ದ ನೀರವ ಮೌನದಲ್ಲಿ ಹಕ್ಕಿಗಳ ಚಿಲಿಪಿಲಿಗಾನ ಮಾತ್ರ ಕೇಳಿಸುತ್ತಿತ್ತು, ಒಂದು ಮೂಲೆಯಲ್ಲಿ ಕ್ರಿಸ್‌ಮಸ್ ಮರ ಒಣಗಿನಿಂತಿತ್ತು, ಶಾಲೆಯ ಮಧ್ಯೆ ನಿಂತು ಸುತ್ತಲೂ ನೋಡಿದಾಗ ನನ್ನ ಬದುಕಿನ ಒಂದು ಪ್ರಮುಖ ಭಾಗವಾದ, ಅಪ್ಪ ಮತ್ತು ಅಮ್ಮನಷ್ಟೇ ನನ್ನನ್ನು ರೂಪಿಸಿದ ಈ ಶಾಲೆ ಮತ್ತು ಅದರ ಟೀಚರುಗಳು ನೆನಪಾದರು.....

• ಗೌರಿ ಲಂಕೇಶ್



ಜಾಕಿ ಸುದರ್ಶನ್ ಮಹೇಶ್ ಸೋಮ (ಡೆಡ್ಲಿ) ಓಸಿ ಚೇತನ

ಮಂಡ್ಯ ನೀತಿಯಿಲ್ಲದ ನೀರಾ ದಂಧೆಗೆ ಐದು ಬಲಿ!

ಈ ಐದು ಹೆಣಗಳು ಸಮಾಜದ ಮುಂದೆ ಕೆಲವು ಪ್ರಶ್ನೆಗಳನ್ನು ಕೇಳುತ್ತಿವೆ. ಈ ಸಾವುಗಳಿಗೆ ಕಾರಣರಾರು? ಕುಡಿತದ ಅಭ್ಯಾಸವಿಟ್ಟುಕೊಂಡಿರುವ, ಕಿಕ್‌ಗಾಗಿ ಏನೇನನ್ನೋ ಕುಡಿದು ಸತ್ತ ಯುವಕರ ಸ್ವಯಂಕೃತಾಪರಾಧ ಅಷ್ಟೇನಾ ಇದು? ಅಥವಾ ಅವರಿಗೆ ಸುಲಭವಾಗಿ ಮದ್ಯ ಲಭ್ಯವಿಲ್ಲದಂತೆ ಮಾಡಿದ ಚುನಾವಣಾ ನೀತಿಸಂಹಿತೆಯ ಡ್ರೈ ಡೇ ಪಾಲಿಸಿಯಾ? ಯಾವುದೇ ನಿಯಮಗಳಿಲ್ಲದೇ ನೀರಾ ಮಾರಾಟವನ್ನು ಸಾಧ್ಯವಾಗಿಸಿರುವ ರೈತಸಂಘದ ಹೋರಾಟವಾ? ಸೇಂದಿ ಪುಟ್ಟೇಗೌಡನೆಂಬ ದುಷ್ಟನೂ, ಆತನಿಂದ ಸಪ್ಲೈ ತೆಗೆದುಕೊಳ್ಳುತ್ತಿದ್ದ ದಲಿತ ಕೇರಿಯ ಸಿದ್ದಮ್ಮನೂ ಇದಕ್ಕೆ ಕಾರಣವಾ?

ಐದು ಕುಟುಂಬಗಳ ಬದುಕಿಗೆ ಆಸರೆಯಾಗಬೇಕಿದ್ದ ಐದು ಜನ ಯುವಕರು ಒಟ್ಟಿಗೇ ಸತ್ತು ಹೋಗಿದ್ದಾರೆ. ಮೇಲುನೋಟಕ್ಕೆ ತಮ್ಮದೇ ಚಟಕ್ಕೆ ಬಲಿಯಾದ ದಾರಿ ತಪ್ಪಿದ ಯುವಕರ ಕಥೆಯಷ್ಟೇ ಎಂದು ಕಾಣುವ, ಆದರೆ ತನ್ನೊಳಗೆ ನಮ್ಮ ಸಾಮಾಜಿಕ, ರಾಜಕೀಯಾರ್ಥಿಕ ವ್ಯವಸ್ಥೆಯ ದುರಂತವನ್ನು ಅಡಗಿಸಿಕೊಂಡಿರುವ ವಿದ್ಯಮಾನ ಇದು. ಮಂಡ್ಯ ನಗರದಿಂದ ಕೇವಲ 6 ಕಿ.ಮೀ. ದೂರ ಇರುವ ಹೊಳಲು ಎಂಬ ಹಳ್ಳಿಯಲ್ಲಿ ಈ ಘಟನೆ ನಡೆದಿದೆ.

ಮಂಡ್ಯ ಸೇರಿದಂತೆ ರಾಜ್ಯದ ವಿವಿಧೆಡೆ ನೀರಾ ಎಂಬ ಮದ್ಯದ ದಂಧೆ ಯಾವ ಅಡೆತಡೆಯೂ ಇಲ್ಲದೆ ಮುಂದುವರೆದಿದೆ. ತೆಂಗಿನಗಿಡಗಳಿಗೆ ನುಸಿ ಹತ್ತಿದಾಗ ರೈತರು ಅದರಿಂದ ಹೆಂಡ ಇಳಿಸುವ ಮೂಲಕ ಬದುಕುವ ದಾರಿಯನ್ನು ಕಂಡುಕೊಂಡರು. ಆಗ ರೈತರ ಮೇಲೆ ಸಾರಾಯಿ ಲಾಬಿ ಮತ್ತು ಪೊಲೀಸರು ಮುಗಿಬಿದ್ದ ಕಾರಣದಿಂದ, ಪ್ರೊ.ಎಂ.ಡಿ.ನಂಜುಂಡಸ್ವಾಮಿಯವರ ನೇತೃತ್ವದ ರೈತಸಂಘವು ಅದನ್ನೊಂದು ಚಳವಳಿಯಾಗಿ ಕೈಗೆತ್ತಿಕೊಂಡಿತು.



ನೀರಾ ಕುಡಿದು ಮಲಗಿದವರಿಗೆ ಪುಟ್ಟಣ್ಣಯ್ಯ ಶ್ರದ್ಧಾಂಜಲಿ

ಆದರೆ ಈ ನೀರಾ ನಮ್ಮಂತಹ ಸಮಾಜದಲ್ಲಿ ಉಂಟುಮಾಡಬಹುದಾದ ಅಡ್ಡ ಪರಿಣಾಮಗಳ ಬಗ್ಗೆ ಹಲವರು ಆಗಲೇ ಎಚ್ಚರಿಸಿದ್ದರು. 'ನೀರಾ' ಒಂದು ಆರೋಗ್ಯಕರ ಪೇಯ ಎಂಬುದು ಆಗ ರೈತಸಂಘದ ವಾದವಾಗಿತ್ತು, ಆದರೆ ಅದನ್ನು ಆರೋಗ್ಯಕರವಾಗಿ ಉಳಿಸಿಕೊಳ್ಳಲು ಈ ಸಮಾಜದಲ್ಲಿನ ಅನಾರೋಗ್ಯಕರ ಶಕ್ತಿಗಳು ಬಿಡುವುದಿಲ್ಲ, ಅದಕ್ಕೆ ಹೊಳಲುವಿನ ಘಟನೆ ಇತ್ತೀಚಿನ ನಿದರ್ಶನವಾಗಿದೆ. ಹಳ್ಳಿಗಳಲ್ಲಿ ಹೆಚ್ಚು ಚಾಲ್ತಿಯಲ್ಲಿದ್ದ ಸಾರಾಯಿ ನಿಷೇಧವಾದ ನಂತರ ಅದರ ಸ್ಥಾನವನ್ನು ನೀರಾ ತುಂಬುತ್ತಿದೆ. ಹಳ್ಳಿಗಳಲ್ಲಿ ಬಾಟ್ಲಿ ಮದ್ಯಕ್ಕಿಂತ ಕಡಿಮೆ ದರದಲ್ಲಿ ನೀರಾ ಸಿಗುತ್ತಿದೆ. ಇಂದು ಹಳ್ಳಿಹಳ್ಳಿಗಳಲ್ಲಿ ಮುದುಕರು, ಮಧ್ಯಮ ವಯಸ್ಕರು, ಯುವಕರು, ಮಹಿಳೆಯರಿಗೂ ನೀರಾ ಸುಲಭವಾಗಿ ಲಭ್ಯವಾಗುತ್ತಿದ್ದು, ಇದರಿಂದ ಕುಡುಕರ ಸಂಖ್ಯೆ ಹೆಚ್ಚಾಗುತ್ತಿದೆ. ಹಲವಾರು ಕುಟುಂಬಗಳು ನೆಮ್ಮದಿಯನ್ನು ಕಳೆದುಕೊಂಡು, ಸಾಮಾಜಿಕ ಅಶಾಂತಿಗೆ ಬಹುಮುಖ್ಯ ಕಾರಣಗಳಲ್ಲೊಂದಾಗಿದೆ.

ಹೊಳಲುವಿನ ಉದಾಹರಣೆಯನ್ನೇ ತೆಗೆದುಕೊಂಡರೆ ದಿನನಿತ್ಯ ಕುಡಿಯುವ ಚಟವಿಲ್ಲದಿದ್ದರೂ ಮತ್ತಿನ ನಶೆ ಏರಿಸಿಕೊಂಡು ಅನುಭವ ಪಡೆಯಲು ಹೋಗಿ ಐವರು ಯುವಕರು ಬಲಿಯಾಗಿದ್ದಾರೆ. ಚೆನ್ನೈ ಮತ್ತು ಬೆಂಗಳೂರುಗಳಲ್ಲಿ ಲಾರಿ ಚಾಲಕರಾಗಿದ್ದ ಸಂಜೀವ ಮತ್ತು ಮಹೇಶ್, ಊರಿನಲ್ಲೇ ಆಟೋ ಓಡಿಸುತ್ತಿದ್ದ ಸೋಮು, ಚೇತನ, ಸುದರ್ಶನ್, ಪುರುಷೋತ್ತಮ ಎಂಬ ಈ ಐವರು ಯುವಕರು ಸ್ನೇಹಿತರು. ಇವರು ಆಗಾಗ ಪಾರ್ಟಿ ಇಟ್ಟುಕೊಳ್ಳುತ್ತಿದ್ದುದು ವಾಡಿಕೆ. ಎಂದಿನಂತೆ ಸಂಜೀವ ಮತ್ತು ಮಹೇಶ್ ಬೆಂಗಳೂರಿನಿಂದ ಶನಿವಾರ ಊರಿಗೆ ಬಂದವರು ಭಾನುವಾರ ಹಂದಿ ಮಾಂಸದ ಊಟ ಮತ್ತು ಎಣ್ಣೆ ಪಾರ್ಟಿ ಮಾಡಲು ಪ್ಲಾನ್ ಮಾಡಿದ್ದಾರೆ. ಅಂದು ಮಾಂಸದೂಟ ರೆಡಿ ಮಾಡಿಸಿಕೊಂಡು ಮಂಡ್ಯಕ್ಕೆ ಬಂದು ಡ್ರಿಂಕ್ಸ್ ಹುಡುಕಿದ್ದಾರೆ. ಮಾರನೆ ದಿನ ಎಪಿಎಂಸಿ ಚುನಾವಣೆ ಇದ್ದಿದ್ದರಿಂದ ನೀತಿ ಸಂಹಿತೆ ಭಾಗವಾಗಿ ಮಂಡ್ಯದ ಬಾರ್‌ಗಳೆಲ್ಲವೂ ಬಂದ್ ಆಗಿದ್ದವು. ತಮ್ಮ ಪಾರ್ಟಿಯಲ್ಲಿ ಎಣ್ಣೆ ಇಲ್ಲದಿದ್ದರೆ ಹೇಗೆ ಎಂದು ಹೊಳಲುವಿನ ದಲಿತ ಕೇರಿಯಲ್ಲಿ ನೀರಾ ಮಾರುತ್ತಿದ್ದ ಸಿದ್ದಮ್ಮನ ಬಳಿ, ಇದೇ ಊರಿನ ಅಲೆಮಾರಿ ಬುಡಬುಡಕೆ ಜನಾಂಗದ ಅರ್ಜುನ ಎಂಬ ಹುಡುಗನ ಮೂಲಕ 10 ಲೀಟರ್ ನೀರಾ ತರಿಸಿದ್ದಾರೆ.

ನಂತರ ತಾವು ಅಂದುಕೊಂಡಂತೆ ತಮ್ಮ ಪಾರ್ಟಿಯನ್ನು ಇದೇ ಊರಿನ ಹೊರಭಾಗದಲ್ಲಿರುವ ಸಿದ್ದರಾಮು ಎಂಬುವವರ ಆಲೆಮನೆ ಬಳಿ ಪ್ರಾರಂಭಿಸಿದ್ದಾರೆ. ಹಂದಿ ಮಾಂಸ ತಿನ್ನುತ್ತಾ ಎಣ್ಣೆ ಸಮಾರಾಧನೆ ನಡೆಸಿದ್ದಾರೆ. ನೀರಾ ಜೊತೆಗೆ ಸಂಜೀವ ಬೆಂಗಳೂರಿನಿಂದ ತಂದಿದ್ದ ಕ್ಲೋರಾಲ್ ಹೈಡ್ರೈಟ್ ಎಂಬ ಕಿಕ್ ಕೊಡುವ ರಾಸಾಯನಿಕವನ್ನು ಬೆರೆಸಿಕೊಂಡಿದ್ದಾರೆ.

ಕ್ಲೋರಾಲ್ ಹೈಡ್ರೈಟ್ ಒಂದು ನಾರ್ಕೋಟಿಕ್ ಪದಾರ್ಥ. ಅಂದರೆ ಕಿಕ್ ಕೊಡುವ, ಮತ್ತು ಬರಿಸುವ ಹಾಗೂ ಪದೇಪದೆ ಸೇವಿಸಬೇಕೆಂದು ಬಯಸುವ ಹಾಗೆ ಮಾಡುವ (ಅಂದರೆ ಅಡಿಕ್ಟ್ ಮಾಡುವ) ಒಂದು ರಾಸಾಯನಿಕ ಪದಾರ್ಥ. ಇದು ಬದುಕಿರುವ ಸಂಜು ಹೊಟ್ಟೆಯಲ್ಲಿ ಸಿಕ್ಕಿದೆ. ಸಾಮಾನ್ಯ ಮದ್ಯಕ್ಕಿಂತ 10 ಪಟ್ಟು ಹೆಚ್ಚು ಕಿಕ್ ಕೊಡುತ್ತದೆ. ಇದು ಸಾಮಾನ್ಯ ರಾಸಾಯನಿಕ ಅಂಗಡಿಗಳಲ್ಲೂ ಸಿಗುತ್ತೆ. ಇದನ್ನು 1 ಅಥವಾ 2 ಗ್ರಾಂಗಳಷ್ಟು ಬಳಸಿದರೆ ಆರೋಗ್ಯಕ್ಕೆ ಸಮಸ್ಯೆಯಿಲ್ಲ, ಆದರೆ 5 ಗ್ರಾಂ ಅಥವಾ ಅದಕ್ಕಿಂತಲೂ ಹೆಚ್ಚಿಗೆ ತೆಗೆದುಕೊಂಡರೆ ಮಿದುಳು ತನ್ನ ಕೆಲಸ ಮಾಡುವುದನ್ನೇ ನಿಲ್ಲಿಸಿಬಿಡುತ್ತದೆ. ಇಲ್ಲಿಯೂ ಹಾಗೆಯೇ ಆಗಿದೆ. ಅದನ್ನು ವಿಪರೀತ ಉಪಯೋಗಿಸಿದ ಯುವಕರು ಮೊದಲು ಜ್ಞಾನ ಕಳೆದುಕೊಂಡಿದ್ದಾರೆ. ನಂತರ ಉಸಿರಾಟ ನಿಂತಿದೆ.


ಆದರೆ ಈ ಆರು ಯುವಕರಿಗೆ ಈ ಕೆಮಿಕಲ್‌ನ್ನು ಬಳಸಲು ಯಾರು ಹೇಳಿದರೋ ಅಥವಾ ಈಗಾಗಲೇ ಬಳಸಿ ಅನುಭವ ಇತ್ತೋ ಗೊತ್ತಿಲ್ಲ. ಆದರೆ ತಮಗೆ ಕುಡಿತದಿಂದ ಬರುವ ಅಮಲಿಗಿಂತ ಹೆಚ್ಚಿನ ಅಮಲಿಗಾಗಿ ಇವರು ನೀರಾ ಜೊತೆಗೆ ಬೆರೆಸಿಕೊಂಡು ಯದ್ವಾತದ್ವಾ ಬಳಸಿರುವುದಂತೂ ಸತ್ಯ. ಇದೇನು ಆಕಸ್ಮಿಕವಲ್ಲ, ಕುಡಿತ ಗೊತ್ತಿರುವ ಬಹಳಷ್ಟು ಜನರಿಗೆ ಸಾಮಾನ್ಯವಾಗಿ ಈ ರಾಸಾಯನಿಕ ಬಳಕೆ ಗೊತ್ತು, ಇದರ ಬಗ್ಗೆ ಗೊತ್ತಿಲ್ಲದವರು ಈ ರೀತಿ ಮಾಡಿಕೊಳ್ಳುತ್ತಾರೆ ಎನ್ನುವ ಅಭಿಪ್ರಾಯವೂ ಇದೆ. ಹಾಗೆಯೇ ನೀರಾ ಮಾರಾಟಗಾರರೂ ಕುಡುಕರಿಗೆ ಕಿಕ್ ಸಿಗಲಿ ಎಂಬ ಕಾರಣಕ್ಕೆ ಇದನ್ನು ಮೊದಲೇ ಬಳಸಿರುತ್ತಾರೆ.

ಇಲ್ಲಿ ನೀರಾ ಮಾರಾಟ ...

ಪುಟ್ಟೇಗೌಡ ಮೊದಲೇ ಕಲಬೆರಕೆ ನೀರಾ ಮಾರಾಟಗಾರನಾಗಿ ಕುಖ್ಯಾತಿ ಹೊಂದಿರುವವನು. ಈತ ಎಂತಹ ಕಲಬೆರಕೆಗಾರ ಎಂದರೆ, ಒಂದು ತೆಂಗಿನ ಮರದಲ್ಲಿ ದಿನವೊಂದಕ್ಕೆ ನೀರಾ ಸಿಗೋದು ಕಾಲು ಲೀಟರ್ ಅಷ್ಟೇ. ಹೆಚ್ಚೆಂದರೆ ಅರ್ಧ ಲೀಟರ್. ಆದರೆ ಈತ ಸುತ್ತಮುತ್ತಲಿನ ಹಳ್ಳಿಗಳಲ್ಲದೆ ಮಂಡ್ಯದ ಸಕಲ ಸ್ಲಂಗಳಿಗೆ ಪೂರೈಕೆ ಮಾಡುತ್ತಿದ್ದವ. ಇಷ್ಟೊಂದು ಗ್ಯಾಲನ್‌ಗಟ್ಟಲೆ ಸಿಗಲು ಅದೇನು ಡಿಸ್ಟಿಲರಿಯೇ? ಇಲ್ಲ, ಸೇಂದಿ ಪುಟ್ಟೇಗೌಡ ಗೊಬ್ಬರವಾಗಿ ಬಳಸುವ ಯೂರಿಯಾವನ್ನು ಬೆರೆಸುವ ಅಭ್ಯಾಸ ಮಾಡಿಕೊಂಡಿದ್ದಾನೆ. ನೀರಾ ಹೆಚ್ಚಿಗೆ ಹುಳಿ ಬರದಂತೆ ಮಾಡುವ ರಾಸಾಯನಿಕ ಸ್ಯಾಕರೀನ್ ಅನ್ನೂ ಬಳಸಿ ಜನರಿಗೆ ಯಥೇಚ್ಛವಾಗಿ ಕುಡಿಸಿ ಕಿಕ್ ಕೊಡಿಸುತ್ತಿದ್ದ.

ನೀರಾ ಮಾರಾಟವನ್ನು ಶುರು ಮಾಡಿದ ಮೇಲೆ ಈತನೂ ರೈತಸಂಘದವನಾಗಿಬಿಟ್ಟ. ಚೋದ್ಯದ ಸಂಗತಿಯೇನೆಂದರೆ ಈತ ತಾನು ನೀರಾ ಸಾಗಿಸುವ ಬೈಕ್‌ನ ಕನ್ನಡಿ ಸ್ಟ್ಯಾಂಡ್‌ಗಳಿಗೇ ಹಸಿರುಶಾಲನ್ನು ಸುತ್ತಿರುತ್ತಿದ್ದ. ವಾಸ್ತವದಲ್ಲಿ ಇಂದಿಗೂ ನೀರಾ ಇಳಿಸುತ್ತಿರುವವರಲ್ಲಿ ಹಲವಾರು ರೈತಸಂಘದ ಮುಖ್ಯ ಪದಾಧಿಕಾರಿಗಳೇ ಇದ್ದಾರೆ. ಆದರೆ ಅವರೆಲ್ಲರೂ ಅದನ್ನು ನಿಯತ್ತಿನಿಂದ ಮಾಡುತ್ತಿರುವವರು. ಅವರುಗಳ ನೇತೃತ್ವದಲ್ಲೇ ನೀರಾ ಮಾರಾಟಗಾರರ ಸಂಘವೂ ಇದೆ. ಸೇಂದಿ ಪುಟ್ಟೇಗೌಡನ ನೀತಿಯಿಲ್ಲದ ದಂಧೆಯ ಬಗ್ಗೆ ಅವರು ಗಾಬರಿಯಾಗಿ ಅಬ್ಕಾರಿ ಪೊಲೀಸರಿಗೆ ಈ ಹಿಂದೆಯೇ ದೂರನ್ನೂ ನೀಡಿದ್ದರು. ಆದರೆ ಈ ಐದು ಹೆಣ ಬೀಳುವತನಕ ಅವರು ಯಾವುದೇ ಕ್ರಮವನ್ನು ಕೈಗೊಂಡಂತಿಲ್ಲ.

ಈ ಐದು ಹೆಣಗಳು ಸಮಾಜದ ಮುಂದೆ ಕೆಲವು ಪ್ರಶ್ನೆಗಳನ್ನು ಕೇಳುತ್ತಿವೆ. ಈ ಸಾವುಗಳಿಗೆ ಕಾರಣರಾರು? ಕುಡಿತದ ಅಭ್ಯಾಸವಿಟ್ಟುಕೊಂಡಿರುವ, ಕಿಕ್‌ಗಾಗಿ



ರೇಣುಕಾಚಾರ್ಯನ ಪರಿಶೀಲನಾ ಸಭೆ

ಏನೇನನ್ನೋ ಕುಡಿದು ಸತ್ತ ಯುವಕರ ಸ್ವಯಂಕೃತಾಪರಾಧ ಅಷ್ಟೇನಾ ಇದು? ಅಥವಾ ಅವರಿಗೆ ಸುಲಭವಾಗಿ ಮದ್ಯ ಲಭ್ಯವಿಲ್ಲದಂತೆ ಮಾಡಿದ ಚುನಾವಣಾ ನೀತಿ ಸಂಹಿತೆಯ ಡ್ರೈ?ಡೇ ಪಾಲಿಸಿಯಾ? ಯಾವುದೇ ನಿಯಮಗಳಿಲ್ಲದೇ ನೀರಾ ಮಾರಾಟವನ್ನು ಸಾಧ್ಯವಾಗಿಸಿರುವ ರೈತಸಂಘದ ಹೋರಾಟವಾ? ಸೇಂದಿ ಪುಟ್ಟೇಗೌಡನೆಂಬ ದುಷ್ಟನೂ, ಆತನಿಂದ ಸಪ್ಲೈ ತೆಗೆದುಕೊಳ್ಳುತ್ತಿದ್ದ ದಲಿತ ಕೇರಿಯ ಸಿದ್ದಮ್ಮನೂ ಇದಕ್ಕೆ ಕಾರಣವಾ?

ಉತ್ತರಗಳು ಅಷ್ಟು ಸುಲಭವಿಲ್ಲ, ಏಕೆಂದರೆ ಈ ರಾಜ್ಯವನ್ನಾಳುತ್ತಿರುವವರ ದುಷ್ಟತನ ಎಲ್ಲಕ್ಕೂ ಮೀರಿದ್ದು. ...

ಪರಿಶೀಲಿಸಿದರೆ ಗಾಬರಿಯಾಗುತ್ತದೆ. ಪ್ರತೀ ಜಿಲ್ಲೆಯಲ್ಲಿನ ಅಬ್ಕಾರಿ ಅಧಿಕಾರಿಗಳಿಗೆ ಇಂತಿಷ್ಟು ಪ್ರತೀ ತಿಂಗಳೂ ಮಾರಲೇಬೇಕೆಂಬ ಟಾರ್ಗೆಟ್ ಫಿಕ್ಸ್ ಆಗಿರುತ್ತದೆ. ಈ ಟಾರ್ಗೆಟ್‌ಗೆ ಅನುಗುಣವಾಗಿ ಪ್ರತೀ ಬಾರ್ ಅಥವಾ ವೈನ್‌ಸ್ಟೋರ್‌ಗೂ ಟಾರ್ಗೆಟ್ ಫಿಕ್ಸ್ ಆಗುತ್ತದೆ. ಒಂದು ವೇಳೆ ಕೆಳಗಿನ ಅಧಿಕಾರಿಗಳ ವ್ಯಾಪ್ತಿಯಲ್ಲಿ ಟಾರ್ಗೆಟ್ ಮುಟ್ಟಲಾಗದೇ ಇದ್ದರೆ, 'ನಿಮ್ಮ ವ್ಯಾಪ್ತಿಯಲ್ಲಿ ಸೆಕೆಂಡ್ಸ್ ಇತ್ಯಾದಿ ಹೆಚ್ಚಳವಾಗುತ್ತಿರುವುದರಿಂದಲೇ ಟಾರ್ಗೆಟ್ ರೀಚ್ ಆಗ್ತಿಲ್ಲ' ಎಂದು ಆತನಿಗೆ ಮೆಮೋ ಕೊಡಲಾಗುತ್ತದೆ. ಇನ್ನೂ ಮುಂದಿನ ಕ್ರಮ ಜಾರಿಯಾಗುವ ಮುಂಚೆ ಆ ಅಧಿಕಾರಿ ಎಚ್ಚೆತ್ತುಕೊಳ್ಳುತ್ತಾರೆ. ಅವರು ತಮ್ಮ ವ್ಯಾಪ್ತಿಯ ಬಾರ್/ವೈನ್‌ಸ್ಟೋರ್‌ಗಳಿಗೆ ಅದೇ ರೀತಿ ಮೆಮೋ ಕೊಟ್ಟು, 'ನೀವು ಸೆಕೆಂಡ್ಸ್ ಇತ್ಯಾದಿ ಮಾರಾಟ ಮಾಡುತ್ತಿರುವುದರಿಂದಲೇ ನಿಮ್ಮಲ್ಲಿ ಟಾರ್ಗೆಟ್‌ನಷ್ಟು ಮಾರಾಟ ಆಗ್ತಿಲ್ಲ' ಎಂದು ದಬಾಯಿಸುತ್ತಾರೆ.

ಅವರು ತಮ್ಮಲ್ಲಿರುವ ಸ್ಟಾಕ್ ಅನ್ನು ಖಾಲಿ ಮಾಡಿಕೊಳ್ಳಲು, ಟಾರ್ಗೆಟ್ ಅನ್ನು ಮುಟ್ಟಲು ಅನಧಿಕೃತ ಮಾರಾಟಗಾರರಿಗೆ ಕೇಸುಗಟ್ಟಲೆ ಮದ್ಯವನ್ನು ಮಾರುತ್ತಾರೆ. ಅವರು ಸ್ಲಂಗಳಲ್ಲಿ, ಹಳ್ಳಿಗಳಲ್ಲಿ, ಪೆಟ್ಟಿ ಅಂಗಡಿ ಇತ್ಯಾದಿಗಳಲ್ಲಿ ಬಹಿರಂಗವಾಗಿಯೇ, ಯಾವುದೇ ಲೈಸೆನ್ಸ್ ಇಲ್ಲದೇ ಮಾರುತ್ತಾರೆ. ಇದು ಅಬ್ಕಾರಿ ಅಧಿಕಾರಿಗಳಿಗೂ ಗೊತ್ತಿರುತ್ತದೆ. ಆದರೆ ಇತರ ಬಾರ್ ಮತ್ತು ವೈನ್ ಸ್ಟೋರ್‌ಗಳಂತೆಯೇ ಇಲ್ಲಿಯೂ ಮಾಮೂಲಿ ವಸೂಲಿ ಮಾಡಿಕೊಂಡು ಮುಗುಮ್ಮಾಗಿರುತ್ತಾರೆ. ತಾವು ಇಂತಿಷ್ಟು ಕೇಸುಗಳನ್ನು ದಾಖಲಿಸಲೇಬೇಕೆಂಬ ಟಾರ್ಗೆಟ್ ಮುಟ್ಟದೇ ಹೋದಾಗ, ತಮಗೆ ಇಷ್ಟು ದಿನದವರೆಗೆ ಗೊತ್ತಿರುವ ಅಂಗಡಿಗಳಲ್ಲೇ ಕೆಲವರನ್ನು ಆಯ್ಕೆ ಮಾಡಿ ಕೇಸು ದಾಖಲಿಸುತ್ತಾರೆ. ಸ್ವಲ್ಪ ದಿನ ಅಂತಹ ಅಂಗಡಿಗಳು ಮುಚ್ಚುತ್ತವಾದರೂ ಕೆಲ ಕಾಲದ ನಂತರ ನಿರಾತಂಕವಾಗಿ ಮತ್ತೆ ದಂಧೆ ಮುಂದುವರೆಯುತ್ತದೆ.

ಇದರಲ್ಲೇನೂ ವಿಶೇಷವಿಲ್ಲ, ಇಂದು ಯಾವುದೇ ಪೊಲೀಸ್ ಠಾಣೆಗೆ ಹೋದರೂ, ಅಲ್ಲಿನ ಅಧಿಕಾರಿಗಳ ತಲೆ ಮೇಲೆ ಈ ಗ್ರೇಡ್‌ನ ಅಧಿಕಾರಿಗೆ ಇರುವ ಕರ್ತವ್ಯಗಳು/ಟಾರ್ಗೆಟ್‌ಗಳು ಅಂತ ಒಂದು ಫ್ಲೆಕ್ಸ್ ಬೋರ್ಡ್ ಕಾಣುತ್ತದೆ. ಆ ಟಾರ್ಗೆಟ್‌ಗಳಲ್ಲಿ 'ಪೆಟ ಕೇಸುಗಳ ಸಂಖ್ಯೆಯನ್ನು ಶೇ.10ರಷ್ಟು ಹೆಚ್ಚಿಸಬೇಕು' ಎಂಬುದೂ ಒಂದಾಗಿರುತ್ತದೆ. ಒಂದು ವೇಳೆ ಅವರ ವ್ಯಾಪ್ತಿಯಲ್ಲಿ ಅಪರಾಧಗಳು ನಡೆಯದೇ ಇದ್ದರೆ ಅಪರಾಧಿಗಳನ್ನು ಸೃಷ್ಟಿಸಬೇಕಾಗುತ್ತದೆ!

ಇಂತಹುದೇ ವ್ಯವಸ್ಥೆಯಲ್ಲಿ ರೇಣುಕಾಚಾರ್ಯನಂಥವನು ಅಬ್ಕಾರಿ ಸಚಿವನೂ ಆಗುತ್ತಾನೆ. ಇದೇ ರೇಣುಕಾಚಾರ್ಯ ಈ ಘಟನೆ ನಡೆಯುವ ಕೆಲವೇ ದಿನಗಳ ಮುಂಚೆ ಮಂಡ್ಯಕ್ಕೆ ಬಂದು 'ಇಲ್ಲಿನ ಜನರಿಗೆ ಚೆನ್ನಾಗಿ ಕುಡಿಸುತ್ತಿದ್ದೀರಿ, ಇಲಾಖೆಗೆ ಒಳ್ಳೆ ಆದಾಯ ಬರುತ್ತಿದೆ' ಎಂದು ಬಹಿರಂಗವಾಗಿಯೇ ಶಹಬ್ಬಾಸ್ ಕೊಟ್ಟಿದ್ದ. ಅದರ ಜೊತೆಗೆ ಈ ಜಿಲ್ಲೆಯಲ್ಲಿ ಕಳ್ಳಭಟ್ಟಿಯೇ ಇಲ್ಲ ಎಂಬ ಸರ್ಟಿಫಿಕೇಟನ್ನೂ ದಯಪಾಲಿಸಿದ್ದ. ಆದರೆ ಮಂಡ್ಯದ ಕಾರಸವಾಡಿ ರಸ್ತೆ, ಕೆಇಬಿ ಕ್ವಾರ್ಟರ್ಸ್, ಗಾಂಧಿನಗರಗಳಲ್ಲಿ ಸೆಕೆಂಡ್ಸ್ ಮದ್ಯದ ಸರಬರಾಜು ನಡೆಯುತ್ತಿರುವುದು ಎಲ್ಲರಿಗೂ ಗೊತ್ತು. ಮಂಡ್ಯ ಪೂರ್ವ ಪೊಲೀಸ್ ಠಾಣೆಯ ಹಿಂಭಾಗದ ನಂದಾ ಸ್ಲಂನಲ್ಲೇ ಅಕ್ರಮ ಮದ್ಯ ಮಾರಾಟ ನಡೆಯುತ್ತಿರುವುದು ಮುಂಭಾಗದ ಅಬ್ಕಾರಿ ಆಫೀಸಿನವರಿಗೆ ಗೊತ್ತಿರುವುದಿಲ್ಲ!

ಇನ್ನು ನೀರಾ ವಿಚಾರಕ್ಕೆ ಬರುವುದಾದರೆ, ನುಸಿ ರೋಗ ಇಲ್ಲದೇ ಹೋಗಿರುವ ಸಂದರ್ಭದಲ್ಲಿ ನೀರಾ ಉತ್ಪಾದನೆ ಹಾಗೂ ಮಾರಾಟ ಅಗತ್ಯವೇ ಎನ್ನುವುದನ್ನು ರೈತರೂ ಯೋಚಿಸಬೇಕು. ನೀರಾ ಉತ್ಪಾದನೆ ಹಾಗೂ ಮಾರಾಟ ನಡೆಯುತ್ತಿರುವಾಗ ಅದಕ್ಕೆ ಯಾವ ರೀತಿಯ ನಿಯಂತ್ರಣ ಮಾರ್ಗಸೂಚಿಗಳನ್ನು ನಿಗದಿಪಡಿಸಬೇಕು, ನೀರಾ ಸಂಸ್ಕರಣೆ ಹಾಗೂ ಮಾರಾಟಕ್ಕೆ ಆಧುನಿಕ ತಂತ್ರಜ್ಞಾನದಿಂದ ವ್ಯವಸ್ಥೆ ಮಾಡಿ ರೈತಸಮುದಾಯಕ್ಕೆ ಒಳಿತು ಮಾಡಬೇಕು ಎಂಬ ಆಲೋಚನೆ ಸರ್ಕಾರಕ್ಕಿರಬೇಕು. ರೇಣುಕಾಚಾರ್ಯನಂತಹವರೂ, ಯಡಿಯೂರಪ್ಪನಂತಹವರೂ ಆಡಳಿತದ ಚುಕ್ಕಾಣಿ ಹಿಡಿದಿರುವಾಗ ಅದನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ.

ಇಂಥ ನೀತಿ ನಿಯಮ ಇಲ್ಲದಿರುವುದರಿಂದಲೇ ಐವರು ಯುವಕರು ವಿನಾಕಾರಣ ಸತ್ತಿದ್ದಾರೆ. ಇಂಥಾ ಘಟನೆಗಳು ಮರುಕಳಿಸುವ ಮುನ್ನ ಸಂಬಂಧಿಸಿದವರು ಎಚ್ಚೆತ್ತುಕೊಳ್ಳಬೇಕಿದೆ.

ಲೂಟಿ ಮತ್ತು ಬಕೀಟುಗಿರಿಗಳಿಗೇ ಜೀವಬಂದಂತಿ...ವ ಆಸಾಮಿ ಡಾ.ಸಿ.ಜಿ.ಪ್ರಕಾಶ್. ಇಂಥವನು ಬಾಗಲ...ೋಟೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ...ಧಿಕಾರಿ (C.E.O). 2008ನೇ ಇಸವಿಯಿಂದಲೂ ...ಲ್ಲೆಯ ಪಾಲಿಗೆ ಗ್ರಹಣದಂತೆ ಕವುಚಿಕೊಂಡಿರುವ ಈತ ...ಂಸದ ಗದ್ದಿಗೌಡರನ ಆತ್ಮಾಪ್ತ. ಪ್ರಕಾಶ್ ಜಿಲ್ಲೆಗೆ ...ಟಿಕಾಯಿಸಿಕೊಂಡಿದ್ದೇ ಗದ್ದಿಗೌಡರನಿಗೆ ಮಸ್ಕಾ ಹೊಡೆದು, ...ಗ ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದ ಅರವಿಂದ ...ಂಬಾವಳಿಗೆ ಪ್ರಸಾದ ತಿನ್ನಿಸುವ ಮೂಲಕ!

ಇಂಥಾ ಪ್ರಕಾಶ್ ಪ್ರಪ್ರಥಮವಾಗಿ ವೃತ್ತಿ ...ರಂಭಿಸಿದ್ದು, ಬಕೀಟು ಗಲಗಲಿಸಿದ್ದು ಬೀದರ್ ...ಲ್ಲೆಯಲ್ಲಿ. ಎರಡೂವರೆ ವರ್ಷಗಳ ಕಾಲ 'ಚೀಫ್ ...ಕ್ರೆಟರಿ, ಸಿಇಒ ಅಂತೆಲ್ಲ ಆಗಿದ್ದುಕೊಂಡು ಜಿಲ್ಲೆಯನ್ನು ...ಕ್ತಿ ಮೀರಿ ಕುಲಗೆಡಿಸಿದ. ಈತ ಯಾವ ಪರಿ ಲೂಟಿ ...ೊಡೆದನೆಂದರೆ, ಲೋಕಾಯುಕ್ತರು ...ವಮೊಗ್ಗದಲ್ಲಿರುವ ಇವನ ಮನೆಮೇಲೆ ದಾಳಿ ನಡೆಸಿ ...ಕ್ರಮ ಗಳಿಕೆಯನ್ನೆಲ್ಲಾ ಬರುಖಿಕೊಂಡು ಹೋಗಿದ್ದರು. ...ೀಗೆ ಕಳಕೊಂಡಿದ್ದನ್ನ ಮತ್ತೆ ಸಂಪಾದಿಸೋದು ...ೇಗೆಂಬ ತಲಾಪಿನಲ್ಲಿದ್ದ ಪ್ರಕಾಶ್ ವಕ್ಕರಿಸಿದ್ದು ...ಾಗಲಕೋಟೆ ಜಿಲ್ಲೆಗೆ.

ಹಾಗೆ ಬಂದು ಕೂತವನು ಮೊದಮೊದಲು ...ಟ್ಟುನಿಟ್ಟಿನ ಕಣ್ಕಟ್ಟು ಮಾಡಲಾರಂಭಿಸಿದ. ತನ್ನ ...ಡಳಿತ ಶೈಲಿಯೇ ಬೇರೆ ಅಂತ ಪೋಸು ...ೂಡಹತ್ತಿದ. ಪ್ರಕಾಶ್ ...ಂಚಾಯ್ತಿ ವ್ಯಾಪ್ತಿಯ ...ರ್ಕ್‌ನಿಂದ ಹಿಡಿದು ...ಕ್ರೆಟರಿಯವರೆಗೆ ...ಲ್ಲರನ್ನೂ ...ದ್ದುಬಸ್ತಲಿಟ್ಟುಕೊಂಡ. ...ಂತರ ತನ್ನ ಅಧಿಕಾರ ...್ಯಾಪ್ತಿಯಲ್ಲಿ ಬರುವ ...ರೋಗ್ಯ ಇಲಾಖೆ, ...ರಣ್ಯ ಇಲಾಖೆ ...ೇರಿದಂತೆ ಮೂವತ್ತಾರು ಇಲಾಖೆಗಳನ್ನು ...ಾಲಾಡತೊಡಗಿದ. ...ೀಟಿಂಗ್ ನೆಪದಲ್ಲಿ ...ಲ್ಲಾ ಅಧಿಕಾರಿಗಳನ್ನು ...ುಡ್ಡೆ ಹಾಕಿಕೊಂಡು ...ಣ್ಣಗೆ ಕಲೆಕ್ಷನ್ ದಂಧೆಗೆ ...ಾಲನೆ ನೀಡಲು ಶುರುವಿಟ್ಟ. ಪ್ರತೀ ಇಲಾಖೆಗಳ ...ೋಗಸ್ ಬಿಲ್ಲು ಹಾಗೂ ಬೇರೆ ಬೇರೆ ಬಿಲ್ಲುಗಳಲ್ಲಿ ...0 ಪರ್ಸೆಂಟ್ ತನಗೆ ತಲುಪುವಂತೆ ವ್ಯವಸ್ಥೆ ...ಾಡಿಕೊಂಡ.



ಪ್ರಕಾಶನ ಇಂಥಾ ದುರ್ಬುದ್ಧಿಯಿಂದಾಗಿ ಪ್ರತಿ ಇಲಾಖೆ ...ಲ್ಲೂ ಖದೀಮರು ಹುಟ್ಟಿಕೊಂಡರು. ಕೆಲವರಂತೂ ...ಕ್ಕಾ ಖತರ್‌ನಾಕ್‌ಗಳಾಗಿ ಬದಲಾದರು. ಇಂಥವರಲ್ಲಿ ...ರಣ್ಯ ಇಲಾಖೆಯ RFO ಸಿದ್ರಾಮ ಮೊದಲಿಗ. ...ಪ್ಲೆಯರ್ ಸಿದ್ರಾಮನಂತಲೇ ಖ್ಯಾತಿ ಹೊಂದಿರುವ ಈತನ ...ಗ್ಗೆ ಅಡಿಗಡಿಗೆ ದೂರುಗಳು ಬಂದರೂ CEO ಪ್ರಕಾಶ್ ...ುಟಿಕ್‌ಪಿಟಿಕೆನ್ನದೆ ತೆಪ್ಪಗಿದ್ದಾನೆ. ಯಾಕೆಂದರೆ ಈತ ಪ್ರತೀ ಇಲಾಖೆಗಳಲ್ಲೂ ಕನಿಷ್ಠ ಒಬ್ಬಿಬ್ಬರಾದರೂ ಚೇಲಾಗಳನ್ನು ...ಾಕಿಕೊಂಡು ಅವರ ಮೂಲಕವೇ ಕಮಾಯಿ ತಲುಪುವಂತೆ ...ೋಡಿಕೊಳ್ಳುತ್ತಾನೆ. ಅಂಥ ಚೇಲಾ ಪಡೆಯಲ್ಲಿ ಸಪ್ಲೆಯರ್ ...ಿದ್ರಾಮನೂ ಒಬ್ಬ.


ಇಡೀ ಜಿಲ್ಲೆಯಲ್ಲಿ 162 ಪಂಚಾಯ್ತಿಗಳು, ಆರು ...ಾಲ್ಲೂಕು ಪಂಚಾಯ್ತಿಗಳಿವೆ. ಇದ್ದ ಅಷ್ಟೂ ಜನ ...ಿಕ್ರೆಟರಿಗಳು, ಪಿಡಿಓಗಳು ಪ್ರಕಾಶನ ಹಾವಳಿಯಿಂದ ...ಂಗಾಲಾಗಿದ್ದಾರೆ. ಹಾಗಂತ ಈತ ನೇರವಾಗೇನೂ ಕಾಸು ...ೇಳುವುದಿಲ್ಲ, ಬೋಗಸ್ ಬಿಲ್ ಸೃಷ್ಟಿಸಿಯೇ ಈತನ ...ಆಮದನಿಯ ಮೂಲ. ಈ ಬೋಗಸ್ ಬಿಲ್‌ನ ದರ್ಬಾರು ಯಾವ ಪರಿ ಇದೆಯೆಂದರೆ ರಾಗುಣ ಎಂಟರ್ ಪ್ರೈಸಸ್‌ನಿಂದ ಒಂದು ಕುರ್ಚಿ ಒಂದು ಟೇಬಲ್ ಖರೀದಿಸಿ ಅದಕ್ಕೆ ಅಖಂಡ 19,576 ರೂಪಾಯಿ ಬಿಲ್ ಪಾಸ್ ಮಾಡಿದ್ದಾನೆ! ರಾಘವೇಂದ್ರ ರೂರಲ್ ಡೆವಲಪ್‌ಮೆಂಟ್‌ನಿಂದ ಮೆಟೀರಿಯಲ್ ಪರ್ಚೆಸಿಂಗ್ ಹೆಸರಲ್ಲಿ 39,500 ರೂಪಾಯಿ ಬಿಲ್ ಜಡಿದಿದ್ದಾನೆ. ಕೆದುಕುತ್ತಾ ಹೋದರೆ ಇಂಥ ನೂರಾರು ಪ್ರಕರಣಗಳು ದಂಡಿದಂಡಿಯಾಗಿ ಹೊರಬೀಳುತ್ತವೆ.

ತೀರಾ ಇತ್ತೀಚೆಗೆ ಪ್ರಕಾಶ್ ನಡೆಸಿದ ಭಾನಗಡಿಗಳು ಭೀಕರವಾಗಿವೆ. 162 ಪಂಚಾಯತಿಗಳಿಗೆ ಪಂಪ್ ಸಾಮಗ್ರಿ ಖರೀದಿಸುವ ನೆಪದಲ್ಲಿ ಲಕ್ಷಾಂತರ ಗುಂಜಿಕೊಂಡಿದ್ದಾನೆ. ಈ ಖರೀದಿ ವ್ಯವಹಾರ ಬಾಗಲಕೋಟೆಯ ಬಾಲಾಜಿ ಏಜೆನ್ಸಿಯೊಂದಿಗೆ ನಡೆದಿದೆ. ಆಶ್ಚರ್ಯಕರ ಸಂಗತಿಯೆಂದರೆ ಒಂದೇ ಒಂದು ಹ್ಯಾಂಡಲ್‌ಗೆ 49,849 ರೂಪಾಯಿ ಬಿಲ್ ಪಾಸ್ ಮಾಡಲಾಗಿದೆ. ಇನ್ನುಳಿದಂತೆ ಬೆಳಗಾವಿಯು ಶ್ರೀ ಸಾಯಿ ಏಜೆನ್ಸಿ, ಗೋವರ್ಧನ ಎಂಟರ್‌ಪ್ರೈಸಸ್‌ನಿಂದ 28 ಬಲ್ಬ್‌ಗಳಿಗೆ 49,795 ರೂಪಾಯಿ ವ್ಯಯಿಸಲಾಗಿದೆ!

ಇದಿಷ್ಟು ಬೋಗಸ್ ಬಿಲ್ ದಂಧೆಯಾದರೆ, ತನ್ನ ಕೈಕೆಳಗಿನ ಅಧಿಕಾರಿಗಳಿಗೆ ಕಾನೂನು ಸಮ್ಮತ ಬಡ್ತಿ ಸಿಕ್ಕರೆ ಅದರಲ್ಲೂ ಹಣ ಪೀಕುವ ದುರ್ಬುದ್ಧಿ ಪ್ರಕಾಶನದ್ದು. ಕಳೆದ ವರ್ಷ ಮೂವತ್ತು ಮಂದಿ ಸೆಕ್ರೆಟರಿಗಳು ಪಿಡಿಓಗೆ ಬಡ್ತಿ ಪಡೆದಿದ್ದರು. ಆದರೆ ಪ್ರಕಾಶ ಬೇರೆ ಬೇರೆ ರೀತಿಯಲ್ಲಿ ಕಾಡಿ ಹಣ ಕಸಿದುಕೊಂಡೇ ಬಡ್ತಿ ಪತ್ರ ನೀಡಿದ್ದ. ಜಿ.ಪಂ. ಸಿಇಒ ಆಗಿದ್ದುಕೊಂಡು ಈ ಪರಿ ನುಂಗಿ ನೀರು ಕುಡಿದರೂ ಪ್ರಕಾಶನ ದಾಹ ತೀರಲೇ ಇಲ್ಲ. ಆದುದರಿಂದಲೇ ಈತ ಲ್ಯಾಂಡ್ ಡೀಲಿಂಗ್ ದಂಧೆಗೂ ಕೈಯಿಕ್ಕಿದ್ದಾನೆ.


ಗೋವಿಂದ ಕಾರಜೋಳನನ್ನು ತಾತ್ಕಾಲಿಕವಾಗಿ ಗಾಡ್‌ಫಾದರ್ ಅಂದುಕೊಂಡಿರುವ ಪ್ರಕಾಶ್ ಆತನಿಗಾಗಿ ಸಕಲ ಕೆಲಸವನ್ನೂ ಮಾಡಿಕೊಡುತ್ತಾನೆ. ಈ 'ಸೇವೆ'ಗಳಿಂದ ಥ್ರಿಲ್ ಆಗಿರುವ ಖದೀಮ ಕಾರಜೋಳ ಪ್ರಕಾಶನಿಗೆ 18 ಎಕರೆ ಜಮೀನನ್ನು ಇನಾಮಾಗಿ ನೀಡಿದ್ದ. ಅದು ಫಾರೆಸ್ಟ್ ಜಮೀನು! ಈ ರೆಗ್ಯುಲರ್ ಫಾರೆಸ್ಟ್ ಜಮೀನನ್ನು ಯಾವ ಕಾರಣಕ್ಕೂ ಪರಭಾರೆ ಮಾಡುವಂತಿಲ್ಲವೆಂದು ಕಾನೂನೇ ಹೇಳುತ್ತವೆ. ಆದರೆ ಕಾರಜೋಳ ಕೊಟ್ಟಿದ್ದಾನೆ. ಕಳ್ಳ ಪ್ರಕಾಶ್ ದಕ್ಕಿಸಿಕೊಂಡಿದ್ದಾನೆ!

ಕಬಳಿಕೆಯ ವಿಚಾರದಲ್ಲಿ ಪ್ರಕಾಶ್ ಪಕ್ಕಾ ಹಾರ್ಡ್‌ವರ್ಕರ್. ಉತ್ತರ ಕರ್ನಾಟಕದ ಜನ ನೆರೆಯಿಂದ ತಲ್ಲಣಿಸಿದ್ದರೆ ಈ ಅಡ್ನಾಡಿ ಅದರಲ್ಲೂ ಕಾಸೆಣಿಸಿದ. ನೆರೆ ಹಾವಳಿಗೆ ತುತ್ತಾದವರಿಗೆ ತಕ್ಷಣಕ್ಕೊಂದು ಸೂರು ನಿರ್ಮಿಸಿಕೊಡೋ ಉದ್ದೇಶದಿಂದ ಸರ್ಕಾರ ಬಾಗಲಕೋಟೆ ನವನಗರ ಬೈಪಾಸ್ ರಸ್ತೆಯಲ್ಲಿ ಜಮೀನು ಖರೀದಿಸಿತ್ತು. ಇದರಲ್ಲೇ ಒಂದಿಷ್ಟು ಭೂಮಿಯನ್ನು ಶಿವಮೊಗ್ಗದ ಪ್ರಕಾಶ್ ಎಂಬಾತನ ಹೆಸರಲ್ಲಿ ಪಡೆದುಕೊಂಡ ಈತ ಸುತ್ತಲ ಹತ್ತಾರು ಎಕರೆಯನ್ನು ಕಬಳಿಸಲಾರಂಭಿಸಿದ.



ಗದ್ದಿಗೌಡರ್

ಜಿಲ್ಲಾಧಿಕಾರಿ ಮಾಡುಸ್ರಿ ಸರ....



ಕಾರಜೋಳ

ಮಹತ್ವಾಕಾಂಕ್ಷೆ ತಪ್ಪಲ್ಲ, ಆದರದು ಸ್ವಲ್ಪವಾದರೂ ಸಮಾಜಮುಖಿಯಾಗಿರಬೇಕಷ್ಟೇ. ಆದರೆ ಪ್ರಕಾಶನದ್ದು ಸಮಾಜದ ಬಗ್ಗೆ ತಲೆ ಕೆಡಿಸಿಕೊಳ್ಳಲೂ ಪುರುಸೊತ್ತಿಲ್ಲದ ವ್ಯವಹಾರ. ಆತನ ಮಹತ್ವಾಕಾಂಕ್ಷೆಗಳು ಸಹಜವಾಗಿಯೇ ಸ್ವಹಿತಾಸಕ್ತಿಗಳಿಗೆ ಪೂರಕವಾಗಿರುತ್ತವೆ.

ಜಿಲ್ಲಾ ಪಂಚಾಯ್ತಿ ಸಿಇಒ ಹುದ್ದೆಯಲ್ಲಿ ಲೂಟಿ ಹೊಡೆಯುತ್ತಿರುವ ಪ್ರಕಾಶನಿಗೆ ಕೆಲ ತಿಂಗಳುಗಳಿಂದ ಜಿಲ್ಲಾಧಿಕಾರಿಯಾಗೋ ಪಿತ್ಥ ಅಮರಿಕೊಂಡಿದೆ. ಇದಕ್ಕಾಗಿ ಉಸ್ತುವಾರಿ ಸಚಿವ ಕಾರಜೋಳನ ಕಾಲಿಗೆ ಬಿದ್ದ ಈತ 'ಹೆಂಗಾದ್ರು ಮಾಡಿ ನನ್ನ ಜಿಲ್ಲಾಧಿಕಾರಿ ಮಾಡುಸ್ರಿ ಸರ....' ಅಂತ ದೈನೇಸಿಯಂತಾಡಿದ. ಇಂಥ ಕಳ್ಳಕಾಕರೊಂದಿಗೆ ವಿಪರೀತ ನೆಂಟಸ್ತನ ಹೊಂದಿರುವ ಕಾರಜೋಳ ಆಯ್ತು ಅಂದ.

ಕಾರಜೋಳ ಪ್ರಕಾಶನನ್ನು ಜಿಲ್ಲಾಧಿಕಾರಿಯನ್ನಾಗಿಸಲು ಯಾವ ರೀತಿ ಉತ್ಸುಕನಾದನೆಂದರೆ. ತಕ್ಷಣ, ಹಾಲಿ ಜಿಲ್ಲಾಧಿಕಾರಿ ವಿಶ್ವನಾಥ್‌ರನ್ನು ರಜೆ ಮೇಲೆ ಕಳುಹಿಸಿ ಮರಳಿ ಬರದಂತೆ ತಡೆದ. ಪ್ರಕಾಶ ಇನ್ನೇನು ಜಿಲ್ಲಾಧಿಕಾರಿಯಾಗೇ ಬಿಟ್ಟನೆಂಬಂತೆ ಬೀಗಿದ.

ಬಾಗಲಕೋಟೆ ಜನರ ನಸೀಬು ನೆಟ್ಟಗಿರುವ ಪರಿಣಾಮವೆಂಬಂತೆ ಆ ಪ್ರಯತ್ನ ಫ್ಲಾಪ್ ಆಗಿದ್ದೀಗ ಇತಿಹಾಸ!

ಇದೀಗ ಅದರಲ್ಲೊಂದು ಸಿಮೆಂಟ್ ಇಟ್ಟಿಗೆ ತಯಾರಿಕಾ ಘಟಕ ತೆರೆದಿದ್ದಾನೆ. ಆಸುಪಾಸಿನಲ್ಲೇ ಆಶ್ರಯ ಮನೆಗಳು ನಿರ್ಮಾಣವಾಗುತ್ತಿದ್ದಾವಲ್ಲ? ಅದಕ್ಕೆಲ್ಲ ತನ್ನ ಫ್ಯಾಕ್ಟರಿಯಿಂದಲೇ ಇಟ್ಟಿಗೆ ಖರೀದಿಸಬೇಕೆಂದು ಫರ್ಮಾನು ಹೊರಡಿಸಿದ್ದಾನೆ. ಇದಕ್ಕೂ ಒಂದು ಹೆಜ್ಜೆ ಮುಂದೆ ಹೋಗಿ ಸಿಮೆಂಟ್ ತಯಾರಿಕೆಗೆ ಬೇಕಾದ ಕಲ್ಲಿನ ಪುಡಿಯನ್ನು ಫಾರೆಸ್ಟ್ ಇಲಾಖೆ ಪೂರೈಸಬೇಕೆಂದು, ಸಿಮೆಂಟ್ ಅನ್ನು ನಿರ್ಮಿತಿ ಕೇಂದ್ರದವರು ಕೊಡಬೇಕೆಂದು ತಾಕೀತು ಮಾಡಿದ್ದಾನೆ. ಇದೆಲ್ಲದರಿಂದಾಗಿ ಜಿಲ್ಲೆಯಾದ್ಯಂತ ಪ್ರಕಾಶನ ಕಳಪೆ ಇಟ್ಟಿಗೆಗಳೇ ಇಟ್ಟಾಡ ಹತ್ತಿವೆ!

ಈತನ ಅಧೀನದಲ್ಲಿ ಬರುವ ಮೂವತ್ತಾರು ಇಲಾಖೆಗಳ ಪ್ರತೀ ಕದಲಿಕೆಗಳೂ ಪೂರ್ವನಿಯೋಜಿತವಾಗಿರುತ್ತವೆ. ಅವುಗಳಿಗೆ ಗುಂಡುಪಿನ್ ಖರೀದಿಯಿಂದ ಮೊದಲ್ಗೊಂಡು ಪೀಠೋಪಕರಣ ಖರೀದಿಯವರೆಗೆ ಪ್ರತಿಯೊಂದೂ ಪ್ರಕಾಶನ ಕಣ್ಣಳತೆಯಲ್ಲೇ ಆಗುವಂಥ ವ್ಯವಸ್ಥೆಯಿದೆ. ಈತ ಸೂಚಿಸಿದ ಬೇನಾಮಿ ಸಂಸ್ಥೆಗಳಿಂದಲೇ ಅದಕ್ಕೆಲ್ಲ ಬಿಲ್ ಮಾಡಬೇಕೆಂಬ ಫರ್ಮಾನು ಹೊರಡಿಸಿದ್ದಾನೆ. ಸೆಕ್ರೆಟರಿಗಳು ಹಾಗೂ ಪಿಡಿಒಗಳು ಪ್ರಕಾಶನ ಬೇಕುಬೇಡಗಳನ್ನು ಪೂರೈಸುವ ಸಂದಿಗ್ಧತೆಗೆ ಸಿಕ್ಕಿದ್ದಾರೆ. ಸದ್ಯ ಈತನ ಸಕಲ ಡೀಲ್‌ಗಳಿಗೂ ಹೋಟೆಲ್ ಶಿವಸಂಗಮವೇ ಅಡ್ಡಾ. ಪ್ರಕಾಶ ತನ್ನ ಗೆಳೆಯ ಶಿವಮೊಗ್ಗದ ಪ್ರಕಾಶ್ ಎಂಬಾತನೊಂದಿಗೆ ಶಿವಸಂಗಮ್‌ಗೆ ದೌಡಾಯಿಸಿದನೆಂದರೆ ಏನಾದರೊಂದು ಡೀಲು ನಡೆಯುತ್ತದೆಂದೇ ಅರ್ಥ.

ಪ್ರಕಾಶನ ಘಟಿಂಗತನ ಎಂಥಾದ್ದಿದೆಯೆಂದರೆ, ತನಗೆ ಬಂದ ದೂರುಗಳ ಬಗ್ಗೆ ಪರಾಮರ್ಶಿಸಿ ತನಿಖೆ ನಡೆಸುವ ಬದಲು ಅದಕ್ಕೆ ಕಾರಣರಾದವರನ್ನೇ ಬ್ಲಾಕ್‌ಮೇಲ್ ಮಾಡಿ ಹಣಗುಂಜುತ್ತಾನೆ. ಇನ್ನುಳಿದಂತೆ ಜಿಲ್ಲೆಯಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿ ನಡೆದಿರುವ ಅಷ್ಟೂ ಅವ್ಯವಹಾರಗಳಲ್ಲಿ ಪ್ರಕಾಶನ ನೆರಳಿದೆ. ಈ ಯೋಜನೆಯಡಿಯಲ್ಲಿ ಫಲಾನುಭವಿಗಳಾಗಿರುವ ಅನೇಕರು ಸತ್ತು ಬಹುಕಾಲವಾಗಿದೆ! ಇಂಥಾ ಬೋಗಸ್ ಹೆಸರುಗಳಿಗೆ ಹಣ ಸಂದಾಯ ಮಾಡೋ ಕೆಲಸವನ್ನು ಪಿಡಿಒ, ಸೆಕ್ರೆಟರಿಗಳು ಬಹು ಆಸ್ಥೆಯಿಂದ ಮಾಡಹತ್ತಿದ್ದಾರೆ. ಕೆಲವರಂತೂ ತಾವೇ ಆ ಹಣವನ್ನು ನಗದು ಮಾಡಿಕೊಳ್ಳುತ್ತಿದ್ದಾರೆ. ಇವೆಲ್ಲವನ್ನು ಕಂಡೂಕಾಣದಂತಿರುವ ಪ್ರಕಾಶ್ ಎಲ್ಲದರಿಂದಲೂ ಕಮಾಯಿಸಿಕೊಂಡು ಹಾಯಾಗಿದ್ದಾನೆ.

ಸಂಸದ ಗದ್ದಿಗೌಡರ್, ಉಸ್ತುವಾರಿ ಸಚಿವ ಕಾರಜೋಳನ ಸಾಥ್‌ನೊಂದಿಗೆ ಮೆರೆದಾಡುತ್ತಿರುವ ಪ್ರಕಾಶ್ ಮೂಲತಃ ಶಿವಮೊಗ್ಗದವನು. 'ಯಡಿಯೂರಪ್ಪ ನನಗೆ ಕ್ಲೋಸು. ಈಶ್ವರಪ್ಪ ನನ್ನ ಚಿಕ್ಕಪ್ಪ' ಅಂತ ಬಿಡುಬೀಸಾಗಿ ಭೋಂಗು ಬಿಡಬಲ್ಲ ಈತ ಆ ಬಲದಿಂದಲೇ ಎಲ್ಲವನ್ನೂ ದಕ್ಕಿಸಿಕೊಳ್ಳುತ್ತಿದ್ದಾನೆ. ಇವನ ಕೈಕೆಳಗಿನ ಕೆಲ ಪ್ರಾಮಾಣಿಕ ಅಧಿಕಾರಿಗಳೂ ಅವನ್ನೆಲ್ಲ ಸತ್ಯವೆಂದು ನಂಬಿದ್ದಾರೆ. 'ಏನ್ಮಾಡೋದು ಸಾರ್. ಅವ್ರು ಸಿಎಂ ಸಾಹೇಬ್ರ ಆಪ್ತರು' ಅಂತ ಅಸಹಾಯಕತೆ ತೋಡಿಕೊಳ್ಳುತ್ತಾರೆ!

ಇಂಥವನನ್ನು ಆದಷ್ಟು ಬೇಗ ಒದ್ದೋಡಿಸದಿದ್ದರೆ ಬಾಗಲಕೋಟೆ ಜಿಲ್ಲೆ ಖಂಡಿತಾ ಬರಖತ್ತಾಗುವುದಿಲ್ಲ.

• ಮೇಘರಾಜ್

ಬಾಗಲಕೋಟೆ ಜಿಪಂ ಘಟಿಂಗ ಸಿಇಒ ಪ್ರಕಾಶನ
ಕಮಾಯಿ ಕಥೆ!

ಕೆಲಸದವರಿಗೆ ಕಿರುಕುಳ

ಯಾರಿಗೇ ಆದರೂ ಹಡಬೆ ದುಡ್ಡು ಕೈಸೇರುತ್ತಲೇ ದುಷ್ಟತನಗಳು ಮೈಗೂಡುವುದು ಸಹಜ. ಅಂಥ ಹಣದಲ್ಲೇ ಉಳ್ಳಾಡುತ್ತಿರುವ ಪ್ರಕಾಶ್ ಸದ್ಯ ದುಷ್ಟತನಗಳ ಗುಡಾಣವಾಗಿ ಬದಲಾಗಿದ್ದಾನೆ.

ಈತ ಮೂಲತಃ ಶಿವಮೊಗ್ಗದವನು. ಇವನ ಹೆಂಡತಿ ಭದ್ರಾವತಿಯ ಕಾಲೇಜೊಂದರಲ್ಲಿ ಲೆಕ್ಚರರ್ ಆಗಿರುವ ಸುಸಂಸ್ಕೃತ ಹೆಣ್ಣುಮಗಳು. ಸದ್ಯ ಪ್ರಕಾಶ್ ಬಾಗಲಕೋಟೆಯ ಕ್ವಾಟರ್ಸ್‌ನಲ್ಲಿ ಒಂಟಿ ಗೂಳಿಯಂತೆ ವಾಸವಿದ್ದಾನೆ. ಮನೆಗೆಲಸಕ್ಕೆಂದು ಗಂಡಹೆಂಡತಿಯರಿಬ್ಬರನ್ನು ಇಟ್ಟುಕೊಂಡಿದ್ದ ಪ್ರಕಾಶ ಅವರಿಗೆ ಇನ್ನಿಲ್ಲದಂತೆ ಕಿರುಕುಳ ನೀಡಿದ್ದ. ಈತ ಎಂಥಾ ದುಷ್ಟನೆಂದರೆ ಈ ದಂಪತಿಗೆ ಸರಿಯಾಗಿ ಸಂಬಳವನ್ನೂ ನೀಡದೆ ಕೈಯೆತ್ತಿದ್ದ.

ನೊಂದ ಆ ದಂಪತಿ ಈ ವಿಚಾರವನ್ನು ಪತ್ರಕರ್ತರ ಬಳಿ ಹೇಳಿಕೊಂಡಿದ್ದರು. ಆಮೀನಗಡದ ಪತ್ರಕರ್ತರೊಬ್ಬರು ಪ್ರಕಾಶನ ಭಂಡತನವನ್ನೆಲ್ಲಾ ಸ್ಥಳೀಯ ಪತ್ರಿಕೆಯೊಂದರಲ್ಲಿ ಜಾಲಾಡಿದ್ದರು. ಇದರಿಂದ ಕಂಗಾಲಾದ ಪ್ರಕಾಶ್ ಪೊಲೀಸರನ್ನು ಛೂಬಿಟ್ಟು ಆ ಪತ್ರಕರ್ತನನ್ನ ಪರಿಪರಿಯಾಗಿ ಕಾಡಿಸಿದ್ದ. ಜೊತೆಗೆ ನೊಂದ ದಂಪತಿಯನ್ನು ಊರು ಬಿಡಿಸಿದ. ಇದು ಪ್ರಕಾಶನ ಘಟಿಂಗತನಕ್ಕೆ ಸ್ಪಷ್ಟ ಸಾಕ್ಷಿಯಂಥ ಘಟನೆ.

ಶಾಸಕರ ಖರೀದಿಗೆ 200 ಕೋಟಿ
ಎಮ್ಮೆಲ್ಲೆಗೆ ತಲಾ 20 ಕೋಟಿ

• ರಾ.ಸೋಮನಾಥ್

ಅರಬಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ, ಬಸವನಬಾಗೇವಾಡಿಯ ಸಂಗಪ್ಪ ಬೆಳ್ಳುಬ್ಬಿ, ಸಾಗರದ ಬೇಳೂರು ಗೋಪಾಲಕೃಷ್ಣ ಮತ್ತು ಕಾರವಾರದ ಆನಂದ್ ಅಸ್ನೋಟಿಕರ್‌ಗೆ ಮಂತ್ರಿಗಿರಿಯಂತೆ!

ಕೊಳ್ಳೇಗಾಲದ ಜಿ.ಎನ್. ನಂಜುಂಡಸ್ವಾಮಿಯನ್ನು ತಕ್ಷಣಕ್ಕಲ್ಲದಿದ್ದರೂ ಕಾಲಕ್ರಮೇಣ ಮಂತ್ರಿ ಮಾಡುವುದು ಗ್ಯಾರಂಟಿಯಂತೆ!

ಮಿಕ್ಕಂತೆ ಕೆಜಿಎಫ್ ಶಾಸಕ ಸಂಪಂಗಿ, ದೇವದುರ್ಗದ ಶಿವನಗೌಡ ನಾಯಕ್, ಚಾಮರಾಜನಗರದ ಶಂಕರಲಿಂಗೇಗೌಡ, ಇಂಡಿಯ ಸಾರ್ವಭೌಮ ಬಗಲಿ, ಕಾಗವಾಡದ ಭರಮಗೌಡ ಕಾಗೆ, ನೆಲಮಂಗಲದ ನಾಗರಾಜ್‌ಗೆ ತಲಾ 20 ಕೋಟಿಯಂತೆ!

ಇದು ಹನ್ನೊಂದು ಮಂದಿ ಅತೃಪ್ತ ಬಿಜೆಪಿ ಶಾಸಕರಿಗೆ ಮುಖ್ಯಮಂತ್ರಿ ಯಡ್ಡಿ ದಯಪಾಲಿಸಿದ ವರದಾನವಾದರೆ, ಇನ್ನು ಪಕ್ಷೇತರರಾದ ಕನಕಗಿರಿಯ ಶಿವರಾಜ್ ತಂಗಡಗಿ, ಹಿರಿಯೂರಿನ ಸುಧಾಕರ್, ಹೊಸದುರ್ಗದ ಗೂಳಿಹಟ್ಟಿ ಶೇಖರ್, ಪಾವಗಡದ ವೆಂಕಟರಮಣಪ್ಪ ಮತ್ತು ಮಳವಳ್ಳಿಯ ನರೇಂದ್ರ ಸ್ವಾಮಿಗೆ ಕನಿಷ್ಠ ಹತ್ತರಿಂದ ಹದಿನೈದು ಕೋಟಿಯ ತನಕ ಸಂದಾಯವಾಗಿದೆಯಂತೆ!


ಕಾಗೆ


ಜಾರಕಿಹೊಳಿ


ಶಿವನಗೌಡ





ಸುಪ್ರೀಂಕೋರ್ಟ್ 11 ಮಂದಿ ಬಿಜೆಪಿ ಶಾಸಕರ ಜೊತೆ ಐವರು ಪಕ್ಷೇತರ ಅನರ್ಹತೆಯನ್ನು ರದ್ದು ಗೊಳಿಸಿದ್ದೇ ತಡ, ಮಗ ರಾಘವೇಂದ್ರನನ್ನು ಬಿಟ್ಟು ಕುದುರೆ ಖರೀದಿಗೆ ನಿಂತ ಮುಖ್ಯಮಂತ್ರಿ ಯಡ್ಡಿ ಒಟ್ಟು 16 ಮಂದಿ ಶಾಸಕರನ್ನು ಬುಟ್ಟಿಗೆ ಹಾಕಿಕೊಳ್ಳಲು ಸುರಿದ ರೊಕ್ಕದ ಒಟ್ಟು ಮೊತ್ತ ಕಮ್ಮಿಯೆಂದರೂ ಇನ್ನೂರು ಕೋಟಿ. ತಲಾ ಇಪ್ಪತ್ತು ಕೋಟಿಯಂತೆ ಏಳು ಮಂದಿಗೆ ನೂರಾ ನಲವತ್ತು ಕೋಟಿಯಾದರೆ ಉಳಿಕೆ ಪಕ್ಷೇತರ ಪೈಕಿ ಇಬ್ಬರಿಗೆ 15 ಕೋಟಿ ಕೊಟ್ಟು ಉಳಿದ ಮೂವರಿಗೂ ತಲಾ ಹತ್ತು ಕೋಟಿಯಂತೆ ಕೊಟ್ಟರೂ ಹಾಕಿದ ಬಿಸ್ಕೇಟಿನ ಒಟ್ಟು ಮೊತ್ತ 200 ಕೋಟಿಯಾಗಲೇಬೇಕು.

ನಾಲ್ವರಿಗೆ ಮಂತ್ರಿಗಿರಿ ಮತ್ತು ಉಳಿಕೆ ಏಳೂ ಮಂದಿ ಬಿಜೆಪಿ ಶಾಸಕರಿಗೂ ನಿಗಮ ಮಂಡಳಿಗಳ ಅಧ್ಯಕ್ಷಗಿರಿಯ ಆಶ್ವಾಸನೆಯನ್ನೂ ಯಡ್ಡಿ ಕೊಟ್ಟಿದ್ದಾರಂತೆ. ಅತ್ತ ದೆಹಲಿಯಲ್ಲಿ ಸುಪ್ರೀಂಕೋರ್ಟ್ 16 ಮಂದಿ ಶಾಸಕರ ಅನರ್ಹತೆಯನ್ನು ರದ್ದುಗೊಳಿಸಿದ್ದೇ ತಡ ಸೂಟ್‌ಕೇಸ್ ಕಾರ್ಯಾಚರಣೆಗೆ ಮುಖ್ಯಮಂತ್ರಿಯ ಗ್ರೀನ್ ಸಿಗ್ನಲ್ ಸಿಕ್ಕಿದೆ. ಮೊದಲು ರೇಣುಕಾಚಾರ್ಯನನ್ನು ಮುಂದೆ ಬಿಡುವುದು, ಆತ ಎಲ್ಲರನ್ನೂ ಸಮಾಧಾನ ಮಾಡಿದ ಮೇಲೆ ಎರಡನೇ ರೌಂಡ್ ಮಾತುಕತೆಗೆಂದು ಉಮೇಶ್ ಕತ್ತಿ ಮತ್ತು ಗೋವಿಂದ ಕಾರಜೋಳರನ್ನು ಕಳಿಸುವುದು. ಎಲ್ಲವೂ ಆಖೈರಾದ ನಂತರವೇ ಮಗ ರಾಘವೇಂದ್ರ ಎಂಟ್ರಿ ಕೊಟ್ಟು ಫೈನಲ್ ಸೆಟಲ್‌ಮೆಂಟನ್ನು ಅಂತಿಮಗೊಳಿಸುವುದು.

ಇದು ಮೇ 13 ರ ಸುಪ್ರೀಂಕೋರ್ಟ್ ತೀರ್ಪಿನ ಮಾರನೇ ದಿನವೇ ಮುಖ್ಯಮಂತ್ರಿ ನಡೆಸಿದ ನಿಗೂಢ ವ್ಯವಹಾರದ ರೂಪುರೇಷೆಯಷ್ಟೆ. ಮೇ 14 ಕ್ಕೇ ದೆಹಲಿಯ ವಿಮಾನ ಹತ್ತಿದ ಅಬಕಾರಿ ಸಚಿವ ರೇಣುಕಾಚಾರ್ಯನ ಜೊತೆ ಉಮೇಶ್ ಕತ್ತಿ ಮತ್ತು ಕಾರಜೋಳ ಕೂಡ ಹೋಗಿದ್ದಾರೆ. ಹಿಂದೆ ಗೋವಾದಲ್ಲಿದ್ದಾಗಲೇ ಜೊತೆಗಿದ್ದ ಶಾಸಕ ಮಿತ್ರರ ಕೈಯಲ್ಲಿ ಒದೆ ತಿಂದು ಬಂದವನು ರೇಣುಕಾಚಾರ್ಯ. ದೆಹಲಿಯ ಸಫ್ದರ್‌ಜಂಗ್ ಎನ್‌ಕ್ಲೇವ್‌ನ ಹೋಟೆಲ್ ಶ್ರೇಯಸ್‌ನಲ್ಲಿ ತಂಗಿದ್ದ ಅಷ್ಟೂ ಶಾಸಕರ ನೇತೃತ್ವ ವಹಿಸಿದ್ದ ಬಾಲಚಂದ್ರ ಜಾರಕಿಹೊಳಿಗಿಂತಲೂ ರೇಣುಕಾಚಾರ್ಯನಿಗೆ ಲಿಂಕ್ ಅಂತ ಇದ್ದದ್ದು ಬೇಳೂರು ಗೋಪಾಲಕೃಷ್ಣನ ಜೊತೆ ಮಾತ್ರ. ಅಪರಾಹ್ನದ ಹೊತ್ತಿಗೇ ಸಂಪಂಗಿ, ಗೂಳಿಹಟ್ಟಿ, ಶಿವನಗೌಡ ಮುಂತಾದವರೆಲ್ಲ ವಿಸ್ಕಿ ಏರಿಸಿ ಟೈಟಾಗಿದ್ದರು.


ಕುಮಾರಸ್ವಾಮಿ


ಶಂಕರಲಿಂಗೇಗೌಡ


ಯಡ್ಡಿ ಮಗ ರಾಘು

ರೇಣುಕಾಚಾರ್ಯ ಬರುತ್ತಿದ್ದಾನೆಂಬ ಮಾಹಿತಿ ಸಿಕ್ಕಿದ್ದೇ ತಡ, ಸಂಪಂಗಿ 'ಆ ..... ಸೂ..... ಮಗನ್ನ ಒಳಿಕ್ಕೇ ಬಿಟ್ಕೋಬ್ಯಾಡ್ರೀ.....!' ಎಂದು ಒಂದೇ ಏಟಿಗೆ ಝಾಡಿಸಿಬಿಟ್ಟ. ಜೊತೆಗೇ ಇದ್ದ ಗೂಳಿಹಟ್ಟಿ 'ನನ್ಮಗ ಏನಕ್ಕೆ ಬರ್‍ತ್ವಂತೆ. ಮತ್ತೆ ಯಾಮಾರಿಸೋದಕ್ಕಾ?....' ಎಂದು ಅಮ್ಮನ್-ಅಕ್ಕನ್ ಪ್ರಯೋಗಿಸಲಾರಂಭಿಸಿದ್ದ. ಕುಡಿದು ಟೈಟಾಗಿದ್ದ ಇಂಥವರನ್ನೆಲ್ಲ ಒಂದು ಹಂತಕ್ಕೆ ತರುವ ಹೊತ್ತಿಗಾಗಲೇ ಬೇಳೂರು ಗೋಪಾಲಕೃಷ್ಣ ಎರಡು ಪೆಗ್ಗು ಏರಿಸಿದ್ದ. ಕತ್ತಿ ಮತ್ತು ಕಾರಜೋಳನ್ನು ಕೆಳಗೆ ಕಾರಲ್ಲೇ ಕೂರಿಸಿ 'ನಾನೆಲ್ಲ ಸರಿ ಮಾಡಿದ ಮೇಲೆ ನೀವು ಬರುವಿರಂತೆ' ಎಂದಿದ್ದ. ಆದರೂ ಏಕಾಏಕಿ ರೂಮಿಗೆ ಎಂಟ್ರಿ ಕೊಟ್ಟ ರೇಣುಕಾಚಾರ್ಯ ಮಾತಿಗೆ ಮೊದಲೇ ಸಂಪಂಗಿ, ಗೂಳಿಹಟ್ಟಿಯ ಮುಂದೆ ಗೂನು ಬಾಗಿಸಿ 'ನನ್ನ ಮೇಲೆ ಸಿಟ್ಟಿದ್ರೆ ಮೊದ್ಲು ನಾಲ್ಕೇಟು ಬಾರಿಸಿಬಿಡಿ. ಹೊಡಿರೀಪ್ಪಾ... ನಿಮಗೆ ಸಂತೋಷ ಆಗೋ ಹಾಗಿದ್ರೆ ಮೊದ್ಲು ನನ್ನನ್ನ ಹೊಡ್ದು ಕೋಪ ತೀರಿಸ್ಕೊಳ್ಳಿ' ಎಂದುಬಿಟ್ಟ.

ಇದು ರೇಣುಕನ ಮಾನಗೆಟ್ಟ ಟೆಕ್ನಿಕ್ಕಾದರೆ ಟೈಟಾಗಿದ್ದ ಶಾಸಕರಾದರೂ ಏನಂಥ ಹೊಡೆದಾರು? ಅಸ್ನೋಟಿಕರ್ ಮೊದಲಾಗಿ ಬಗಲಿಯ ತನಕ ಪ್ರತಿಯೊಬ್ಬರೂ ರೇಣುಕನನ್ನು ಹೀಯಾಳಿಸಿದ್ದಾರೆ. 'ನೋಡಪ್ಪಾ ಆಗಿದ್ದೆಲ್ಲಾ ಒಳ್ಳೇದಕ್ಕೇ. ನಾನು ಬಂದಿರೋದು ನಿಮಗಾಗಿರೋ ಲಾಸು ಕಟ್ಟಿಕೊಡೋದಕ್ಕೆ, ಮೊದ್ಲು ಲಾಭ ಮಾಡ್ಕೊಳ್ಳೋದನ್ನು ನೋಡಿ.....' ಎಂದು ಕಪಟ ನಗೆ ನಕ್ಕ ರೇಣುಕಾಚಾರ್ಯನನ್ನು ಅಲ್ಲಿದ್ದವರ್‍ಯಾರೂ ನಂಬುವ ಸ್ಥಿತಿಯಲ್ಲಿರಲಿಲ್ಲ.

ಇಷ್ಟಾಗಿದ್ದೇ ರೇಣುಕ ಕೆಳಗೆ ಕಾರಲ್ಲಿ ಹೊಂಚಿ ಕೂತಿದ್ದ ಕತ್ತಿ, ಕಾರಜೋಳರಿಗೆ ಫೋನ್ ಮಾಡಿದ್ದಾನೆ. ಐದೇ ನಿಮಿಷಕ್ಕೆ ಅವರಿಬ್ಬರೂ ರೂಮಿನಲ್ಲಿ ಪ್ರತ್ಯಕ್ಷರಾಗಿದ್ದಾರೆ. ಹೆಚ್ಚುಕಮ್ಮಿ ಅರ್ಧ ಗಂಟೆ ಕಾಲ ಜಾರಕಿ ಹೊಳಿ, ಬೇಳೂರು, ಬೆಳ್ಳುಬ್ಬಿ ಶಿವನಗೌಡ ಮುಂತಾದವರನ್ನು ಕೂರಿಸಿ ಮನವೊಲಿಸಿದ ಕತ್ತಿ, ಕಾರಜೋಳ ಮೂರನೇ ರೌಂಡಿಗೆ ಯಡ್ಡಿ ಮಗ ರಾಘವೇಂದ್ರನನ್ನು ಕರೆಸಿಕೊಂಡಿದ್ದಾರೆ. ಆ ಹೊತ್ತಿಗಾಗಲೇ ರೇಟು ನಿಕ್ಕಿಯಾಗಿತ್ತು. ಮೊದಲ ಹಂತದಲ್ಲಿ ಜಾರಕಿಹೊಳಿ, ಬೇಳೂರು, ಶಿವನಗೌಡ ಮತ್ತು ಬೆಳ್ಳುಬ್ಬಿಯನ್ನು ಮಂತ್ರಿ ಮಾಡುವುದು. ಎರಡನೇ ಹಂತದಲ್ಲಿ ಅಸ್ನೋಟಿಕರ್‌ಗೆ ಮಂತ್ರಿಗಾದಿ ಕಲ್ಪಿಸುವುದು. ಈ ಮಧ್ಯೆಯೇ ಕೊಳ್ಳೇಗಾಲದ ನಂಜುಂಡಸ್ವಾಮಿಗೆ ಮಂತ್ರಿಗಿರಿ ಕಲ್ಪಿಸಲು ಏನೇನು ದಬಾವು ಹೇರಬೇಕೋ ಅದಕ್ಕಾಗಿ ಹದಿನಾರೂ ಮಂದಿ ಶಾಸಕರು ಒಗ್ಗಟ್ಟಾಗಿ ಯತ್ನಿಸುವುದು. ಅಲ್ಲಿಯ ತನಕ ಏಳು ಮಂದಿ ಶಾಸಕರಿಗೆ ತಲಾ ಇಪ್ಪತ್ತು ಕೋಟಿಯಂತೆ ಯಡ್ಡಿ ದಂಡ ಕಟ್ಟಬೇಕು. ಪಕ್ಷೇತರರ ಪೈಕಿ ಗೂಳಿಹಟ್ಟಿ ಮತ್ತು ವೆಂಕಟರಮಣಪ್ಪ ತಲಾ ಹದಿನೈದು ಕೋಟಿಗೆ ಒಪ್ಪಿಗೆ ಸೂಚಿಸಿದರೆ ಮಿಕ್ಕಂತೆ ನರೇಂದ್ರ ಸ್ವಾಮಿ, ಸುಧಾಕರ್ ಮತ್ತು ತಂಗಡಗಿಗೆ ತಲಾ ಹತ್ತರಂತೆ ಯಡ್ಡಿ ತಪ್ಪು ಕಾಣಿಕೆ ಕಟ್ಟುವುದು!


ಇಂಥ ಡೀಲೊಂದನ್ನು ಕತ್ತಿ ಮತ್ತು ಕಾರಜೋಳ ಕುದುರಿಸುತ್ತಿದ್ದಂತೆಯೇ ಯಡ್ಡಿ ಮಗ ರಾಘು ತನ್ನ ಮೊಬೈಲಿನಲ್ಲಿ ಅಪ್ಪನಿಗೆ ರಿಂಗಾಯಿಸಿ ಜಾರಕಿಹೊಳಿಗೆ ಫೋನ್ ಕೊಟ್ಟಿದ್ದಾನೆ. ಯಡ್ಡಿ ಜಾರಕಿಹೊಳಿ ಮಾತ್ರವಲ್ಲದೆ ಬೇಳೂರು, ಬಗಲಿ, ಬೆಳ್ಳುಬ್ಬಿ, ಅಸ್ನೋಟಿಕರ್ ಎಲ್ಲರ ಜೊತೆಗೂ ಮಾತಾಡಿದ್ದಾರೆ. ಮರುದಿನ ಅಂದರೆ ಮೇ 15 ರ ಭಾನುವಾರ ಬೆಳಿಗ್ಗೆಯೇ ಹದಿನಾರೂ ಮಂದಿ ಬೆಂಗಳೂರಿನ ವಿಮಾನ ಹತ್ತಿದ್ದಾರೆ. ಬೆಂಗಳೂರಿನ ಎಚ್.ಎ.ಎಲ್. ವಿಮಾನ ನಿಲ್ದಾಣದಲ್ಲಿಳಿದು ನೇರವಾಗಿ ಮುಖ್ಯಮಂತ್ರಿ ಮನೆಗೇ ಬಂದ ಶಾಸಕರ ಜೊತೆ ಯಡ್ಡಿ ಮಗ ರಾಘು, ಕತ್ತಿ, ಕಾರಜೋಳ ಎಲ್ಲರೂ ಕೂತು ಯಡ್ಡಿ ಜೊತೆ ಚೌಕಾಸಿ ನಡೆಸಿದ್ದಾರೆ. ಬಹುಶಃ ಈ ಹೊತ್ತಿಗೆಲ್ಲಾ ಆಯಾ ಶಾಸಕರ ಮನೆ ಬಾಗಿಲಿಗೇ ಮೊತ್ತ ತಲುಪಾಗಿತ್ತು, ಬೆನ್ನಲ್ಲೇ ರಾಷ್ಟ್ರಪತಿ ಆಳ್ವಿಕೆಗೆಂದು ರಾಜ್ಯಪಾಲರು ಮಾಡಿದ ಶಿಫಾರಸ್ಸು ದೆಹಲಿ ತಲುಪಿತ್ತು.











ಒಂದೆಡೆ ಸುಪ್ರೀಂ ಕೋರ್ಟ್ ತೀರ್ಪು ಮತ್ತೊಂದೆಡೆ ರಾಜ್ಯಪಾಲರ ಪಟಾಕಿಯಿಂದಾಗಿ ಅತೃಪ್ತ ಶಾಸಕರ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಗಿತ್ತು. ಕಳೆದ ಆರು ತಿಂಗಳ ದುರ್ಗತಿಗೆ ಪರಿಹಾರವೋ ಎಂಬಂತೆ ಕೋಟಿ ಕೋಟಿಯ ರೊಕ್ಕ ಏಕಾಏಕಿ ಕೈಗೂಡಿದ್ದೂ ಅಲ್ಲದೆ ಮಂತ್ರಿಗಿರಿ, ನಿಗಮ-ಮಂಡಳಿಗಳ ಅಧ್ಯಕ್ಷಗಿರಿ ಎಲ್ಲವೂ ಒಟ್ಟೊಟ್ಟಿಗೇ ಹುಡುಕಿ ಬಂದಂತಾಗಿತ್ತು. ಅಷ್ಟಕ್ಕೂ ಈ ಹದಿನಾರು ಮಂದಿಗೆ ವಿಪರೀತ ಸಿಟ್ಟಿದ್ದದ್ದು ಯಡ್ಡಿ ಮೇಲೆಯೇ. ವಿಶೇಷವೆಂದರೆ ಹಿಂದೆಲ್ಲ ಮೇಲೆ ಬಿದ್ದು ಡೀಲಿಗಿಳಿಯುತ್ತಿದ್ದ ಗಣಿ ರೆಡ್ಡಿಗಳು ಈ ಬಾರಿ ಮಾತ್ರ ತಮಗೇನೂ ಸಂಬಂಧವೇ ಇಲ್ಲ ಎಂಬಂತೆ ತಟಸ್ಥವಾಗುಳಿದಿದ್ದೇ ವಿಶೇಷವಾಗಿತ್ತು.

ಅದು ಗಣಿ ರೆಡ್ಡಿಗಳು ಎಸಗಿದ ದ್ರೋಹ. ಶುರುವಿನಲ್ಲಿ ಯಡ್ಡಿ ವಿರುದ್ಧ ಅತೃಪ್ತಿ ಹುಟ್ಟುಹಾಕಿ ನಲವತ್ತಕ್ಕೂ ಅಧಿಕ ಶಾಸಕರನ್ನು ಒಟ್ಟು ಮಾಡಿ ಹೈದ್ರಾಬಾದಿಗೆ ಕರೆದೊಯ್ದ ಜನಾರ್ದನ ರೆಡ್ಡಿ ಇಂಥ ಅತೃಪ್ತರನ್ನು ಬಳಸಿಕೊಂಡಿದ್ದು ತನ್ನ ಸ್ವಾರ್ಥಕ್ಕೆ. ತನಗೆ ನಿಯತ್ತಾಗಿದ್ದ ಅಧಿಕಾರಿಗಳನ್ನು ಮತ್ತೆ ಬಳ್ಳಾರಿಗೆ ಹಾಕಿಸಿಕೊಂಡು ಅದಿರು ಲೂಟಿಗೆ ಅನುಕೂಲ ಮಾಡಿಕೊಂಡ. ಇಷ್ಟೆಲ್ಲಕ್ಕೂ ಕಾರಣರಾದ ಅತೃಪ್ತ ಶಾಸಕರನ್ನು ಕಾಲಕ್ರಮೇಣ ನಿರ್ಲಕ್ಷಿಸಲಾರಂಭಿಸಿದ. ಹೋಗಲಿ ಮುಖ್ಯಮಂತ್ರಿಯಾದರೂ ವಿಶ್ವಾಸದಿಂದ ಕಂಡು ಮೃದುವಿದ್ದರೆ ಅದರ ಕತೆ ಬೇರೆಯೇ ಆಗುತ್ತಿತ್ತು. ಆದರೆ ಯಡ್ಡಿ ಯಾರೆಲ್ಲ ಈ ರೀತಿ ಗಣಿರೆಡ್ಡಿಗಳ ಜೊತೆ ಗುರುತಿಸಿಕೊಂಡಿದ್ದರೋ ಅಂಥ ಶಾಸಕರೆಲ್ಲರ ಮೇಲೂ ಜಿದ್ದಿಗೆ ಬಿದ್ದರು. ಬಗಲಿ, ಸಂಪಂಗಿ, ಬೆಳ್ಳುಬ್ಬಿ, ನೆಲಮಂಗಲದ ನಾಗರಾಜ್, ಬೇಳೂರು, ಗೂಳಿಹಟ್ಟಿಯಂಥ ಅನೇಕ ಶಾಸಕರನ್ನು ಅಸ್ಪೃಶ್ಯರಂತೆ ಕಂಡರು. ಯಡ್ಡಿಗಿಂತಲೂ ಮಗ ವಿಜಯೇಂದ್ರ 'ಆ ರೆಡ್ಡಿಗಳ ಹತ್ರ ಕಿತ್ಕೊಂಡ್ ತಿಂದ್ರಲ್ಲಪ್ಪಾ, ಇಲ್ಲೇನು ಕೀಳೋಕೆ ಬಂದಿದ್ದೀರ. ಹೋಗಿ ರೆಡ್ಡಿಗಳ ಹತ್ರಾನೇ ಕಿತ್ಕೊಳ್ಳೀ......!' ಎಂದು ಸಿಕ್ಕಿಸಿಕ್ಕಲ್ಲಿ ಸಂಪಂಗಿ, ನಾಗರಾಜ್ ಥರದವರನ್ನು ಹೀಯಾಳಿಸುತ್ತಿದ್ದ. ಕರಂದ್ಲಾಜೆ ಮತ್ತು ಬಳಿಗಾರ್‌ರನ್ನು ಬಲಿಪಡೆದ ರೆಡ್ಡಿಗಳ ತಾಕತ್ತು ಮತ್ತು ವರ್ಚಸ್ಸು ಉಲ್ಬಣಿಸಿತ್ತೇ ಹೊರತು ಬೆಳ್ಳುಬ್ಬಿ, ಬಗಲಿ, ಕಾಗೆ, ನಂಜುಂಡಸ್ವಾಮಿಯಂಥವರನ್ನು ಯಕಶ್ಚಿತ್ ಗುಮಾಸ್ತನೂ ಮೂಸದಂತಾಯ್ತು.

ಮತ್ತೊಂದೆಡೆ ಮೂಲೆಗುಂಪಾದ ಇಂಥ ಶಾಸಕರ ವಿರುದ್ಧ ಅವರ ನಿಕಟವರ್ತಿಗಳೇ ತಾತ್ಸಾರ ಮಾಡುವಂತಾಯ್ತು. ಸಾಲದ್ದಕ್ಕೆ ಅವರದೇ ಕ್ಷೇತ್ರದಲ್ಲಿ ಯಡ್ಡಿ ಗ್ಯಾಂಗ್ ಪರ್‍ಯಾಯ ನಾಯಕರನ್ನು ಹುಟ್ಟುಹಾಕಿತ್ತು. ಬೇಳೂರುಗೆ ಪ್ರತಿಯಾಗಿ ಹಾಲಪ್ಪ, ಸಂಪಂಗಿಗೆ ಇದಿರಾಗಿ ಕೃಷ್ಣಯ್ಯ ಶೆಟ್ಟಿ, ಅಸ್ನೋಟಿಕರ್‌ನನ್ನು ಮಟ್ಟಾ ಮಾಡಲೆಂದೇ ಸತೀಶ್ ಸೈಲ್ ಎಂಬ ಮರಾಠರ ಹುಡುಗ, ನೆಲಮಂಗಲದ ನಾಗರಾಜು ವಿರುದ್ಧ ಕಡಬಗೆರೆ

ಬೆಳ್ಳುಬ್ಬಿಯ ಫಜೀತಿ


ಬೆಳ್ಳುಬ್ಬಿ


ಯತ್ನಾಳ್

ಉಮೇಶ್ ಕತ್ತಿಗಾಗಿ ಮಂತ್ರಿಗಿರಿಯನ್ನೇ ತ್ಯಾಗ ಮಾಡಿ ಪಕ್ಷನಿಷ್ಠೆ ಮತ್ತು ಮೇಲಿನ ನಿಯತ್ತನ್ನು ಒಟ್ಟೊಟ್ಟಿಗೇ ಮೆರೆದವರು ಬೆಳ್ಳುಬ್ಬಿ. ಬಿಜಾಪುರದ ಗೆ ಬಿಜೆಪಿಯಲ್ಲಿ ಯತ್ನಾಳರದೇ ಆಧಿಪತ್ಯವಿದ್ದ ಕಾಲಕ್ಕೆ ಬೆಳ್ಳುಬ್ಬಿ ಬಸವನ ವಾಡಿಯ ದೈತ್ಯ ಶಿವಾನಂದ ಪಾಟೀಲರನ್ನು ನೆಲಕಚ್ಚಿಸಿದ್ದರು. ಇಂಥಾ ಬ್ಬಿಗೂ ಮು.ಮಂ. ಯಡ್ಡಿಗೂ ಮಧ್ಯೆ ಬತ್ತಿ ಇಟ್ಟವನು ಅಪ್ಪು ಪಟ್ಟಣಶೆಟ್ಟಿ. ರಸ್ವಾಮಿ ಮುಖ್ಯಮಂತ್ರಿ ಕಾಲಕ್ಕೆ ಮಂತ್ರಿಯಾಗಿದ್ದ ಪಟ್ಟಣಶೆಟ್ಟಿಗೆ ಅಧಿಕಾರ ಕೈ-ಬಾಯಿ ಗಲೀಜು ಮಾಡಿಕೊಂಡ. ಯತ್ನಾಳ್ ಬಿಜೆಪಿಯಲ್ಲಿದ್ದಷ್ಟೂ ವರ ಬೂಟು ಪಾಲಿಶ್ ಮಾಡಿಕೊಂಡಿದ್ದು ಯತ್ನಾಳ್ ಬಿಜೆಪಿ ತೊರೆದ ಗಳಿಗೆಗೇ ಅವರ ಬೆನ್ನಿಗೇ ಇರಿದಿದ್ದ.

ಯತ್ನಾಳ್ ಸಂಸದರಾಗಿ ಎಮ್ಮೆಲ್ಲೇಗಿರಿ ಖಾಲಿ ಮಾಡಿದ ಮೇಲೇ ಆ ಪಟ್ಟಣಶೆಟ್ಟಿ ವಕ್ಕರಿಸಿದ್ದು!

ಆದರೆ ದುರಾಶೆ ಬಿಡಬೇಕಲ್ಲ; ಯತ್ನಾಳರೂ ಬಿಜೆಪಿ ತೊರೆದು ಉಮೇಶ್‌ಗಾಗಿ ಬೆಳ್ಳುಬ್ಬಿ ಕೂಡ ಮಂತ್ರಿಗಿರಿ ತ್ಯಾಗ ಮಾಡಿದ ಮೇಲೆ ಇಡೀ ಪುರದ ಬಿಜೆಪಿಗೆ ತಾನೇ ದೊಣ್ಣೆನಾಯಕನಾಗಬೇಕೆಂಬ ದುರ್ಬುದ್ಧಿ ಶೆಟ್ಟಿಯ ತಲೆ ಹೊಕ್ಕಿದೆ. ಬಿಜಾಪುರದ ಬಿಜೆಪಿ ಶಾಸಕ ಪೈಕಿ ನಾಗಠಾಣಾದ ಕಟಕಗೊಂಡ ನರಸತ್ತ ಗಿರಾಕಿ. ಇನ್ನು ಸಾರ್ವಭೌಮ ಬಗಲಿಯ ವಿರುದ್ಧ ಯನ್ನು ಯಾವತ್ತೋ ಎತ್ತಿಕಟ್ಟಿದ್ದಾಗಿದೆ. ಯತ್ನಾಳ್ ಜೊತೆಗಿದ್ದೇ ದೋಖಾ ಮಾಡಿ ಈಗ ನಿರಾಣಿಗೂ ಳಗೇ ಖಾರ ಅರೆಯುತ್ತಾ ಬಿಜಾಪುರದ ಸುಪ್ಪತ್ತಿಗೆಯೇರಲು ಹೊರಟ ಪಟ್ಟಣಶೆಟ್ಟಿಗೆ ಶತಗತಾಯ ಬ್ಬಿಯನ್ನು ತುಳಿಯಲೇಬೇಕಿದೆ.

ಕ್ಷನಿಷ್ಠೆಗೆ ಬಿದ್ದು ಮಂತ್ರಿಗಿರಿಯನ್ನು ತ್ಯಾಗ ಮಾಡಿದ ಬೆಳ್ಳುಬ್ಬಿಗೆ ಯಡ್ಡಿಯೇ ಕೈಕೊಟ್ಟ ಮೇಲೆ ಆಸರೆಯಾದ್ದದ್ದು ರೆಡ್ಡಿಗಳು. ಯಡ್ಡಿ ವಿರುದ್ಧ ಗಣಿ ರೆಡ್ಡಿಗಳು ಹೈದರಾಬಾದ್ ರೆಸಾರ್ಟ್ ಯಾತ್ರೆಯ ಷೋ ಕೊಟ್ಟಾಗಲೂ ಹಾ ಮತ್ತು ಬೇಳೂರು ಪಡೆಯಲ್ಲಿ ಮಂಚೂಣಿಯಲ್ಲಿದ್ದದ್ದು ಬೆಳ್ಳುಬ್ಬಿಯೇ. ಕನಿಷ್ಠ ಈ ಹಂತದಲ್ಲಾದರೂ ಗೆ ಜ್ಞಾನೋದಯವಾಗಿ ತನ್ನ ಬೇಗುದಿಯನ್ನು ಅರ್ಥ ಮಾಡಿಕೊಳ್ಳಬಹುದೆಂಬ ನಿರೀಕ್ಷೆ ಬೆಳ್ಳುಬ್ಬಿಗಿತ್ತು. ಆದರೆ ನಡೆದದ್ದು ಗಣಿರೆಡ್ಡಿ ಮತ್ತು ಯಡ್ಡಿಯ ನಡುವೆಯೇ ಹೊರತು ಬೆಳ್ಳುಬ್ಬಿಯ ಹೊಟ್ಟೆ ಉರಿಯನ್ನು ಯಡ್ಡಿ ಮಾಡಿಕೊಳ್ಳಲೇ ಇಲ್ಲ.

ಎದುರೇ ನಿಂತಿದ್ದರೂ ಮುಖವನ್ನೇ ನೋಡದ ಹಾಗೆ ಹೋಗುವುದು, ಕ್ಷೇತ್ರಕ್ಕೆ ಸಂಬಂಧಪಟ್ಟ ಏನೇ ಕೊಂಡು ಬಂದರೂ ತಿರಸ್ಕಾರದ ನೆಪವೊಡ್ಡಿ ಸಾಗ ಹಾಕುವುದು, ಸ್ವಂತ ಕ್ಷೇತ್ರದಲ್ಲಿ ಪರ್ಯಾಯವಾಗಿ ಪುಡಿ ರುಗಳನ್ನು ಹುಟ್ಟಿಹಾಕಿದ್ದು, ಯಾವುದೇ ಇಲಾಖೆಯಲ್ಲಿ ಬೆಳ್ಳುಬ್ಬಿ ಮಾತೆಂದರೆ ನಯಾಪೈಸೆಯ ಕಿಮ್ಮತ್ತಿಲ್ಲದಂತೆ ದ್ದು ಇತ್ಯಾದಿ ಕಿರುಕುಳದಿಂದಾಗಿ ಹೈರಾಣಾದ ಬೆಳ್ಳುಬ್ಬಿಗೆ ಯಡ್ಡಿ ವಿರುದ್ಧ ಬಂಡೇಳದೇ ಬೇರೆ ದಾರಿಯಾದರೂ ?

ಕಾರಕಿಹೊಳಿ, ರೇಣುಕಾಚಾರ್ಯರ ನೇತೃತ್ವದಲ್ಲಿ ಮತ್ತೆ ಅತೃಪ್ತರ ದಂಗೆಯಾದಾಗಲೂ ತನ್ನ ಹೊಟ್ಟೆ ಸಂಕಟವನ್ನು ಇನ್ನಾದರೂ ಅರ್ಥ ಮಾಡಿಕೊಳ್ಳಬಹುದೆಂಬ ನಿರೀಕ್ಷೆಯಿತ್ತು. ಅದು ಏನೋ ಮಾಡಲು ಹೋಗಿ ಯೋ ಆದಂತಾಗಿ ಕೊನೆಗೆ ಶಾಸಕತ್ವಕ್ಕೇ ಕುತ್ತಾಗಿ ಹೋಯಿತು. ಮತ್ತೆ ಸುಪ್ರೀಂಕೋರ್ಟ್ ನ್ಯಾಯ ನೀಡುವ ಗೆ ಕುಮಾರಸ್ವಾಮಿಯ ಅಸಲಿಯತ್ತು ಮತ್ತು ಗಣಿ ರೆಡ್ಡಿಗಳ ದೌಲತ್ತು ಎರಡೂ ಅರ್ಥವಾಗಿತ್ತು. ಹಾಗೊಮ್ಮೆ ನಾಮೆಯಿತ್ತರೆ ಮತ್ತೆ ಗೆಲ್ಲುವುದು ಕಷ್ಟ. ಬಂಡೆದ್ದರೆ ಇರುವ ಎಮ್ಮೆಲ್ಲೇಗಿರಿಗೇ ವಕ್ರ. ಇನ್ನುಳಿದ ಎರಡು ವಾದರೂ ಮಂತ್ರಿಗಿರಿ ಸಿಗುವುದಾದರೆ; ಕನಿಷ್ಠ ಒಂದಷ್ಟು ರೊಕ್ಕವಾದರೂ ಗಿಟ್ಟುವುದಾದರೆ ಯಾರಿಗೇನು

ಬೆಳ್ಳುಬ್ಬಿಯ ಪೀಕಲಾಟ ಯಾರಿಗೆ ಅರ್ಥವಾಗಬೇಕು?

., ಬೆಳ್ಳುಬ್ಬಿಯ ನೆತ್ತಿಗೇ ಹೊಡೆದಂತೆ ಹೀಗೆ ಒಬ್ಬೊಬ್ಬರ ವಿರುದ್ಧವೂ ಪ್ರತಿ ನ್ನು ಎತ್ತಿ ಕಟ್ಟಿದ್ದರು ಸಿಎಂ ಯಡ್ಡಿ. ವಳ್ಳಿಗೆಂದು ಕನಿಷ್ಠ ಪಿಯುಸಿ ಕಾಲೇಜನ್ನೂ ಮಿಯಿಂದ ಮಂಜೂರು ಳ್ಳಲಾಗಲಿಲ್ಲ.

ಸ್ವಾಮಿ ಹತಾಶೆಗೆ ಬಿದ್ದು ಕಾಲಿಗೇ ಬಿದ್ದರೂ ಂತ್ರಿ ಕಂಡೂಕಾಣದಂತೆ ಂಗಿಸುತ್ತಿದ್ದರು. ಇಂಥ ಅಸಹನೆಯಿಂದ ದ್ದ ಆತೃಪ್ತರಿಗೆ ಗಾಯದ ರೆ ಎಳೆದಂತೆ ಗಣಿ ಕೈಕೊಟ್ಟರು. ಉಳಿದದ್ದು ಮಿ ಮನೆಬಾಗಿಲಷ್ಟೆ. ಸಿಹಿ ಹಡೆದು ಅದನ್ನು ರಿಗೆ ತಲುಪಿಸಿದ್ದ ಮಿ ಹದಿನಾರು ಮಂದಿ ಅನರ್ಹಗೊಂಡ ದೇ ಬದಲಾಗಿದ್ದರು. ಶಾತಿಗೆ ತಕ್ಕಂತೆ ಮಿಯಿಂದ ದುಡ್ಡೂ ಹೈಕೋರ್ಟ್ ಬೇರೆ ರ್ಜನ್ನು ಎತ್ತಿ ಹಿಡಿದು ಲೆ ಹೆಟ್ಟು ಹಾಕಿತ್ತು, ಯಿಲ್ಲ, ತಾವೇ ಡಿದ್ದ ಅಧಿಕಾರಿಗಳೂ ಹೋಡ ಮಾಡುವುದಕ್ಕೇ ಉಲ್ಟಾ ತ್ತು, ಕ್ಷೇತ್ರದಲ್ಲಿಯಂತೂ ತಲೆ ಎತ್ತಿ





ನಡೆಯುವಂತಿಲ್ಲ. ತಾವೇ ಸಾಕಿ ಬೆಳೆಸಿದ ಹುಡುಗರು ಕೂಡ ಅಧಿಕಾರ ಕೈಬಿಟ್ಟ ಕ್ಷಣದಿಂದಲೇ ಬದಲಾಗಿಬಿಟ್ಟಿದ್ದರು. ಇಂಥ ದಿಕ್ಕೆಟ್ಟ ದರಿದ್ರ ಸ್ಥಿತಿಯಲ್ಲೇ ಬಂದದ್ದು ಸುಪ್ರೀಂಕೋರ್ಟ್ ತೀರ್ಪು.

ಬಹುಶಃ ಸೋನಿಯಾ ಮೇಡಮ್ ಜೊತೆ ಯಾರಾದರೂ ಕಾಂಗ್ರೆಸ್ ಲೀಡರ್ ಮುತುವರ್ಜಿ ವಹಿಸಿ ಭೇಟಿ ಕಲ್ಪಿಸಿದ್ದರೆ ಪರಿಸ್ಥಿತಿ ಏನಾಗುತ್ತಿತ್ತೊ. ಆದರೆ ಯಾವೊಬ್ಬ ಕಾಂಗ್ರೆಸ್ ನಾಯಕನೂ ಆತೃಪ್ತರತ್ತ ತಲೆ ಹಾಕಲೇ ಇಲ್ಲ. ಎಲ್ಲಾ ರಾಜೀನಾಮೆ ಕೊಟ್ಟಿಡಿ, ಜೆಡಿಎಸ್-ಕಾಂಗ್ರೆಸ್ ಸೇರಿ ಸರ್ಕಾರ ಮಾಡ್ತೀವಿ, ಸಿದ್ದು ಸಿಎಂ ಆಗ್ತಾರೆ, ಆಗ ನಿಮ್ಮನ್ನ ಮಂತ್ರಿ ಮಾಡ್ತೀನಿ... ಎಂದು ಕುಮಾರಸ್ವಾಮಿ ತಮ್ಮದೇ ಲೆಕ್ಕಾಚಾರವನ್ನು ಬೋಧಿಸಲೆತ್ನಿಸಿದರೂ ಅದನ್ನು ನಂಬುವ ಸ್ಥಿತಿಯಲ್ಲಿ ಇವರಿರಲಿಲ್ಲ.

ಪ್ರತಿ ಕ್ಷೇತ್ರಕ್ಕೆ 100 ರಿಂದ 150 ಕೋಟಿಯಂತೆ ವಿಶೇಷ ಕಾಮಗಾರಿಗಳ ಪ್ಯಾಕೇಜ್ ಕೊಡುತ್ತೇನೆಂಬ ಯಡ್ಡಿಯ ಆಮಿಷವೇ ಆಕರ್ಷಕವಾಗಿತ್ತು. ಕನಿಷ್ಠ 20 ಪರ್ಸೆಂಟ್ ಕಮೀಷನ್ ಬಂದರೂ ಅದೇ 20 ಕೋಟಿ ಯಾಗುತ್ತದೆ. ಜೊತೆಗೆ ಈಗ ಸಂದಾಯವಾದ ರೊಕ್ಕ ಬೇರೆ. ಯಾರಿಗುಂಟು ಯಾರಿಗಿಲ್ಲ? ಹಿಟ್ಟು ಹಳಸಿತ್ತು ನಾಯಿಯೂ ಹಸಿದಿತ್ತು; ಹದಿನಾರು ಮಂದಿ ಅತೃಪ್ತರಿಗೆ ಬೇರೆ ದಾರಿಯೂ ಉಳಿದಿರಲಿಲ್ಲ.

ಹಾಗೊಮ್ಮೆ ರಾಷ್ಟ್ರಪತಿ ಆಳ್ವಿಕೆ ಬರದೆ ಹೋದರಂತೂ ಈ ಹದಿನಾರು ಮಂದಿ ಶಾಸಕರಿಗೆ ರೊಕ್ಕ ಎಣಿಸುವುದಕ್ಕೇ ಟೈಮು ಸಾಲಲ್ಲ.


ನಾಡಿಗೆ ಬೆಂಕಿ ಬಿದ್ದಿರುವಾಗ ಬೀಡಿ ಸೇದಲು ಯಾವ ಬೆಂಕಿಯಾದರೇನು?

ಚಟಗಳೇ ಕೈಕೊಟ್ಟವೇ?



ರಜನೀಕಾಂತ್ ಎಂಬ 'ಅದ್ಭುತ' ಈಗ ಆಸ್ಪತ್ರೆಯಲ್ಲಿ ಅಸಹಾಯಕರಾಗಿ ಮಲಗಿದ್ದಾರೆ. ತೆರೆಯ ಮೇಲೆ ಆಕಾಶಕ್ಕೆ ಚಂಗನೆ ಹಾರಿ ಹತ್ತಾರು ವಿಲನ್‌ಗಳನ್ನು ಏಕಕಾಲದಲ್ಲಿ ಮಟಾಶ್ ಮಾಡುವ ರಜನಿ ಈಗ ತನ್ನ ಹೊಟ್ಟೆಯೊಳಗೆ ಸೇರಿಕೊಂಡಿರುವ ಬ್ಯಾಕ್ಟೀರಿಯಾಗಳನ್ನೂ ನಿರ್ಮೂಲನೆ ಮಾಡಲಾಗದೆ ವೈದ್ಯರನ್ನು ಅವಲಂಬಿಸಿದ್ದಾರೆ.


ಎಲ್ಲರಿಗೂ ಗೊತ್ತಿರುವಂತೆ 61 ವರ್ಷದ ರಜನಿ ದಿನಕ್ಕೆ ಹತ್ತಾರು ಸಿಗರೇಟ್ ಪ್ಯಾಕೆಟ್‌ಗಳನ್ನು ಸೇದುತ್ತಾರೆ, ಮೂಡ್ ಇದ್ದರೆ ಒಂದು ರಾತ್ರಿಯಲ್ಲಿ ಒಂದೆರಡು ಬಾಟಲಿ





ಗುಂಡನ್ನೂ ಹಾಕಿ ಮುಗಿಸುತ್ತಾರೆ. ಹಾಗೆಯೇ ಬೆಂಗಳೂರಿಗೋ, ಮುಂಬೈಗೋ ಹೋದಾಗ ಚಿಕ್ಕಪುಟ್ಟ ಹೋಟೆಲ್‌ಗಳಲ್ಲಿ, ರಸ್ತೆಬದಿಯ ನೂಕು ಗಾಡಿಗಳಲ್ಲಿ ಸಿಗುವ ತಿನಿಸುಗಳನ್ನೂ ಬಾಯಿಗೆ ಹಾಕಿಕೊಳ್ಳುತ್ತಾರೆ.

ಇವರ ಇಂತಹ ಪ್ರವೃತ್ತಿಯೇ ಇವತ್ತಿನ ಅವರ ಅನಾರೋಗ್ಯಕ್ಕೆ ಕಾರಣ ಎಂದು ಡಾಕ್ಟರ್‌ಗಳು ತರ್ಕಿಸುತ್ತಿದ್ದಾರೆ. ಧೂಮಪಾನದಿಂದ ಮೊದಲೇ ಅವರ ಶ್ವಾಸಕೋಶ ನಿಶ್ಯಕ್ತವಾಗಿತ್ತು, ಕುಡಿತದಿಂದ ಅವರ ಲಿವರ್ ಕೂಡ ತನ್ನ ಸಾಮರ್ಥ್ಯವನ್ನು ಕಳೆದುಕೊಳ್ಳಲಾರಂಭಿಸಿತ್ತು, ಇದರ ಜೊತೆಗೆ ಅವರು ಕೈಗೆ ಸಿಕ್ಕಿದ್ದನ್ನೆಲ್ಲ ತಿಂದದ್ದು ಅವರ ಆರೋಗ್ಯ ಹದಗೆಡುವಂತೆ ಮಾಡಿದೆ ಎಂದು ರಜನಿ ಅವರ ಸಹೋದರ ಸತ್ಯನಾರಾಯಣ ರಾವ್ ಗಾಯಕ್ವಾಡ್ ಅವರೇ ಹೇಳಿದ್ದಾರೆ.



ಅಷ್ಟೇ ಅಲ್ಲ, ಕಳೆದ ಏಪ್ರಿಲ್ 29ರಂದು ರಜನಿ ನಟಿಸುತ್ತಿರುವ, 150 ಕೋಟಿ ರೂಪಾಯಿಗಳ ದ್ಹೊಡ್ಡ ಬಜೆಟ್ಟಿನ 'ರಾಣಾ' ಎಂಬ ಹೊಸ ಸಿನಿಮಾದ ಶೂಟಿಂಗ್ ಪ್ರಾರಂಭವಾಗಿತ್ತು. ಈ ಚಿತ್ರದಲ್ಲಿ ರಜನಿ ಟ್ರಿಪಲ್ ರೋಲ್‌ನಲ್ಲಿ ನಟಿಸಲಿದ್ದರು. ಅವರೊಂದಿಗೆ ಬೆಂಗಳೂರಿನ ಬೆಡಗಿ ದೀಪಿಕಾ ಪಡುಕೋಣೆ ನಟಿಸುತ್ತಿದ್ದಾಳೆ. ಇನ್ನೂ ಇಬ್ಬರು ನಾಯಕಿಯರ ಪಾತ್ರಗಳಿಗೆ ಯಾರೂ ಆಯ್ಕೆಯಾಗಿಲ್ಲ. ಈ ಚಿತ್ರವನ್ನು ಏಕಕಾಲಕ್ಕೆ ತಮಿಳು ಮತ್ತು ಹಿಂದಿಯಲ್ಲಿ ನಿರ್ಮಿಸಿ ಅನಂತರ ಅದನ್ನು ತೆಲುಗಿಗೆ ಡಬ್ ಮಾಡುವುದಾಗಿಯೂ ನಿರ್ಧರಿಸಲಾಗಿತ್ತು. ಇಂತಹ ಬೃಹತ್ ಯೋಜನೆಯ ಚಿತ್ರದ ಚಿತ್ರೀಕರಣವನ್ನು ನಿರ್ದೇಶಕ ಕೆ.ಎಸ್.ರವಿಕುಮಾರ್ ಬಹಳ ವಿಶ್ವಾಸದಿಂದ ಪ್ರಾರಂಭಿಸಿದ್ದರು.

ಬಹಳ ಮುಖ್ಯವಾಗಿ ಈ ಚಿತ್ರಕ್ಕೆಂದು ರಜನಿ ತಮ್ಮ ಪ್ರಮುಖ ಹವ್ಯಾಸಗಳಲ್ಲಿ ಒಂದಾದ ಮದ್ಯಪಾನವನ್ನು ಸಂಪೂರ್ಣವಾಗಿ ನಿಲ್ಲಿಸಿದ್ದರು. "ಹಲವೊಮ್ಮೆ ಪ್ರತಿದಿನ ಕುಡಿಯುವವರು ಹೀಗೆ ತಕ್ಷಣ ಕುಡಿಯುವುದನ್ನು ನಿಲ್ಲಿಸಿದರೆ ಅವರ ದೇಹ ಅದಕ್ಕೆ ಸುಲಭವಾಗಿ ಹೊಂದಿಕೊಳ್ಳುವುದಿಲ್ಲ. ರಜನಿ ಕೇಸಿನಲ್ಲಿ ಅದೇ ಆಗಿದೆ" ಎಂಬುದು ಸತ್ಯನಾರಾಯಣ ರಾವ್ ಅವರ ಅನಿಸಿಕೆ.

ಅದು ನಿಜವೂ ಇರಬಹುದು. ಆದರೆ ಪ್ರಾಯಶಃ ಎಡವಟ್ಟು ಎಲ್ಲಾಗಿದೆ ಎಂದರೆ, ಒಂದೆಡೆ ಹೀಗೆ ಗುಂಡು ಸೇವನೆಯನ್ನು ನಿಲ್ಲಿಸಿರುವುದು, ಇನ್ನೊಂದೆಡೆ ಎಲ್ಲೋ ಏನನ್ನೋ ತಿಂದಿದ್ದಕ್ಕೆ ಫುಡ್ ಪಾಯ್ಸನಿಂಗ್ ಕೂಡ ಆಗಿ ಇವೆರಡು ಜೊತೆಗೂಡಿ ರಜನಿಯನ್ನು ಕೆಡವಿದೆ. ಒಂದ ಶ್ವಾಸಕೋಶದಲ್ಲಿ ನೀರು ಸೇರಿದೆ. ಇನ್ನೊಂದೆ, ಹೊಟ್ಟೆಯಲ್ಲಿ ಕಲುಷಿತ ಪದಾರ್ಥಗಳು ಸೇರಿಕೊಂಡು ಸಮಸ್ಯೆಯನ್ನು ಉಲ್ಬಣಿಸಿವೆ. ಇದೆಲ್ಲ ರಜನಿಯ ಕಿ ಮೇಲೂ ಪರಿಣಾಮ ಬೀರಿದೆ. ಇವತ್ತು ರಜನಿಯ ಪತ್ನಿ ಲತಾ ಅವರು "ರಜನಿ ಆರೋಗ್ಯ ಸುಧಾರಿಸುತ್ತಿ ಅವರಿಗೆ ಅಂತಹ ದೊಡ್ಡ ಸಮಸ್ಯೆ ಏನೂ ಆಗಿ ಅವರನ್ನು ಸಾಮಾನ್ಯ ಮನುಷ್ಯರಂತೆ ನೋಡಿ. ಅವರ ಆರೋಗ್ಯದ ಬಗ್ಗೆ ಸುಳ್ಳು ಸುದ್ದಿಗಳನ್ನು ಹರಡಿಸಬೇಡಿ" ಎಂದು ಜನರಲ್ಲಿ ಅಹವಾಲನ್ನು ಮಾಡಿಕೊಂಡಿದ್ದಾರೆ.

ಆದರೆ ರಜನಿ ಅಭಿಮಾನಿಗಳು ಇದನ್ನೆಲ್ಲ ಕೇಳಲು ಸಿದ್ಧರಿಲ್ಲ. "ರಜನಿ ಆಸ್ಪತ್ರೆಯಿಂದ ಹೊರಗೆ ಬರುವವರೆಗೂ ನಾವಿಲ್ಲಿಂದ ಕದಲಲ್ಲ" ಎಂದು ಕೆಲವರು ಹಠ ಹಿಡಿದಿದ್ದರೆ, ಇನ್ನೂ ಕೆಲವರು ಆಗಲೇ ವಿಭಿನ್ನ ಮತ್ತು ವಿಚಿತ್ರವಾದ ಹರಕೆಗಳನ್ನು ಹೊತ್ತು ಕಾರ್ಯಪ್ರವೃತ್ತರಾಗಿದ್ದಾರೆ.

ಹೇಳಿಕೇಳಿ ರಜನಿ ಲಕ್ಷಾಂತರ ಅಭಿಮಾನಿಗಳನ್ನು ಹೊಂದಿರುವ ನಟ. ಒಂದು ಅಂದಾಜಿನ ಪ್ರಕಾರ ಜಗತ್ತಿನಾದ್ಯಂತ 60,000 ಕ್ಕೂ ಹೆಚ್ಚಿನ ರಜನಿ ಅಭಿಮಾನಿ ಕ್ಲಬ್‌ಗಳಿವೆ. ಆ ಕಾರಣದಿಂದಲೇ ಇವತ್ತು ರಜನಿಕಾಂತ್ ಅನಾರೋಗ್ಯದ ಸುದ್ದಿ ಅತ್ತ ಅಮೆರಿಕದ ಬ್ಲಾಗ್‌ಗಳಲ್ಲೂ ಇತ್ತ ಜಪಾನಿನ ಪತ್ರಿಕೆಗಳಲ್ಲೂ ವರದಿಯಾಗುತ್ತಿವೆ.

ಕಳೆದ ಮೂವತ್ತು ವರ್ಷಗಳಲ್ಲಿ ಬರೋಬ್ಬರಿ 175 ಚಿತ್ರಗಳಲ್ಲಿ ನಟಿಸಿರುವ ರಜನಿ ಇವತ್ತು ಏಷ್ಯಾ ಖಂಡದಲ್ಲೇ ಜಾಕಿಚಾನ್ ನಂತರ ಅತಿ ಹೆಚ್ಚು ಸಂಭಾವನೆಯನ್ನು ಪಡೆಯುವ ನಟ. ಅಷ್ಟೇ ಅಲ್ಲ, ಬಾಲಿವುಡ್ ಮಾತು ಬದಿಗಿರಲಿ, ಹಾಲಿವುಡ್‌ನಲ್ಲೂ ಹೀಗೆ ಓರ್ವ ನಟನನ್ನೇ ಅವಲಂಬಿಸಿ ಕೋಟ್ಯಾಂತರ ರೂಪಾಯಿಗಳ ಸಿನಿಮಾವೊಂದನ್ನು ಯಾರೂ ತಯಾರಿಸುವುದಿಲ್ಲ. ಅಂತಹ ತಾಕತ್ ಇರುವುದು ರಜನಿಗೆ ಮಾತ್ರ.

ತನ್ನ ಪ್ರತಿಭೆ, ವಿಚಿತ್ರ ಮ್ಯಾನರಿಸಮ್ ಮ... ಸಹಜತೆಯಿಂದಾಗಿ ಲಕ್ಷಾಂತರ ಜನರ ಮ... ಗೆದ್ದಿರುವ, ಇವತ್ತು ಇಂಟರ್‌ನೆಟ್‌ನ ... ದಂತಕತೆಯಾಗಿರುವ, [illegible] ಸಾಮರ್ಥ್ಯಗಳನ್ನು ಹೊಗಳುವ [illegible] ಜೋಕ್‌ಗಳ ಕೇಂದ್ರ ಬಿಂದುವಾಗಿರುವ ರಜನಿ ಆದಷ್ಟು ಬೇಗ [illegible] [illegible]....

ಕೊಪ್ಪಳ: ಬಡವರ ಸೂರಿಗೂ ಕೈಯಿಟ್ಟ ಕರಡಿ ಸಂಗಣ್ಣ!

ಸರ್ಕಾರಿ ಜಮೀನನ್ನು ಸಲೀಸಾಗಿ ನುಂಗಿ ಅರಗಿಸಿಕೊಳ್ಳುವುದು ಹೇಗೆಂಬುದನ್ನು ಕೊಪ್ಪಳದ ಶಾಸಕ ಕರಡಿ ಸಂಗಣ್ಣನನ್ನು ನೋಡಿ ಕಲಿಯಬೇಕು. ಗೂಟದ ಕಾರಿನ ಗೀಳಿಗೆ ಬಿದ್ದು ಈಗ ತನಗೆ ಓಟು ಹಾಕಿದ ಜನರನ್ನು ಕೇಳದೆ ಬಿಜೆಪಿಗಳ ಟೀಮು ಸೇರಿದ. ಈಗ ಈತನಿಗೆ ಯಡಿಯೂರಪ್ಪ ನಿಗಮ ಮಂಡಳಿ ಅಧ್ಯಕ್ಷಗಿರಿ ನೀಡಿದ್ದಾರೆ. ಸಾಮಾನ್ಯ ಶಾಸಕನಾಗಿದ್ದಾಗಲೇ ಗೇಣು ಜಾಗ ಬಿಡದ ಸಂಗಣ್ಣ ಈಗ ಗೂಟದ ಕಾರು ಸಿಕ್ಕನಂತರವಂತೂ ಪಕ್ಕಾ ಭೂಕಬಳಿಕೆಗೆ ನಿಂತಿದ್ದಾನೆ. ಸದ್ಯ ಕೊಪ್ಪಳದ ಆಶ್ರಯ ಹಗರಣವೊಂದೇ ಈತನ ಚರಿತ್ರೆಯನ್ನು ಬಿತ್ತಲಾಗಿಸುವಂತಿದೆ.

ಮರುಳು ಮಾತಿನಿಂದ ಜನರನ್ನು ಮೋಡಿ ಮಾಡಿ ಚುನಾವಣೆಯಲ್ಲಿ ಗೆದ್ದು ಬರುತ್ತಿರುವ ಕರಡಿ ಸಂಗಣ್ಣ ತನ್ನ ರಾಜಕೀಯ ಜೀವನದುದ್ದಕ್ಕೂ ಹಗರಣಗಳನ್ನು ಮಾಡುತ್ತಾ ಬಂದವನೇ. 1994ರಲ್ಲಿ ಪಕ್ಷೇತರನಾಗಿ ಗೆದ್ದ ಸಂಗಣ್ಣ 1999ರಲ್ಲಿ ಜೆಡಿಎಸ್‌ನಿಂದ ಮತ್ತೊಮ್ಮೆ ಶಾಸಕನಾದ. ಯಾವಾಗ ಎರಡನೇ ಬಾರಿ ವಿಧಾನಸಭೆಗೆ ಎಂಟ್ರಿ ಕೊಟ್ಟನೋ ಆಗಲೇ ಕೊಪ್ಪಳಕ್ಕೆ ಶನಿ ಹೆಗಲೇರಿದಂತಾಯಿತು. ಆ ಸಮಯದಲ್ಲಿ ಜೆಡಿಎಸ್‌ನ ಪ್ರಭಾವಿ ಮುಖಂಡ ಎನಿಸಿಕೊಂಡಿದ್ದ ಈತನಿಗೆ ವಿರುಪಾಕ್ಷಯ್ಯ ಗದುಗಿನಮಠ ಎಂಬ ಸೋಕಾಲ್ಡ್ ಕಮ್ಯುನಿಸ್ಟ್ ಲೀಡರ್ ಮತ್ತು ನೆಲಗಳ್ಳನ ಸಖ್ಯ ಕೂಡ ಅಷ್ಟೇ ಮಜಬೂತಾಗಿ ಬೆಳೆದಿತ್ತು. 1999 ರಿಂದ 2004 ರವರೆಗೆ ಇವರಿಬ್ಬರೂ ಸೇರಿಕೊಂಡು ಮಾಡಿದ ಹರಾಮಿ ಕೆಲಸಕ್ಕೆ ಲೆಕ್ಕವೇ ಇಲ್ಲ.



ಸಂಗಣ್ಣ ಕರಡಿ

ಇವರಿಬ್ಬರೂ ಕಡುಬಡವರಿಗೆ ದಕ್ಕಬೇಕಾದ ಆಶ್ರಯ ಮನೆಗಳನ್ನು ಸ್ಥಿತಿವಂತರಿಗೆ ಮಾರಿಕೊಂಡು ಸರ್ಕಾರಿ ಕೃಪಾಪೋಷಿತ ರಿಯಲ್ ಎಸ್ಟೇಟ್ ದಂಧೆಯನ್ನು ನಿಯತ್ತಾಗಿ ಮಾಡಿ ಮುಗಿಸಿದ್ದಾರೆ. ಇದರಲ್ಲಿ ಸರ್ಕಾರ ಮತ್ತು ಬಡವರಿಗೆ ಏಕಕಾಲಕ್ಕೆ ಪಂಗನಾಮ ಹಾಕಿದ್ದಾರೆ.

ಯಾರೋ ಜಮೀನನ್ನ ನಗರಸಭೆಗೆ ದಾನವಾಗಿ ನೀಡಿದ್ದಾರೆ ಎಂದು ನಕಲಿ ದಾಖಲೆ ಸೃಷ್ಟಿಸಿಕೊಂಡು ಅಲ್ಲಿ ಸರ್ಕಾರಿ ಹಣದಲ್ಲಿ ಚರಂಡಿ, ರಸ್ತೆ, ವಿದ್ಯುತ್ ಸೇರಿದಂತೆ ಅವಶ್ಯಕ ಸೌಲಭ್ಯಗಳನ್ನ ಪಡೆದು ಪ್ಲಾಟ್‌ಗಳನ್ನಾಗಿ ಮಾಡಿ ಆಶ್ರಯ ಯೋಜನೆಯ ಹೆಸರಲ್ಲಿ 20-30 ಸಾವಿರಕ್ಕೆ ಒಂದರಂತೆ ಮಾರಿದ್ದಲ್ಲದೆ, ತಾವೇ ಪ್ರಿಂಟ್ ಮಾಡಿದ ನಕಲಿ ಹಕ್ಕುಪತ್ರಗಳನ್ನು ಬಿಂದಾಸಾಗಿ ನೀಡಿದ್ದಾರೆ. ಈ ಕಳ್ಳ ಜೋಡಿ 5 ವರ್ಷ ಅವಧಿಯಲ್ಲಿ 110 ಎಕರೆ ಪ್ರದೇಶವನ್ನು ಪ್ಲಾಟ್ ಮಾಡಿ ಬಿಕರಿ ಮಾಡಿದೆ.




ಗಂಗೂಬಾಯಿ

ಸಂಗಣ್ಣ ಕರಡಿ ಮತ್ತವನ ಸ್ನೇಹಿತ ಗದುಗಿನಮಠ ನಗರಸಭೆಯ ಅಧಿಕಾರಿಗಳೊಂದಿಗೆ ಸೇರಿಕೊಂಡು ಮಾಡಿದ ಆಶ್ರಯ ಹಗರಣದ ಚಿತ್ರಣವನ್ನು ಅವಲೋಕಿಸುತ್ತಾ ಹೋದರೆ, ಇವರಿಬ್ಬರೂ ಎಂದೋ ಕಂಬಿ ಹಿಂದಿರಬೇಕಿತ್ತು ಅನಿಸುತ್ತದೆ. ಕೊಪ್ಪಳದ(ಸರ್ವೇ ನಂ. 423/4/5)ರ ಮಾಲೀಕರಾದ ನಾಗರಾಜ ಸಂಜೀವಪ್ಪ ನಾಗಪ್ಪ ಹನುಮಂತಪ್ಪ ಎನ್ನುವವರು 2000ದಲ್ಲಿ ನಗರಸಭೆ ಆಯುಕ್ತರ ಹೆಸರಿಗೆ ದಾನವಾಗಿ ಬರೆದು ಕೊಟ್ಟಿರುತ್ತಾರೆಂದು ದಾಖಲೆ ಸೃಷ್ಟಿಸಲಾಗಿದೆ. ಕೆಲ ತಿಂಗಳ ನಂತರ ಇದೇ ಸರ್ವೇ ನಂಬರ್‌ನ ಮೂರು ಎಕರೆ ಭೂಮಿಯನ್ನು ಬಂಡಿ ಹಮಾಲರ ಸಂಘಕ್ಕೆ ದಾನವಾಗಿ ನೀಡಿದ್ದೇವೆಂದು ತಿದ್ದಲಾಗಿದೆ. ನಂತರ ಆ ಮೂರು ಎಕರೆಯಲ್ಲಿ 174 ಪ್ಲಾಟ್‌ಗಳನ್ನ ರೆಡಿ ಮಾಡಿ, ನಕಲಿ ಫಲಾನುಭವಿಗಳ ಪಟ್ಟಿ ತಯಾರಿಸಿ ಆ ಪಟ್ಟಿಗೆ ಆಶ್ರಯ ಕಮಿಟಿಯ ಅಧ್ಯಕ್ಷನೂ ಆಗಿದ್ದ ಸಂಗಣ್ಣ ಕರಡಿಯಿಂದ ಒಪ್ಪಿಗೆ ಪತ್ರಕ್ಕೆ ಸಹಿ ಕೂಡ ಹಾಕಲಾಗಿದೆ. ನಂತರ ಗದುಗಿನಮಠ ಅವುಗಳನ್ನ ಒಂದೊಂದಾಗಿ ಬಾಯಿಗೆ ಬಂದ ಬೆಲೆಗೆ ಮಾರಿಕೊಂಡಿದ್ದಾನೆ.

ಇದೆಲ್ಲಾ ನಡೆದಿದ್ದು ಕರಡಿಯ ಅಧ್ಯಕ್ಷತೆಯಲ್ಲೇ. ಇವರಿಬ್ಬರೂ ಸೇರಿಕೊಂಡು ಮಾರಿದ ಪ್ಲಾಟುಗಳ ಸಂಖ್ಯೆ 2000ಕ್ಕೂ ಹೆಚ್ಚು.

ಸಂಗಣ್ಣ ಕರಡಿ ಕೋಟಿ ಲೆಕ್ಕದಲ್ಲಿ ತೂಗಿದ್ದೇ ಈ ಆಶ್ರಯ ಹಗರಣದಿಂದ. ಇವನ ಸ್ನೇಹಿತ ವಿರುಪಾಕ್ಷಯ್ಯ ಗದುಗಿನಮಠ ಒಂದು ಕಾಲದಲ್ಲಿ ಸಣ್ಣದೊಂದು ಟೀ ಸ್ಟಾಲ್ ಇಟ್ಟುಕೊಂಡು ಕಿತ್ತೋಗಿರೋ ಬೈಕ್‌ನಲ್ಲಿ ಓಡಾಡುತ್ತಿದ್ದವನು. ಇಂದು ಸಫಾರಿ ಇನ್ನೋವಾದಂಥ ದುಬಾರಿ ಕಾರ್‌ಗಳಲ್ಲಿ ಓಡಾಡುತ್ತಾ ನಾಲ್ಕಾರು ಬಿಸಿನೆಸ್ ಮಾಡಲು ಬಂಡವಾಳ ಹುಟ್ಟಿದ್ದೇ ಬಡವರ ಸೂರಿನ ಆಶ್ರಯ ಯೋಜನೆಯಿಂದ.

ಸಂಗಣ್ಣ ಆಯ್ಕೆ ಮಾಡಿದ ಆಶ್ರಯ ಫಲಾನುಭವಿಗಳೆಲ್ಲಾ ಲಕ್ಷ, ಕೋಟಿಗೆ ತೂಗುವವರೇ. ಹಣ ಕೊಟ್ಟು ಆಶ್ರಯ ಮನೆ ಪಡೆದು ಈಗ ಅವುಗಳನ್ನು ಬಾಡಿಗೆಗೆ ಕೊಟ್ಟು ತಾವೆಲ್ಲಾ ಐಷಾರಾಮಿ ಮನೆಯಲ್ಲಿದ್ದಾರೆ. ಸರ್ಕಾರಿ ನೌಕರರಿಗೂ ಇಲ್ಲಿ ಆಶ್ರಯ ಮನೆ ನೀಡಲಾಗಿದೆ. ಉಳಿದಂತೆ ಕಾಂಟ್ರಾಕ್ಟರ್‌ಗಳು ಮತ್ತು ಕರಡಿಯ ಬಾಲಬಡಿಯುವ ಪುಢಾರಿಗಳೇ ಇವುಗಳ ಅಸಲಿ ಮಾಲೀಕರಾಗಿರುವುದು ಕೊಪ್ಪಳದ ದುರಂತವೇ ಸರಿ. ಈ ಹಿಂದೆ (ಸರ್ವೇ ನಂ. 423/2) ಎರಡು ಎಕರೆ 34 ಗುಂಟೆ ಜಮೀನಿನಲ್ಲಿ 94 ಪ್ಲಾಟ್‌ಗಳನ್ನು ಮಾಡಿ, ಅವುಗಳನ್ನ ಮಾರಿ ದುಂಡಗಾಗಿದ್ದ ಕರಡಿ ಮುಂದೆ ಆ ಹಗರಣ ಬಯಲಾಗಿ ಬೀದಿಗೆ ಬಂದಾಗ ಗದುಗಿನಮಠನ ಜೊತೆಗೆ ಕೈಯಲ್ಲಿ ಎಕ್ಕಡ ಹಿಡಿದು ಜಗಳಾಡುವ ಹಂತಕ್ಕೆ ತಲುಪಿದ್ದ. ಒಬ್ಬರ ಮೇಲೊಬ್ಬರು ಹಗರಣದ ತಪ್ಪು ಹೊರಿಸುತ್ತಾ ದೂರಾಗಿದ್ದ ಈ ಖದೀಮ ಜೋಡಿ ಈಗ ಮತ್ತೆ ಈ ಕೇಸನ್ನು ತಿಪ್ಪೆಸಾರಿಸಲು ಒಂದಾಗಿ ನಿಂತಿದೆ.



ವಿರುಪಾಕ್ಷ



ಬಡಬಗ್ಗರಿಗೆಂದು ನಿರ್ಮಾಣ ಮಾಡಲಾದ ಮನೆಗಳು

ಕರಡಿ ಸಂಗಣ್ಣನ ಅಧಿಕಾರಾವಧಿಯಲ್ಲಿ ಸರ್ಕಾರದ ಯಾವೊಂದು ನಿಯಮವೂ ಪಾಲನೆಯಾಗಿಲ್ಲ. ಇದಕ್ಕೆ ಸ್ಪಷ್ಟ ನಿದರ್ಶನವೆಂದರೆ ಆಶ್ರಯ ಹಗರಣ. ಸರ್ಕಾರಿ ನಿಯಮದ ಪ್ರಕಾರ ಆಶ್ರಯದ ಪ್ಲಾಟುಗಳನ್ನ ಪಡೆದ ಫಲಾನುಭವಿ ಅದನ್ನ 20 ವರ್ಷಗಳ ಕಾಲ ಬೇರೆಯವರಿಗೆ ಮಾರಲು ಅವಕಾಶವಿರುವುದಿಲ್ಲ. ಆದರೆ, ಗದುಗಿನಮಠ ಮತ್ತು ಸಂಗಣ್ಣನ ಸ್ವಯಂಘೋಷಿತ ಕಾನೂನಿನಲ್ಲಿ ಬೇಕಾಬಿಟ್ಟಿ ಮಾರಾಟಕ್ಕೆ ಪೂರ್ಣ ಪರವಾನಗಿ ಕೊಡಲಾಗಿದೆ. ಒಂದು ಪ್ಲಾಟ್‌ನ ಹಕ್ಕುಪತ್ರಕ್ಕೆ ಯಾವುದೋ ಬೇನಾಮಿ ಹೆಸರು ಬರೆದು ಬೇರೆಯವರನ್ನು ಹುಡುಕಿ ಮಾರಲಾಗಿದೆ. ಮಾರಾಟಗೊಂಡ ಹಕ್ಕುಪತ್ರದಲ್ಲಿ ಶಾಸಕರ ಆದೇಶದ ಮೇರೆಗೆ ಹೆಸರು ತಿದ್ದುಪಡಿ ಮಾಡಲಾಗಿದೆ ಅಂತ ಶರಾ ಬರೆಯಲಾಗಿದೆ. ಸುಮಾರು 2000ಕ್ಕಿಂತ ಹೆಚ್ಚು ನಿವೇಶನಗಳಲ್ಲಿ 300 ಫಲಾನುಭವಿಗಳು ಮಾತ್ರ ಅರ್ಹರಿದ್ದಾರೆ.

ನಗರಸಭೆಗೆ ಅರ್ಜಿ ಹಾಕಿ ಆಶ್ರಯ ಮನೆ ಸಿಗದೆ, ಬೀದಿಯಲ್ಲೇ ಬದುಕು ಸಾಗಿಸುತ್ತಿರುವ ನೂರಾರು ಕುಟುಂಬಗಳು ಕರಡಿಯ ಈ ನುಂಗಾಟದಿಂದ ರೊಚ್ಚಿಗೆದ್ದು ಅಸಲಿಯತ್ತು ಬಯಲಿಗೆಳೆಯಲು ಹರಸಾಹಸವನ್ನೇ ನಡೆಸಿದ್ದಾರೆ. ಅವರ ಹೋರಾಟಕ್ಕೆ ಸಿಕ್ಕ ಜಯವೆಂದರೆ, ಹಗರಣದ ಸಮಗ್ರ ತನಿಖೆಗೆ ಆದೇಶ. ಆಗಿನ ಕೊಪ್ಪಳದ ವಿಭಾಗಾಧಿಕಾರಿ ಗಂಗೂಬಾಯಿ ಮಾನ್ಕರ್ ಹಗರಣದ ತನಿಖೆ ನಡೆಸಿ ಬಡವರಿಗೆ ಅನ್ಯಾಯವಾಗಿದ್ದನ್ನು ಹಾಗೂ ಇದಕ್ಕೆಲ್ಲಾ ಸಂಗಣ್ಣ ಕರಡಿನೇ ಕಾರಣೀಕರ್ತ ಎಂಬುದನ್ನೂ ನಮೂದಿಸಿ ವರದಿಯೊಂದನ್ನು ತಯಾರಿಸಿ, ಆಗಿನ ಜಿಲ್ಲಾಧಿಕಾರಿ ರಾಯಣ್ಣನಿಗೆ ರವಾನಿಸಿದ್ದರು. ಆದರೆ, ಸಂಗಣ್ಣನ ಹಿಂದೆ ಖಾಸಾ ಚೇಲಾನಂತಿರುತ್ತಿದ್ದ ಡಿ.ಸಿ.ರಾಯಣ್ಣ ವರದಿಯನ್ನು ತಡೆಹಿಡಿದಿದ್ದ. ನಂತರ ವರದಿ ತರಿಸಿಕೊಂಡ ಆಶ್ರಯ ಮನೆ ಉಸ್ತುವಾರಿಯ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ಅದರ ಆಧಾರದ ಮೇಲೆ 5 ಜುಲೈ 2008ರಂದು ಹಗರಣವನ್ನು ಸಿ.ಒ.ಡಿಗೆ ವಹಿಸುವಂತೆ ಆದೇಶ ಮಾಡಿತ್ತು. ಆದರೆ, ಈ ಆದೇಶವನ್ನು ಮೂರು ತಿಂಗಳು ಅಡಗಿಸಿದ್ದ ಡಿ.ಸಿ.ರಾಯಣ್ಣ 4 ನವೆಂಬರ್ 2008ರಂದು ಆಶ್ರಯ ನಿವೇಶನದ ಕೆಲವೊಂದು ಹಕ್ಕುಪತ್ರವನ್ನು ರದ್ದುಪಡಿಸಲು ನಗರಸಭೆಗೆ ಸೂಚಿಸಿ, ಇಲ್ಲಿಂದ ಎತ್ತಂಗಡಿಯಾಗಿಬಿಟ್ಟ. ಸಂಗಣ್ಣನ ಹಗರಣವನ್ನು ಸೇಫ್ ಮಾಡುತ್ತಾ ಬಂದಿರುವ ಕೊಪ್ಪಳದ ನಗರಸಭೆಯ ಆಡಳಿತ ಮತ್ತು ಅಧಿಕಾರಿಗಳು ಎರಡೂವರೆ ವರ್ಷ ಕಳೆದರೂ ಡಿ.ಸಿ. ಆದೇಶವನ್ನು ಪಾಲಿಸಿ...

ಅಸಲಿಗೆ 2008ರ ಚುನಾವಣೆಯ ಸಂದರ್ಭದಲ್ಲಿ ಓಟು ಕೇಳಲು ಜನರ ಮುಂದೆ ಹೋದಾಗ ಸ್ವತಃ ಸಂಗಣ್ಣ ತಪ್ಪೊಪ್ಪಿಕೊಂಡಿದ್ದ. "ಕಾನೂನಿನ ಪ್ರಕಾರ ಕೆ... ತಪ್ಪುಗಳಾಗಿದ್ದರೂ, ಬಡವರಿಗೆ ನಿವೇಶನ ಒದಗಿಸಿದ್ದೇ... ನನ್ನ ಕೆಲ ನಿರ್ಧಾರದಿಂದ ಈ ಯೋಜನೆಯಲ್ಲಿ ಸರ್ಕಾರಕ್ಕೆ ಅಲ್ಪ ಹಾನಿಯಾಗಿದೆ. ಮುಂದಿನ ಅವಧಿಯಲ್ಲಿ ಅದನ್ನೇ... ಸರಿಪಡಿಸುತ್ತೇನೆ" ಎಂದು ಮತದಾರರ ಮುಂದೆ ಮೊಸ... ಕಣ್ಣೀರಿಟ್ಟು ಪಕ್ಕದ ಗಂಗಾವತಿಯ ಇಕ್ಬಾಲ್ ಅನ್ಸಾರಿ... ಶ್ರಮದಿಂದ ಆಗ ಗೆದ್ದು ಬಂದ. ಆದರೆ, ಸಂಗಣ್ಣ ಆಗಿರು... ತಪ್ಪನ್ನು ತಿದ್ದಿಕೊಳ್ಳದೆ, ಕೇಸಿನಿಂದ ಬಚಾವಾಗಲೋಸ್ಕರ... ತನ್ನದೇ ಜಾಯಮಾನದ ಕೇಸರಿಗಳ ಜೊತೆ ಈ... ಸೇರಿಕೊಂಡಿದ್ದಾನೆ.


ಯಡ್ಡಿಯೊಂದಿಗೆ ಸ್ವಜಾತಿ ದೋಸ್ತಿ ಕುದುರಿಸಿಕೊಂಡಿರು... ಸಂಗಣ್ಣ 22 ಎಕರೆ ಮೈನಿಂಗ್‌ಗೆ ಲೀಜ್ ಪರವಾನ... ಪಡೆಯುವ ಎಲ್ಲ ತಯಾರಿ ನಡೆಸಿಕೊಂಡಿದ್ದಾನೆ. ಸಿಂಗಟ... ಲೂರು ಹತ್ತಿರದ ತನ್ನ 150 ಎಕರೆ ಜಮೀನಿಗೆ ನೀರಾವ... ಒದಗಿಸುವ ಪ್ರತ್ಯೇಕ ಕಾಲು... ನಿರ್ಮಿಸಲು ಅಣಿಗೊಳ್ಳುತ್ತಿದ್ದಾನೆ. ಈ... ಸದ್ಯ ಉಪಚುನಾವಣೆಯಲ್ಲಿ ಬಿಜೆ... ಯಿಂದ ನಿಂತು ಗೆಲ್ಲುವ ಕನಸಿನಲ್ಲಿದ್ದಾ... ಆದರೆ, ಇವನ ಚರಿತ್ರೆಯನ್ನ ಕಳೆ... 20 ವರ್ಷಗಳಿಂದ ಅರೆದು ಕು... ದಿರುವ ಕೊಪ್ಪಳದ ಜನ 'ಕಮಂಗಿ... ಮತ ಹಾಕೀವಿ ಹೊರತು ಕರಡಿ... ಹಾಕಲ್ಲ' ಅಂತ ಓಪನ್ ಆಗಿ ಹೇ... ಕೊಂಡು ತಿರುಗುತ್ತಿದ್ದಾರೆ. ಸರ್ಕಾರ ಕ... ಕರಡಿಯ ಕೈಗೆ ಕೋಳ ಹಾಕಿ ಕಂ... ಹಿಂದೆ ತಳ್ಳದಿದ್ದರೂ ಜನರು ಮಾ... ಆತನನ್ನು ಹೀನಾಯವಾಗಿ ಸೋಲಿಸಿ ಮೂಲೆಗುಂಪು ಮಾಡುವುದಂತೂ ಖಚಿತ.



ಡಿ.ಸಿ. ಸತ್ಯಮೂರ್ತಿ

• ಹುರುಳಿಕೊಪ್ಪಿ ವಿನಯ

...ೂಡಿಗೆರೆ: ಬಾಲಕನ ಸಾವು ಮತ್ತು ಪೊಲೀಸರ ಬಾಡೂಟ


...ಪ್ರಕರಣ ತನಿಖೆಗೆ ಒತ್ತಾಯಿಸಿ ಪ್ರತಿಭಟನೆ

...ಾಡಿನ ಮರಳು ದಂಧೆಗೆ ಉರುಳಿದ ಹೆಣಗಳ ...ಲ್ಲಿಂದರ ಸೇರ್ಪಡೆಯಾಗಿದೆ. ಹದಿನೈದರ ಪೋರ ...ಶೀದ್ ಹೇಮಾವತಿ ನದಿಯಲ್ಲಿ ಮರಳು ...ಗೆ ಬಲಿಯಾಗಿದ್ದಾನೆ. ಆತ ಹತ್ತನೇ ತರಗತಿಯಲ್ಲಿ ...ುಗ. ಮೂಡಿಗೆರೆಯ ಕೃಷ್ಣಾಪುರದ ಇಬ್ರಾಹಿಂ ...ಾಬಿ ದಂಪತಿಯ ಮಗನಾದ ಈತ ಬೇಸಿಗೆ ...ಜಲು ಹೋಗಿ ತನ್ನ ಜೀವವನ್ನೇ ಕಳೆದು...

...21ರಂದು ರಶೀದ್ ಮತ್ತು ಇನ್ನಿಬ್ಬರು ...ಜಾಡಲು ಕೃಷ್ಣಾಪುರದಿಂದ ಕೂಗಳತೆ ದೂರ ...ಳಲು ಕೂಡಿಗೆಯಲ್ಲಿ ಹೇಮಾವತಿ ...ು. ನೀರಿನಲ್ಲಿ ಮರಳು ದಂಧೆ ...ಗೆದಿದ್ದ ಗುಂಡಿ ಕಾಣಿಸದೆ ರಸೀದ್ ...ತ ಮೇಲೇಳದಿದ್ದಾಗ ಕಂಗಾಲಾದ ...ತರು ಅಲ್ಲಿಂದ ಪರಾರಿಯಾದರು. ...ಈ ವಿಚಾರವನ್ನ ಯಾರೊಂದಿಗೂ ...ಕಲಿಲ್ಲ, ರಶೀದ್‌ನ ಪೋಷಕರು ...ಬಾರದ್ದರಿಂದ ಆತಂಕಗೊಂಡು ...ಗಳ ಕಾಲ ಸುತ್ತಮುತ್ತಲ ...ದು. ಕೊನೆಗೆ ಏಪ್ರಿಲ್ 27ರಂದು ಮೂಡಿಗೆರೆ ...ಾಣೆಗೆ ಮಗ ನಾಪತ್ತೆ ಆಗಿದ್ದಾನೆಂದು ದೂರು ...ದರೆ ಠಾಣೆಯಲ್ಲಿದ್ದ ಪಿಎಸ್‌ಐ ಶಿವಲಿಂಗನೆಂಬ ಗಡವ ಅವರ ದೂರನ್ನು ಮೂಲೆಗೆಸೆದು ಪ್ರಕರಣವನ್ನು ಹಳ್ಳ ಹಿಡಿಸಲು ಯತ್ನಿಸಿದ.


ರಶೀದ್

ವಾಸ್ತವವಾಗಿ, ಏಪ್ರಿಲ್ 24ರಂದೇ ಹೇಮಾವತಿ ನೀರಿನಲ್ಲಿ ರಶೀದ್‌ನ ಹೆಣ ತೇಲುತ್ತಿರುವುದು ದನಗಾಹಿಂಗಳಿಗೆ ಕಾಣಿಸಿತ್ತು, ಮರಳು ದಂಧೆಕೋರರ ಪವಾಡ ಪ್ರಾರಂಭವಾಗಿದ್ದು ಅಲ್ಲಿಂದಲೇ. ಮರಳು ತೆಗೆದ ಗುಂಡಿಗೆ ಸ್ಥಳೀಯ ಹುಡುಗ ಬಿದ್ದು ಸತ್ತಿರುವುದು ಜನರಿಗೆ ತಿಳಿದರೆ ರಾದ್ಧಾಂತವಾಗುವುದು ಖಂಡಿತ ಎಂಬುದು ಅವರಿಗೆ ಮನದಟ್ಟಾಗಿತ್ತು, ಕೂಡಲೇ ಅವರೆಲ್ಲ ಮೂಡಿಗೆರೆಯ ಪೊಲೀಸ್ ತಿಮಿಂಗಿಲಗಳಿಗೆ ಕಪ್ಪ ಒಪ್ಪಿಸಿದರು. ತದನಂತರ ಪಿಎಸ್‌ಐ ಶಿವಲಿಂಗ ಮತ್ತು ಸಿಪಿಐ ಬಶೀರ್ ಅಹಮ್ಮದ್ ತಮ್ಮ ಖಾಕಿ ಖದರನ್ನು ಉಪಯೋಗಿಸಿ ಪ್ರಕರಣದ ಸಾಕ್ಷ್ಯಗಳನ್ನು ನಾಶ ಮಾಡಲು ಶುರುಹಚ್ಚಿಕೊಂಡರು.


ಸಿಪಿಐ

ಅವರೊಂದಿಗೆ ಕೈಜೋಡಿಸಿದವನು ದಾರದಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ಜುನೈದ್ ಎಂಬ ಪರಮ ಹರಾಮಿ ವೈದ್ಯ. ಈತ 15ರ ಹರೆಯದ ಅಬ್ದುಲ್ ರಶೀದ್‌ನ ಮರಣೋತ್ತರ ಪರೀಕ್ಷೆ ನಡೆಸಿ ಆ ಬಾಲಕನಿಗೆ 34 ವರ್ಷ ವಯಸ್ಸೆಂದು ದಾಖಲಿಸಿದ! ರಶೀದನ ಶವ ಅವನ ವಾರಸುದಾರರಿಗೆ ಸಿಕ್ಕರೆ ಅಪಾಯವೆಂದರಿತ ಬಶೀರ್ ಅಹಮ್ಮದ್ ಮತ್ತು ಶಿವಲಿಂಗ ಯಾರಿಗೂ ತಿಳಿಸದೆ ಬಾಲಕನ ಶವವನ್ನು ನದಿ ದಂಡೆಯಲ್ಲಿ ಪ್ರಾಣಿಯನ್ನು ಹೂತಂತೆ ಹೂತು ಹಾಕಿದರು.

ರಶೀದ ನಾಪತ್ತೆಯಾಗಿರುವ ಸುದ್ದಿ ಎಲ್ಲೆಡೆ ಹರಡಿದ ನಂತರ ಸ್ಥಳೀಯರು ನದಿ ದಂಡೆಯಲ್ಲಿ ಪೊಲೀಸರು ಹೂತಿದ್ದ ಶವದ ಬಗ್ಗೆ ರಶೀದನ ಪೋಷಕರಿಗೆ ತಿಳಿಸಿದರು. ಆ ಕೊಳೆತ ಶವವನ್ನು ಹೊರತೆಗೆದಾಗ ಅದು ರಶೀದನ ಶವವೆಂದು ಗೊತ್ತಾಯಿತು.

ನಿಯಮಗಳಂತೆ ನದಿಯ ನಡುಗಡ್ಡೆಯಾಳ ಕೊರೆದು ಮರಳು ತೆಗೆಯುವಂತಿಲ್ಲ, ನಿಗದಿತ ಸ್ಥಳಗಳ ಹೊರತಾಗಿ ಬೇರೆ ಪ್ರದೇಶಗಳಿಂದ ಮರಳು ಸಂಗ್ರಹಿಸುವಂತಿಲ್ಲ, ಆದರೆ ಮೂಡಿಗೆರೆ ತಾಲ್ಲೂಕಿನಲ್ಲಿ ಹಾದುಹೋಗುವ ಹೇಮಾವತಿಯೊಡಲಲ್ಲಿ ಅನಾಮತ್ತು ಇಪ್ಪತ್ತೊಂದು ಸ್ಥಳಗಳಲ್ಲಿ ಮರಳು ಗಣಿಗಾರಿಕೆ ನಡೆಸಲಾಗುತ್ತಿದೆ. ಈ ದಂಧೆಯಲ್ಲಿ ಮಾಫಿಯಾ ಲೋಕದ ಪಾತ್ರವೂ ಇದೆ. ಮರಳು ಗುತ್ತಿಗೆದಾರರು ಅಕ್ರಮವಾಗಿ ಐವತ್ತು ಅಡಿಗಳಷ್ಟು ಆಳದ ಹೊಂಡಗಳನ್ನು ತೋಡಿದ್ದಾರೆ. ಇದು ಪೊಲೀಸರಿಗೆ ಗೊತ್ತಿದ್ದರೂ ಅವರೆಲ್ಲ ಮರಳು ದಂಧೆಯ ಹೊಂಡದಲ್ಲಿ ಕೈಕಾಲು ಬಡಿಯುತ್ತಿರುವುದರಿಂದ ಅದನ್ನೆಲ್ಲ ಕಂಡೂಕಾಣದಂತಿದ್ದಾರೆ.

ಅದರಲ್ಲೂ ಭ್ರಷ್ಟರ ಕೂಪದಂತಾಗಿರುವ ಮೂಡಿಗೆರೆ ಯಲ್ಲಿ ಇಂತಹ ಅಕ್ರಮಗಳಿಗೆ ಲೆಕ್ಕವೇ ಇಲ್ಲದಂತಾಗಿದೆ. ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಕಮಂಗಿ ಮಹೇಶ್, ಜಿಲ್ಲಾಧಿಕಾರಿ ಚನ್ನಪ್ಪಗೌಡ, ಆರ್‌ಟಿಓನ ಮೂರ್ಖ ರಾಮಾಂಜನೇಯಗಳ ಸನ್ನಿಧಾನದಲ್ಲಿ ಭ್ರಷ್ಟಾಚಾರವೇ ಎಲ್ಲೆಡೆ ತಾಂಡವವಾಡುತ್ತಿದೆ.


ಶಿವಲಿಂಗ

ಸಿಪಿಐ ಬಶೀರ್ ಅಹಮ್ಮದ್ ಮೂಲತಃ ಮಂಜೇಶ್ವರದವನು. ಸರಕಾರಿ ಕೆಲಸದಲ್ಲಿದ್ದ ತಂದೆಯ ಅಕಾಲಿಕ ಸಾವಿನಿಂದಾಗಿ ಅನುಕಂಪದ ಆಧಾರದಲ್ಲಿ ಬಶೀರ್ ಪೋಲಿಸ್ ಇಲಾಖೆಗೆ ಸೇರಿದ್ದ. ಆದರೆ ಬಶೀರ್ ಯಾವತ್ತಿಗೂ ಕೈ ಬಾಯಿ ನೆಟ್ಟಗಿಟ್ಟುಕೊಂಡ ಮನುಷ್ಯನಲ್ಲ. ಈ ಹಿಂದೆ ಈತ ಮಂಗಳೂರಿನ ಕದ್ರಿಯಲ್ಲಿದ್ದಷ್ಟು ದಿನ ಜನಸಾಮಾನ್ಯರನ್ನು ಪೀಡಿಸಿದ್ದ. ಕೊನೆಗೆ ಈತ ಭ್ರಷ್ಟಾಚಾರ, ದುರ್ಬುದ್ಧಿ ಮತ್ತು ಮಾನಗೇಡಿ ವರ್ತನೆಗಳಿಂದಾಗಿಯೇ ಸಸ್ಪೆಂಡಾಗಿದ್ದ. ಆಮೇಲೆ ಅದು ಹೇಗೋ ನಕ್ಸಲ್ ಬಾಹುಳ್ಯವುಳ್ಳ ಕುದುರೆಮುಖಕ್ಕೆ ವಕ್ಕರಿಸಿಕೊಂಡಿದ್ದ. ಈತ ಕುದುರೆಮುಖದಲ್ಲಿದ್ದಷ್ಟೂ ದಿನ ಮರಗಳ್ಳರಿಗೆ ರಕ್ಷಕನಂತಿದ್ದ. ಇತ್ತೀಚೆಗೆ ಮೂಡಿಗೆರೆಯ ಕಡುಭ್ರಷ್ಟ ಸಿಪಿಐ ಜಿ.ಟಿ.ಸ್ವಾಮಿ ಡೀಸೆಲ್ ಮಾಫಿಯಾದೊಂದಿಗೆ ಶಾಮೀಲಾಗಿ ಸಸ್ಪೆಂಡಾದಾಗ ಆತನ ಸ್ಥಾನಕ್ಕೆ ಈ ಬಶೀರ್ ಬಂದು ಕೂತಿದ್ದಾನೆ. ಬಶೀರನ ಘನಂಧಾರಿ ಕೆಲಸಗಳಿಗೆ ಪಿಎಸ್‌ಐ ಶಿವಲಿಂಗ ಪಕ್ಕಾ ಸಾಥ್ ನೀಡುತ್ತಾನೆ.


ರಶೀದ್ ಶವವನ್ನು ಹೂತ ಜಾಗ

ಇವರಿಬ್ಬರೂ ರಶೀದನ ಹೆಣವನ್ನು ಮುಚ್ಚಿ ಅಕ್ರಮ ಮರಳು ದಂಧೆಕೋರರ ಬೆನ್ನಿಗೆ ನಿಂತ ವಿಚಾರ ಗೊತ್ತಾಗುತ್ತಿದ್ದಂತೆ ಮೂಡಿಗೆರೆಯ ಪ್ರಗತಿಪರ ಸಂಘಟನೆಗಳು ಬೀದಿಗಿಳಿದು ಪ್ರತಿಭಟನೆ ನಡೆಸಿದವು. ರಶೀ ದನ ಬಡ ಪೋಷಕರಿಗೆ ಪರಿಹಾರ ನೀಡಬೇಕು, ಭ್ರಷ್ಟ ಪೊಲೀಸರನ್ನು ಮುಲಾಜಿಲ್ಲದೇ ಶಿಕ್ಷಿಸಬೇಕು, ಪ್ರಕರಣವನ್ನು ಸಿಐಡಿಗೆ ವಹಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ಆದರೆ ಇದುವರೆಗೆ ಪ್ರಯೋಜನವಾಗಿಲ್ಲ.

ಮುಡಿಗೆರೆಯ ಶಾಸಕ ಎಂ.ಪಿ.ಕುಮಾರಸ್ವಾಮಿ ಬಿಜೆಪಿಯವನಾದ್ದರಿಂದ ಮುಸಲ್ಮಾನ ಹುಡುಗನ ಕುಟುಂಬಕ್ಕೆ ಪರಿಹಾರ ಕೊಡಿಸುವ ಮಾತಾಡುತ್ತಿಲ್ಲ, ಬದಲಾಗಿ ಮರಳು ಗುತ್ತಿಗೆದಾರರು ಮತ್ತು ಪೊಲೀಸರಿಗೆ ಬೆಂಗಾವಲಾಗಿ ನಿಂತಿದ್ದಾನೆ.

ಇಂತಹ ಮೂಡಿಗೆರೆಯಲ್ಲಿ ಅಮಾಯಕರಿಗೆ ನ್ಯಾಯ, ಭ್ರಷ್ಟರಿಗೆ ಶಿಕ್ಷೆ ಎಂಬುದು ಸಿಗುವುದಾದರೂ ಹೇಗೆ?

• ಅಜೀಜ್ ಕಿರುಗುಂದ

ಕೈಗಾ ನರಕದಲಿ ...ಾಶ್ರಿತರು!


ಉತ್ತರ ಕನ್ನಡದ ಯೋಜನಾ ನಿರಾಶ್ರಿತರು

...ಕನ್ನಡವೆಂದರೆ ದೊಡ್ಡದೊಂದು ನಿರಾಶ್ರಿತರ...

ಯಾವ ದಿಕ್ಕಿಗೆ ನೋಡಿದರೂ ಒಂದಲ್ಲ ...ಜನೆಗೆ ಬಲಿಯಾದ ಸಂತ್ರಸ್ತರು ಕಾಣಿಸುತ್ತಾರೆ. ...ಮೂಂತಕ ಸರ್ಕಾರಿ ಯೋಜನೆಗಳಿಗಾಗಿ ಮನೆ-...ಟ-ದೋಣಿ-ಬಲೆ ಕಳೆದುಕೊಂಡ ಸಾವಿರಾರು ...ಗೋಳು ಹೇಳತೀರದು. ದೇಶಕ್ಕಾಗಿ-ನಾಡಿಗಾಗಿ ...ದ ಮಂದಿ ಅಕ್ಷರಶಃ ಬೀದಿ ಪಾಲಾಗಿದ್ದಾರೆ. ...ರ್ಮಿಸಿರುವ ನಿರಾಶ್ರಿತರ ಕಾಲೋನಿಗಳೆಂಬ ...ಹೊಸ ಬದುಕು ಕಟ್ಟಲಾಗದೆ ಜನರು ...ಾಗಿರುವುದು ಘೋರವಾಗಿದೆ!

...ಂದ್ರ ಕಾರವಾರದ ಸುತ್ತಮುತ್ತ ಜಲ ವಿದ್ಯುತ್, ...ಶ್, ನೌಕಾನೆಲೆ, ಬಂದರು, ಕೋಸ್ಟ್ ಗಾರ್ಡ್.... ...ಹಿಂದೊಂದರಂತೆ ಅನಾಹುತಕಾರಿ ಪ್ರಾಜೆಕ್ಟ್ ...ದೆ. ಈ ಯೋಜನೆಗಳಿಗಾಗಿ ಬಲಾತ್ಕಾರವಾಗಿ ...ದ ಜನರನ್ನು ಅವರವರ ಕುಲಕಸುಬಿಗೂ ...ಲ್ಲದ ಯಾವ್ಯಾವುದೋ ಬರಡು ಪ್ರದೇಶಕ್ಕೆಲ್ಲ ...ಡಲಾಗಿದೆ. ಸೀಬರ್ಡ್ ನೌಕಾ ನೆಲೆಗೆ ಅಡಿಗಲ್ಲು ...ಬಂದಿದ್ದ ಅಂದಿನ ಪ್ರಧಾನಿ ರಾಜೀವ್ ಗಾಂಧಿ ...ತ್ಯಾಗ ಮಾಡಿದವರ ಕಣ್ಣಲ್ಲಿ ನೀರು ಬರದಂತೆ ...ಾಗುತ್ತದೆ....." ಎಂದು ವೀರಾವೇಷದಿಂದ ...ದು ಹೋಗಿದ್ದರು.

...ಗಾಂಧಿ ಅತ್ತ ಹೋಗುತ್ತಲೇ ಇತ್ತ ಹರಿಯಲಾ...ನಿರಾಶ್ರಿತರ ಕಂಬನಿ ರಕ್ತವಾಗಿ ಬಸಿಯುತ್ತಲೇ ...ಲೆಯಿಂದಾಗಿ ನಿರಾಶ್ರಿತರಾದವರಿಗೆ ದಶಕಗಳು ...ಕ್ಷಣಾ ಇಲಾಖೆ ಪರಿಹಾರ ಕೊಡದೆ ಕಾಡುತ್ತಿದೆ; ...ನೆಂದು ಜನ ಗೋಗರೆದರೂ ಕೈಗಾಕ್ಕೆ ತಂದ ...ಅಣು ವಿದ್ಯುತ್ ಸ್ಥಾವರದಿಂದ ಈಗ ದೊಡ್ಡ ...ರಣ ಹಸರಿಸುತ್ತಿದೆ. ಕೈಗಾ ಸ್ಥಾವರದ ಸುತ್ತ ...ಡಿತರು ಹೆಚ್ಚಾಗುತ್ತಿದ್ದಾರೆ. ಪರಿಸರ ಗುತ್ತಿಗೆ ...ಾರಾಡುವ ಚೆಡ್ಡಿ ಸಂಸದ ಅನಂತ್ಕಾಣೆ ಎಂಬ ...ಚೆಡ್ಡಿ ಕೊಳ್ಳದ ಸ್ವಜಾತಿ ಹವ್ಯಕರನ್ನು ಬಿಟ್ಟರೆ ...ಯೋಜನಾ ಬಾಧಿತರು ಕಾಣಿಸುತ್ತಿಲ್ಲ, ಇಂದಿನ ...ಮಂತ್ರಿ, ಕಾಗೇರಿ, ಹಿಂದಿನ ದಗಲುಬಾಜಿ ...ರಾಕ್..... ವಗೈರೆಗಳಿಗೆ ಯೋಜನಾ ಸಂತ್ರಸ್ತರ...

ಉತ್ತರ ಕನ್ನಡದ ಯೋಜನಾ ನಿರಾಶ್ರಿತರು ಅದೆಂಥ ರೌರವ ನರಕಕ್ಕೆ ಬಿದ್ದಿದ್ದಾರೆಂಬುದಕ್ಕೆ ಇಲ್ಲೊಂದು ಸಣ್ಣ ಸ್ಯಾಂಪಲ್ ಇದೆ: ಕೈಗಾ ಅಣುವಿದ್ಯುತ್ ಸ್ಥಾವರಕ್ಕಾಗಿ ಒಕ್ಕಲೆಬ್ಬಿಸಿ ಮಲ್ಲಾಪುರ ಪುನರ್ವಸತಿ ಕೇಂದ್ರಕ್ಕೆ ಕಳಿಸಲ್ಪಟ್ಟವರ ಕಷ್ಟದ ಕತೆಯಿದು. ಈ ರೀಹೆಬಿಲಿಟೇಷನ್ ಸೆಂಟರ್‌ನಲ್ಲಿ ಮೂಲಭೂತ ಸೌಕರ್ಯವೇ ಇಲ್ಲ, ಮನುಷ್ಯರು ವಾಸಿಸಲಾಗದಂಥ ಅವ್ಯವಸ್ಥೆ-ಅವಾಂತರಗಳ ಕೊಂಪೆಯಿದು. 1991 ರಲ್ಲಿ ಕೈಗಾ ಮತ್ತದರ ಅಕ್ಕ-ಪಕ್ಕದ ಹಳ್ಳಿಗಳ 60 ಕ್ಕೂ ಹೆಚ್ಚು ಕುಟುಂಬಗಳನ್ನು ಒಕ್ಕಲೆಬ್ಬಿಸಿ ಮಲ್ಲಾಪುರ ನಿರಾಶ್ರಿತರ ಕಾಲೋನಿಗೆ ಸ್ಥಳಾಂತರಿಸಲಾಗಿತ್ತು. ಅಲ್ಲಿ ಹತ್ತಾರು ಎಕರೆ ಫಲವತ್ತಾದ ಕೃಷಿ ಭೂಮಿಯನ್ನು ಅಣುವಿದ್ಯುತ್ ಯೋಜನೆಗೆಂದು ಕೊಟ್ಟವರಿಗೆ ವಿತರಿಸಿದ್ದು ಎಷ್ಟು ಜಾಗ ಗೊತ್ತಾ? 30x40 ಅಥವಾ 60x90 ಚದರ ಅಡಿಯ ಸೈಟ್ ನೀಡಲಾಗಿತ್ತು!


ಕೈಗಾ ಅಧಿಕಾರಿಗಳು ನಿರ್ಮಿಸಿದ ನೀರಿನ ಟ್ಯಾಂಕ್

ಈ ಮನೆಗಳಲ್ಲಿ 10-15 ಸದಸ್ಯರ ಕುಟುಂಬಗಳು ವಾಸಿಸಲಾಗದೆ ಒದ್ದಾಡುತ್ತಿವೆ. ಸ್ಥಳಾಂತರದ ಹೊತ್ತಲ್ಲಿ ಉದ್ಯೋಗ, ಪರಿಹಾರ ಧನ-ಮನೆ ನಿರ್ಮಾಣದ ಭರಪೂರ ಭರವಸೆ ಕೊಡಲಾಗಿತ್ತು, ಆದರೆ ಕಾಲೋನಿಯಲ್ಲಿ ಅತೀ ಅವಶ್ಯವಾದ ಕುಡಿವ ನೀರು, ರಸ್ತೆ, ಶಾಲೆ, ಆಸ್ಪತ್ರೆಗಳೇ ಇರಲಿಲ್ಲ, ದಶಕಗಳೆರಡು ಉರುಳಿ ದರೂ ಇವತ್ತಿಗೂ ಈ ಕಾಲೋನಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಅಣುವಿದ್ಯುತ್ ನಿಗಮ ನಿರ್ಮಿಸಿ ಕೊಟ್ಟಿಲ್ಲ, ದೇಶಕ್ಕಾಗಿ ತಮ್ಮದೆಲ್ಲ ತ್ಯಾಗ ಮಾಡಿದವರಿಗೆ ಸರ್ಕಾರಿ ಪ್ರಭೃತಿಗಳು ಕೊಟ್ಟಿದ್ದು ದುಃಖ-ದುಮ್ಮಾನ, ಕಷ್ಟ-ನಷ್ಟದ ಪ್ಯಾಕೇಜ್!

ಕೊಟ್ಟಿರುವ ನಿವೇಶನಗಳ ಮೇಲೂ ನಿರಾಶ್ರಿತರಿಗೆ ಹಕ್ಕು ಇಲ್ಲ, ಜಿಲ್ಲಾಡಳಿತ ನೀಡಿರುವ ಈ ಭೂಮಿ ಇವತ್ತಿಗೂ ... ಮತ್ತು ಕೈಗಾ ಆಡಳಿತಾಧಿಕಾರಿ ಹೆಸರಿಗೇ ಇದೆ! ನೀರು ಪೂರೈಕೆಗೆಂದು ಕೈಗಾ ಪ್ರಾಜೆಕ್ಟ್ ಪಂಡಿತರು ದೊಡ್ಡದೊಂದು ಓವರ್ ಹೆಡ್ ಟ್ಯಾಂಕ್ ಕಟ್ಟಿದ್ದಾರೆ; ಪೈಪ್ ಲೈನ್ ಕೂಡಾ ಮಾಡಿದ್ದಾರೆ. ಆದರೂ ಯಾವ ಮನೆಗೂ ಹನಿ ನೀರು ಬರುತ್ತಿಲ್ಲ, ನೀರಿಗಾಗಿ ಈ ಜನ ಪಡುವ ಕಷ್ಟ ಅಷ್ಟಿಷ್ಟಲ್ಲ. ಇಲ್ಲಿರುವ ಆಸ್ಪತ್ರೆಗಳು ಕೈಗಾ ನೌಕರರಿಗೆ-ಅಧಿಕಾರಿಗಳಿಗಷ್ಟೇ ಸೀಮಿತ. ನಿರಾಶ್ರಿತರು ಅಸ್ವಸ್ಥರಾಗಿ ಬಂದರೆ ನಿರ್ಣಯವಾಗಿ ಓಡಿಸುತ್ತಾರೆ. ನಿರಾಶ್ರಿತರು ಶೀತ-ಸಂಕಟವಾದರೆ 50 ಕಿ.ಮೀ. ದೂರದ ಕಾರವಾರಕ್ಕೇ ಓಡಬೇಕು!

ಪುನರ್ವಸತಿ ಕಾಲೋನಿಗೆ ನಿರಾಶ್ರಿತರ ಸ್ಥಳಾಂತರಿಸುವಾಗ ಆಳುವ ಖೂಳರು ಮತ್ತು ಎನ್‌ಪಿಸಿ (ನ್ಯೂಕ್ಲಿಯರ್ ಪವರ್ ಕಾರ್ಪೊರೇಷನ್)ಯವರು ಕೊಟ್ಟ ಭರವಸೆಯಲ್ಲಿ ಶೇ. 10 ರಷ್ಟೂ ಈಡೇರಿಲ್ಲ. ಇಂಥದೊಂದು ನರಕಸದೃಶ ಪುನರ್ವಸತಿ ಕೇಂದ್ರ ಜಿಲ್ಲೆಯಲ್ಲಿದೆ ಎಂಬುದೇ ದೇಶಭಕ್ತ ಜಿಲ್ಲಾ ಉಸ್ತುವಾರಿ ಮಂತ್ರಿ ಕಾಗೇರಿ, ಸಂಸದ ಅನಂತ್ಕಾಣೆಗಳಿಗೆ ಗೊತ್ತಿರುವಂತಿಲ್ಲ, ಕಾಸು ಮಾಡುವುದು, ಖಾಲಿ ಬರಡು ರಾಜಕಾರಣ ಮಾಡುವುದರಲ್ಲೇ ಕಾಲ ಕಳೆಯುತ್ತಿರುವ ಈ ಜನದ್ರೋಹಿಗಳ ಕಾಟದಿಂದ ಕೈಗಾ ನಿರಾಶ್ರಿತರೀಗ ರೋಸತ್ತು ಹೋಗಿದ್ದಾರೆ. ತಮ್ಮ ಹಕ್ಕಿಗಾಗಿ ಬೀದಿಗಿಳಿವ ತಯಾರಿಯಲ್ಲಿದ್ದಾರೆ.

ಅಸಹಾಯಕ ನಿರಾಶ್ರಿತರು ದಂಗೆ ಎದ್ದರೆ ಅದಕ್ಕೆ ಜಿಲ್ಲಾ ಮಂತ್ರಿ ಕಾಗೇರಿ ಮತ್ತವನ ನಿದ್ದೆಬಡುಕ ಜಿಲ್ಲಾಡಳಿತವೇ ಹೊಣೆ. ಜನ ಹೋರಾಟಕ್ಕಿಳಿವ ಮೊದಲೇ ಸಂಬಂಧಿಸಿದವರು ಎಚ್ಚೆತ್ತುಕೊಳ್ಳುವರಾ? ದೇಶಕ್ಕಾಗಿ ಎಲ್ಲವನ್ನೂ ಬಿಟ್ಟು ಬರಿಗೈಲಿ ನಿಂತಿರುವವರ ನ್ಯಾಯೋಚಿತ ಬೇಡಿಕೆ ಈಡೇರಿಸುವರಾ?

• ನಹುಶ

ಬಂದೂಕಿನ ನಡುವೆ ಬದುಕು!!

ಕೈಗಾ ಅಣುವಿದ್ಯುತ್ ಸ್ಥಾವರಕ್ಕಾಗಿ ಫಲವತ್ತಾದ ಜಮೀನು ಕಳಕೊಂಡು ಗೋಳಾಡುತ್ತಿರುವ ಬಡ ಬುಡಕಟ್ಟು ಕುಟುಂಬಗಳ ಬವಣೆಯ ಕತೆಯಿದು. ಕೈಗಾಕ್ಕೆ ಹೊಂದಿಕೊಂಡೇ ಇರುವ 'ಹೆಬ್ಬುಳಿ'ಯಲ್ಲಿ ನಾಲ್ಕು ಹಾಲಕ್ಕಿ ಒಕ್ಕಲಿಗರ ಕುಟುಂಬಗಳು ವಾಸವಾಗಿವೆ. ನಾರಾಯಣ ಗೌಡ, ಸುರುಕು ಗೌಡ, ವೆಂಕಾಗೌಡ, ಸುಬ್ರಾಯ ಗೌಡ ಈ ಹೆಬ್ಬುಳಿಯಲ್ಲಿದ್ದಾರೆ. ದೇವಕಾರು ಗ್ರಾಮದ ಸರ್ವೆ ನಂಬರ್ 77/1 ರಲ್ಲಿ ಇವರಿಗೆ ಒಟ್ಟು 4 ಎಕರೆ ಜೀವನಾಧಾರ ಕೃಷಿ ಜಮೀನಿತ್ತು.

ಇದರಲ್ಲಿ ಮುಕ್ಕಾಲು ಪಾಲು ಭೂಮಿಯನ್ನು ಕದ್ರಾ ಜಲ ವಿದ್ಯುತ್ ಯೋಜನೆಗಾಗಿ ಸರ್ಕಾರ ಆಪೋಷನ ಪಡೆದಿತ್ತು, ಇನ್ನುಳಿದ ಕಾಲು ಭಾಗ ಅಣು ವಿದ್ಯುತ್ ಯೋಜನೆಯ ಸ್ವಾಧೀನದಲ್ಲಿದೆ! ಆದರೆ ಗೌಡರ ಕುಟುಂಬದವರು ತಮಗೆ ಪರಿಹಾರ ಸಿಗುವ ತನಕ ಇಲ್ಲಿಂದ ಹೋಗುವುದಿಲ್ಲವೆಂದು ಹಠ ಹಿಡಿದು ಕೂತಿದ್ದಾರೆ. ಕದ್ರಾ ಯೋಜನೆಯಲ್ಲಿ ಈ ಕುಟುಂಬಗಳಿಗೆ ಪರಿಹಾರ ಸಿಕ್ಕಿರುವುದರಿಂದ ಕೈಗಾ ಪ್ರಾಜೆಕ್ಟ್‌ನಲ್ಲೂ ಪರಿಹಾರ ಕೊಡಲಾಗದೆಂಬ ಎಡವಟ್ಟು ವಾದ ಸರ್ಕಾರಿ ಮಂದಿಯದು! ಇದೆಂಥ ಜಂಗಲ್ ನ್ಯಾಯ?

ಈ ಗೌಡರ ಕುಟುಂಬಗಳನ್ನು ಒಕ್ಕಲೆಬ್ಬಿಸಲು ತರತರದ ಕುತಂತ್ರ ಕೈಗಾ ಅಧಿಕಾರಿಗಳು ಈ 20 ವರ್ಷದಲ್ಲಿ ನಿರಂತರವಾಗಿ ಮಾಡುತ್ತಲೇ ಬಂದಿದ್ದಾರೆ. ಇದ್ಯಾವುದಕ್ಕೂ ಈ ಕಾಡಿನ ಮಕ್ಕಳು ಜಗ್ಗಿಲ್ಲ-ಬಗ್ಗಿಲ್ಲ. ಈಗ ಅವರಿಗಿರುವ ಏಕೈಕ ಸಂಪರ್ಕ ರಸ್ತೆಯನ್ನೇ ಕೈಗಾ ಅಧಿಕಾರಿಗಳು ಬಂದ್ ಮಾಡಿದ್ದಾರೆ. ಸಿಐಎಸ್‌ಎಫ್ ಯೋಧರು ಬಂದೂಕು ತೋರಿಸಿ ಜಾಗ ಖಾಲಿ ಮಾಡುವಂತೆ ಬೆದರಿಸುತ್ತಾರೆ. ಬಂದೂಕು ತೋರಿಸಿಯೇ ಕಾಂಪೌಂಡ್ ಗೋಡೆ ಕೈಗಾ ಅಧಿಕಾರಿಗಳು ಹಾಕಿದ್ದಾರೆ.

ಮಾತು-ಮಾತಿಗೆ ಬಂದೂಕು ತೋರಿಸಿ ಬೆದರಿಸುವ ಕೈಗಾ ಅಧಿಕಾರಿಗಳ ಕಾಟ ತಾಳಲಾಗದೆ ಗೌಡರು ಜಿಲ್ಲಾಡಳಿತಕ್ಕೆ ದೂರು ಕೊಟ್ಟಿದ್ದರು. ಸ್ಥಳಕ್ಕೆ ಬಂದಿದ್ದ ಕಾರವಾರ ತಹಶೀಲ್ದಾರ್ ಬಸವರಾಜ್ ಎಂಬ ಭಂಡ ಅಸಹಾಯಕ ಜನರ ನೆರವಿಗೆ ಬರದೇ ಪಲಾಯನ ಮಾಡಿದ್ದಾನೆ. ಈಗ ಹೆಬ್ಬುಳಿ ಜನರ ಪಾಡು ಅತ್ತ ಕಾಳಿನದಿ ಇತ್ತ ದೈತ್ಯಾಕಾರದ ಕಾಂಪೌಂಡ್ ಗೋಡೆ ಎಂಬಂತಾಗಿದೆ. ನಾಗರಿಕ ಪ್ರಪಂಚದ ಸಂಪರ್ಕವೇ ತಪ್ಪಿಹೋಗಿದೆ.

ಈ ಅತಂತ್ರ-ಅಸಹಾಯಕರ ಅಳಲು ಕಿವುಡ ... ಪ್ರತಿನಿಧಿಗಳಿಗಂತೂ ಕೇಳಿಸದು. ಬದಿ. ಜಿಲ್ಲಾಡಳಿತ ...ಕ್ಯಾದರೂ ಹೆಬ್ಬುಳಿ ಜನರ ದಿಗ್ಬಂಧನದ ... ... ?

ಬದುಕೆಂಬ ಸುಳಿಯಲ್ಲಿ...



ಸ್ಕೂಲಿಗೆ ಹೋಗುವುದನ್ನು ಬಿಟ್ಟು ಚಿತ್ರಗಳಲ್ಲಿ ನಟಿಸಲಾರಂಭಿಸಿದಾಗ ಹಂಸಾ ವಾಡಕರಳಿಗೆ (1923-1972) ಹನ್ನೊಂದೂ ತುಂಬಿರಲಿಲ್ಲ. ಅತಿಯಾಗಿ ಕುಡಿಯುತ್ತಿದ್ದ ತಂದೆಯ ಆದಾಯದಲ್ಲಿ ಬದುಕು ನಡೆಸುವುದು ದಿನದಿಂದ ದಿನಕ್ಕೆ ದುಸ್ತರವಾಗುತ್ತಾ ನಡೆದಿತ್ತು. ಬಾಲಕಿ ಹಂಸಾಳ ದುಡಿತ ಮನೆಯ ಪರಿಸ್ಥಿತಿಯನ್ನು ಸ್ವಲ್ಪ ಸುಧಾರಿಸಿತ್ತು.

ಪ್ರಸಿದ್ಧ ಮರಾಠಿ ನಾಟಕಕಾರ ಮಾಮಾ ವಾರೇರಕರ ಬರೆದ ನಾಟಕವನ್ನು ಆಧರಿಸಿ ನಿರ್ಮಿಸಲ್ಪಟ್ಟ ಹಂಸಾಳ ಮೊದಲ ಚಿತ್ರ 'ವಿಜಯಾಚಿ ಲಗ್ನೆ' (ವಿಜಯಾಳ ಲಗ್ನ) ತಕ್ಷಣ ಜನಪ್ರಿಯವಾಗಿದ್ದಲ್ಲದೇ ತಿಂಗಳಿಗೆ 250 ರೂಪಾಯಿ ಸಮೃದ್ಧ ಸಂಭಾವನೆಯನ್ನೂ ತಂದುಕೊಟ್ಟಿತು. ಹದಿನಾಲ್ಕನೆಯ ವಯಸ್ಸಿನಲ್ಲಿ ಮದುವೆಯಾಗುವ ಹೊತ್ತಿಗೆ ಹಂಸಾ ಹತ್ತು ಚಿತ್ರಗಳಲ್ಲಿ ನಟಿಸಿಯಾಗಿತ್ತು. ಈ ಪ್ರತಿಭಾನ್ವಿತ ಹೆಣ್ಣು ಅತ್ಯಂತ ಜನಪ್ರಿಯ ಮರಾಠೀ ನಟಿಯರಲ್ಲೊಬ್ಬಳು. ಮೂವತ್ತಕ್ಕಿಂತ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದ ಹಲವು ರೀತಿಯಲ್ಲಿ ಏಕಾಂಗಿಯಾಗಿದ್ದ ಹಂಸಾ ಸತ್ತಾಗ ಆಕೆಗೆ ಐವತ್ತೂ ತುಂಬಿರಲಿಲ್ಲ.

'ಸಾಂಗಾತ್ಯ ಐಕ' (1970ರಲ್ಲಿ) ಆಕೆ ಅರುಣ್ ಸಾಂಧೀ ಅವರಿಗೆ ನಿರೂಪಿಸಿದ ಆತ್ಮ ಕಥನ. ಹಂಸಾ ವಾಡಕರಳ ಹುಟ್ಟು ಹೆಸರು ರತನ್ ಸಲಗೋನಕರ್. ಚಿತ್ರರಂಗಕ್ಕೆ ಬಂದ ಮೇಲೆ ಕುಟುಂಬದ ಹೆಸರಿನಿಂದ ತನ್ನನ್ನು ಗುರುತಿಸಿಕೊಳ್ಳುವ ಬಗ್ಗೆ ಅಣ್ಣ ತಕರಾರು ತೆಗೆದಾಗ ತನ್ನ ಅಜ್ಜಿಯ ವಾಡಕರ್ ಎಂಬ ಹೆಸರನ್ನು ಹಂಸಾ ಆರಿಸಿಕೊಂಡಳು. ಆಕೆಯ ಅಜ್ಜಿ ನಾಯಕಸಾನಿ ವಂಶದವಳು. ಅತ್ಯಂತ ಹೆಸರಾದ ಗಾಯಕಿ. ಹಂಸಾ ಹುಟ್ಟಿದಾಗ ತೀವ್ರ ಕಾಯಿಲೆಯಿಂದ ನರಳುತ್ತಿದ್ದ ಆಕೆಯ ಅಣ್ಣನ ಪಾಲನೆಗೋಸ್ಕರ ಹಂಸಾಳನ್ನು ಕೊಂಕಣ ಕರಾವಳಿಯಲ್ಲಿದ್ದ ಅಜ್ಜಿಯ ಮನೆಗೆ ಸಾಗ ಹಾಕಲಾಯಿತು. ಒಂಭತ್ತು ವಯಸ್ಸಿನ ತನಕ ಅಜ್ಜಿಯ ಮನೆಯಲ್ಲಿದ್ದ ಹಂಸ ನಾಲ್ಕು ವರ್ಷದ ಶಾಲಾ ವಿದ್ಯಾಭ್ಯಾಸವನ್ನು ಮುಗಿಸಿದ್ದಳು.

ಅಜ್ಜಿಯ ಮನೆಯೆದುರು ಸ್ವಲ್ಪ ಸ್ಥಿತಿವಂತ ಕುಟುಂಬವೊಂದು ವಾಸಿಸುತ್ತಿತ್ತು. ಎರಡು ಮನೆಯವರ ಮಧ್ಯೆ ಕೊಡುಕೊಳ್ಳುವ, ಹೋಗಿ ಬರುವ ಸೌಹಾರ್ದವಿತ್ತು. ಅವಳಿಗಿಂ ಹತ್ತು ವರ್ಷ ಹಿರಿಯನಾದ ಆ ಮನೆಯ ಜಗನ್ನಾಥ್ ಭಂಡಾರಕರ್ ಎಂಬುವವ ತನ್ನ ಮದುವೆಯಾಗಬೇಕೆಂದು ಆರು ವರ್ಷದ ಹಂಸಾಳ ಕೈಯಲ್ಲಿ ಆಣೆ ಮಾಡಿಸಿದ್ದ. ಆ ವರುಷಗಳು ಕಳೆದ ಮೇಲೂ ಅವಳ ಬೆನ್ನು ಹತ್ತುವುದನ್ನು ಬಿಡಲಿಲ್ಲ. ಆಕೆ ಇನ್ನಾರಲ್ಲೋ ಅನುರಕ್ತಳಾಗಿದ್ದಾಳೆಂಬ ಸಂಶಯದಿಂದ 'ಏರ್ ಮೇಲ್' ಚಿತ್ರೀಕರಣ ನಡೆಯುತ್ತಿದ್ದ ಕರಾಚಿಗೂ ಹಿಂಬಾಲಿಸಿ ಹೋಗಿದ್ದ.

ಕುಡಿತದ ಚಟಕ್ಕೆ ಬಲಿಯಾಗಿದ್ದ ಹಂಸಾಳ ತಾಯಿಗೆ ಮಗಳು ಹಣ ಸಂಪಾದಿಸು ಯಂತ್ರ ಅಷ್ಟೇ. ಹಂಸಾ ಅಮ್ಮನ ವಿರುದ್ಧ ತಿರುಗಿ ಬಿದ್ದಿದ್ದಳು. 1937 ರಲ್ಲಿ ಹದಿನಾಲ ವರ್ಷದ ಹಂಸ ತನ್ನ ಅಮ್ಮನನ್ನು ಧಿಕ್ಕರಿಸುವುದಕ್ಕೋಸ್ಕರವೇ ಜಗನ್ನಾಥ ಭಂಡಾರಕರ್‌ನೊಂದಿ ಮಲಗಿ ಮೂರು ತಿಂಗಳ ಬಸಿರನ್ನು ಹೊತ್ತು ಅವನನ್ನು ಮದುವೆ ಮಾಡಿಕೊಂಡಳು

ಗಂಡ ಭಂಡಾರಕರ್ ಆಕೆಯ ಪ್ರತಿರೋಧಿಸುವ ಶಕ್ತಿಯನ್ನೇ ಕುಂದಿಸಿದ್ದ. ಆತನ ಆಕೆಯ ತಾಯಿಯಂತೆಯೇ ಶೋಷಿಸಲಾರಂಭಿಸಿದ್ದ. ಹಂಸಾ ಹಲವು ಸಲ ಮನೆಯಿಂ ಓಡಿಹೋಗಿದ್ದಳು. 1971ರಲ್ಲಿ, ಆಕೆ ಸಾಯುವ ಒಂದು ವರ್ಷದ ಮುಂಚೆ, ರಾ ಸರ್ಕಾರ ಪ್ರಶಸ್ತಿಯಿತ್ತು ಸನ್ಮಾನಿಸಿತು. ಆ ಹೊತ್ತಿಗೆ ಹಂಸಾ ಕುಡಿತದ ವ್ಯಸನಿಯಾ ಒಂಟಿಯಾಗಿ ಬದುಕುತ್ತಾ, ನೋಡಬೇಕೆಂಬ ಆಸೆಯಿದ್ದರೂ ತನ್ನ ಮಗಳನ್ನು ನೋಡಲಾಗ ಕಾಲ ತಳ್ಳುತ್ತಿದ್ದಳು. 1977ರಲ್ಲಿ ಪ್ರಶಸ್ತಿಯನ್ನು ಪಡೆದುಕೊಂಡ ಶ್ಯಾಮ್ ಬೆನೆಗ ನಿರ್ದೇಶನದ ಚಿತ್ರ 'ಭೂಮಿಕಾ' ಹಂಸಾಳ ಆತ್ಮಕಥನವನ್ನು ಆಧರಿಸಿ ನಿರ್ಮಿಸಿದ್ದು. ಚಿತ್ರ ಪ್ರಾರಂಭಿಕ ದೃಶ್ಯಗಳು 'ಸಾಂಗಾತ್ಯ ಐಕ' ಚಿತ್ರವನ್ನು ಪ್ರಸ್ತಾಪಿಸುತ್ತವೆ.

ಹೇಳುತ್ತಿದ್ದೇನೆ, ಕೇಳು

ಸದ್ಯದಲ್ಲೇ ಲಂಕೇಶ್ ಪ್ರಕಾಶನವು ಸುಕನ್ಯಾ ಕನಾರಳ್ಳಿ ಅವರು ನಿರೂಪಿಸಿರುವ ಜಗತ್ತಿನ ವಿವಿಧ ಮಹಿಳೆಯರ ಆತ್ಮಕಥನಗಳ ಆಯ್ದಭಾಗಗಳನ್ನು ಒಂದು ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಿದೆ. ಆ ಪುಸ್ತಕ ಸ್ತ್ರೀವಾದಿ ಸಂವೇದನೆಯನ್ನು ಹೆಚ್ಚಿಸುವಲ್ಲಿ ನೆರವಾಗಲಿದೆ. ಆ ಪುಸ್ತಕದಲ್ಲಿ ಮೂಡಿ ಬರಲಿರುವ ಮರಾಠಿ ನಟಿ ಹಂಸಾ ವಾಡ್ಕರ್‌ಳ ಜೀವನಗಾಥೆಯ ಒಂದು ಭಾಗವನ್ನು ಇಲ್ಲಿ ನೀಡುತ್ತಿದ್ದೇವೆ....



ಕೊಲ್ಲಾಪುರದಲ್ಲಿ ಚಲನಚಿತ್ರದ ಶೂಟಿಂಗ್ ಮುಗಿಸಿಕೊಂಡು ಈ ಬಾರಿ ಬಾಂಬೆಗೆ ಹಿಂತಿರುಗಿ ಬಂದ ಮೇಲೆ, ನನ್ನ ಮತ್ತು ನನ್ನ ಗಂಡನ ಸಂಬಂಧ ಹದಗೆಡುತ್ತಲೇ ಹೋಯಿತು. ಹಣದ ಮುಗ್ಗಟ್ಟು ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸಿತು.

ಸಂಬಂಧ ಹದಗೆಡುವುದಕ್ಕೆ ತಕ್ಷಣದ ಕಾರಣವೇನೂ ಇರಲಿಲ್ಲ. ಮೊದಲಿನಿಂದಲೂ ನಾವಿಬ್ಬರೂ ಜಗಳವಾಡುತ್ತಲೇ ಇದ್ದೆವು. ಸಣ್ಣ ನೆಪವೂ ಸಾಕಿತ್ತು. ಬದುಕುವುದೇ ಅಸಹನೀಯ ಎನ್ನಿಸಲಾರಂಭಿಸಿತ್ತು. ಒಂದಿಷ್ಟೂ ಸಂತೋಷ ಸಮಾಧಾನ ಇರಲಿಲ್ಲ. ಬೇಕಾದಷ್ಟು ಹಣ ಸಂಪಾದಿಸುತ್ತಿದ್ದೆ ಎನ್ನುವುದೇನೋ ನಿಜ. ಆದರಿಂದ ಯಾವ ತೃಪ್ತಿಯೂ ಇರಲಿಲ್ಲ. ಕೆಲಸದಲ್ಲಿಯೂ ತೃಪ್ತಿ ಎನ್ನುವುದು ಇರಲಿಲ್ಲ. ಗಳಿಸಿದ ಹಣ, ವೈಯಕ್ತಿಕ ಬದುಕು ಎರಡರಲ್ಲೂ ತೃಪ್ತಿ ಸಮಾಧಾನಗಳು ಇರಲಿಲ್ಲ. ರೇಖಾ ಹುಟ್ಟಿದಾಗ ನನಗೆ ಹದಿನೆಂಟು ವರ್ಷ. ಆದಾದನಂತರ ಮೂರು ಬಾರಿ ಬಸಿರಾಗಿದ್ದೆ. ಪ್ರತಿ ಸಲ ಬಸಿರಿನ ಸುದ್ದಿ ತಿಳಿದಾಗಲೂ ನನಗೆ ಸಂತಸ, ಸಂಭ್ರಮ. ಮಕ್ಕಳೆಂದರೆ ನನಗೆ ಅಷ್ಟು ಪ್ರೀತಿ. ಆದರೆ ಪ್ರತಿ ಬಾರಿಯೂ ನನ್ನ ಗಂಡನಿಗೆ ಮಗು ತನ್ನದಲ್ಲವೆಂಬ ಸಂಶಯ. ನಿಜ ಹೇಳಬೇಕೆಂದರೆ ಆ ವಿಷಯಗಳಲ್ಲಿ ನಾನು ಬಿಗಿಯಾಗಿದ್ದೆ. ಆ ಮಕ್ಕಳು ಅವನವೇ. ಆದರೂ ನಂಬಲೊಲ್ಲದ ಮಹಾ ಸಂಶಯ ಬುದ್ಧಿ.

ಮೂರನೆಯ ಸಲ ಬಸಿರು ಕಳೆಯುವ ಔಷಧಿಯನ್ನು ಅವನು ತಂದುಕೊಟ್ಟಾಗ ನಾನು ಕುಡಿಯಲಿಲ್ಲ. ನನಗೆ ಮಗು ಬೇಕಿತ್ತು. ಅಷ್ಟೇ ಅಲ್ಲ, ಆ ಔಷಧಿಯ ಪರಿಣಾಮ ಭಯಂಕರವಾಗಿರುತ್ತಿತ್ತು. ನಾನು ಔಷಧಿ ಕುಡಿದಿಲ್ಲವೆಂದು ಗೊತ್ತಾದಾಗ ವೈದ್ಯರೊಬ್ಬರನ್ನು ಮನೆಗೆ ಕರೆದು ತಂದು ನನಗೆ ಆಪರೇಷನ್ ಮಾಡುವಂತೆ ಆಗ್ರಹಿಸಿದ. ಐದು ತಿಂಗಳಿನ ಬಸಿರು. ಪ್ರತಿಸಲ ಗರ್ಭಪಾತಕ್ಕೆ ಬಲವಂತ ಮಾಡಿದಾಗ ಕೋಪದಿಂದ ಹುಚ್ಚಳಾಗುತ್ತಿದ್ದೆ. ಅಸಹಾಯಕಳಾಗಿ ರೋದಿಸುತ್ತಿದ್ದೆ. ನನಗೆ ಮಗು ಬೇಕಿತ್ತು. ನನ್ನ ಅವನ ನಡುವೆ ಜಗಳ ಹುಟ್ಟಲು ಇದು ಮುಖ್ಯ ಕಾರಣ. ಅವನು ಗಂಡನಲ್ಲ, ನನ್ನ ಶತ್ರುವೆನ್ನಿಸುತ್ತಿತ್ತು. ಒಂದು ದಿನ ಕೆಟ್ಟದಾಗಿ ವರ್ತಿಸಿದೆ. ಬೇಕೆಂತಲೇ, ಅವನನ್ನು ರೇಗಿಸುವುದಕ್ಕೋಸ್ಕರವೇ. ವಿನಾಕಾರಣ ನನ್ನನ್ನು ಸಂಶಯಿಸಿದರೆ ನನಗೆ ಕೋಪ, ಕಿರಿಕಿರಿ. ಯಾವ ದೋಷವನ್ನು ನನ್ನ ಮೇಲೆ ಹೊರೆಸುತ್ತಾರೋ, ಅದನ್ನು ನಿಜ ಮಾಡಿಯೇ ತೋರಿಸುವ ಹಟ.

****

ಮನಸ್ಸು ಪ್ರಕ್ಷುಬ್ಧವಾಗಿದ್ದ ಆ ದಿನಗಳಲ್ಲಿ ಯಾವ ರೀತಿಯ ವೈಯಕ್ತಿಕ ಸಂತೋಷ ಸಮಾಧಾನಗಳಿರಲಿಲ್ಲ. ಶೂಟಿಂಗ್ ಮುಗಿಸಿಕೊಂಡು ಯಾವ್ಯಾವುದೋ ಹೊತ್ತಿನಲ್ಲಿ ಮನೆಗೆ ಬರುತ್ತಿದ್ದೆ. ಕೆಲವೊಮ್ಮೆ ಬೆಳಗಿನ ನಾಲ್ಕು, ಐದು ಗಂಟೆಯಾಗಿರುತ್ತಿತ್ತು. ಇಡೀ ಮನೆ ನಿದ್ರಿಸಿರುತ್ತಿತ್ತು. ಆಯಾಸ, ಕಿರಿಕಿರಿ. ತಾಯಿಯಾದರೂ ನನ್ನ ಬಗ್ಗೆ ಕೇಳಬಾರದೇ ಅಂತ ಅನ್ನಿಸುತ್ತಿತ್ತು. ಯಾರಿಗೂ ನನ್ನ ಬಗ್ಗೆ ಲಕ್ಷ್ಯ ಇಲ್ಲ. ಅಪ್ಪ ಮಾತ್ರ ನಾನು ಬಂದಾಗ ಎಚ್ಚರಾಗುತ್ತಿದ್ದರು. ಆದರೇನು? ನಡೆಯಲಾಗುತ್ತಿರಲಿಲ್ಲ. ಹಾಸಿಗೆಯಲ್ಲೇ 'ಏನಾದರೂ ತಿಂದು ಮಲಗಿಕೋ ಮಗು' ಎಂದು ಹೇಳುತ್ತಿದ್ದರು. ತಿನ್ನಬೇಕೆನ್ನಿಸುತ್ತಿರಲಿಲ್ಲ. ಅಪ್ಪ ಸತ್ತ ಮೇಲೆ ಅದನ್ನು ಹೇಳುವವರೂ ಇಲ್ಲವಾಯ್ತು. ನಮ್ಮ ಇಬ್ಬರು ಕೆಲಸದವರು ರಘುನಾಥ್ ಮತ್ತು ಬಾಲು. ಅವರಿಗಷ್ಟೆ ನನ್ನ ಬಗ್ಗೆ ಸ್ವಲ್ಪ ಕಾಳಜಿ. ರಘುನಾಥ್ ಮದ್ರಾಸಿನವನು. ಮನೆಗೆ ಹಿಂತಿರುಗಿದರೆ ನನ್ನ ಸ್ನಾನಕ್ಕೆ ನೀರನ್ನು ಅಣಿ ಮಾಡಿ, ಊಟವನ್ನು ಬಿಸಿ ಮಾಡಿ ಕಾದಿರುತ್ತಿದ್ದ. ಸ್ನಾನ ಮುಗಿಸಿ ಊಟಕ್ಕೆ ಕೂತರೆ ಮುಗಿಯುವತನಕ ಅವನೂ ಕೂತಿರುತ್ತಿದ್ದ. ದೆವ್ವದಂತೆ ಒಬ್ಬಳೇ ಕೂತು ಊಟ ಮಾಡುತ್ತಿದ್ದೆ. ಹಾಸಿಗೆ ಸೇರುವ ಹೊತ್ತಿಗೆ ಬೆಳಗಿನ ನಾಲ್ಕೋ ಐದೋ ಗಂಟೆ. ಎಚ್ಚರವಾಗುತ್ತಿದ್ದುದು ಹನ್ನೊಂದು ಗಂಟೆಗೆ. ಅಪ್ಪನ ಜೊತೆ ಮಾತಾಡುತ್ತಲೋ, ಪುಸ್ತಕವೊಂದನ್ನು ತಿರುವಿ ಹಾಕುತ್ತಲೋ ಇರುವಷ್ಟರಲ್ಲಿ ಶೂಟಿಂಗ್‌ಗೆ ಹೋಗುವ ಹೊತ್ತಾಗಿರುತ್ತಿತ್ತಲ್ಲ! ಮನೆಯಲ್ಲಿ ಇನ್ಯಾರೊಂದಿಗೂ ಮಾತಿಲ್ಲ. 'ಇದೆಂಥ ಮನೆ? ಕೌಟುಂಬಿಕ ಸಂತೋಷ ಅಂದರೆ ಇದೇನೆ?' ಅಂತ ಅಂದುಕೊಳ್ಳುವಂತಾಗುತ್ತಿತ್ತು.

ಮನಸ್ಸಿನ ತುಮುಲ ತಳಮಳದಿಂದ ಅತೃಪ್ತಿ ಎರಡು ಪಟ್ಟು ಹೆಚ್ಚಾಗುತ್ತಿತ್ತು. ನನ್ನ ಮನಸ್ಸಿನಲ್ಲಾಗುತ್ತಿದ್ದ ತಲ್ಲಣದ ಪರಿವೆ ಯಾರಿಗೂ ಇದ್ದಂತೆ ಕಾಣೆ. ಅದೇ ಮನಸ್ಥಿತಿಯಲ್ಲಿ 'ಶ್ರೀ ಗುರುದೇವ್ ದತ್' ಚಿತ್ರದಲ್ಲಿ ಅಭಿನಯಿಸಿದೆ.

ಕೊಲ್ಲಾಪುರದಿಂದ ಹಿಂತಿರುಗಿ ಬಂದಾಗ ಮಾನಸಿಕ ಹಿಂಸೆ ಮತ್ತಷ್ಟು ಹೆಚ್ಚಿತು. ನನ್ನ ಗಂಡ ನನ್ನ ಮೇಲೆ ಹೊಸ ಹೊಸ ನಿರ್ಬಂಧಗಳನ್ನು ಹೇರಿದ್ದ. ನಾನು ಕೆಲಸ ಮಾಡುವ ವೇಳೆಯನ್ನು ಅವನಿಗೆ ಮುಂಚೆಯೇ ಹೇಳಬೇಕು. ನಿಗದಿತ ಸಮಯಕ್ಕೆ ಮನೆಗೆ ಬರಬೇಕು. ಸ್ವಲ್ಪ ತಡವಾದರೂ ಕಿರಿಕಿರಿ, ಪ್ರಶ್ನೆ, ಸಂಶಯ.

ಕೊಲ್ಲಾಪುರದಲ್ಲಿ ನಾನು ಭೆಟ್ಟಿಮಾಡಿದ್ದ ಜೋಶಿ ಆಗ ಬಾಂಬೆಯಲ್ಲಿ ಇದ್ದ. ಅವನನ್ನು ಆಗಾಗ್ಗೆ ಭೆಟ್ಟಿ ಮಾಡುತ್ತಿದ್ದೆ. ನಮ್ಮಿಬ್ಬರ ಗೆಳೆತನ ಬೆಳೆಯಲಾರಂಭಿಸಿತ್ತು.

ಒಂದು ದಿನ ನನ್ನ ಭಂಡಾರ್ಕರ್ ನಡುವಿನ ಜಗಳ ಮಿತಿ ಮೀರಿತು. ಧಿಮ್ಮೆನ್ನುತ್ತಿದ್ದ ತಲೆಯಲ್ಲಿ ಮನೆ ಬಿಟ್ಟೆ. ಸೀದಾ ಹೋಗಿದ್ದು ಜೋಶಿ ಇದ್ದಲ್ಲಿಗೆ. ಶ್ರೀಕಾಂತ್ ಸೂತರ್ ಸಹ ಅಲ್ಲಿದ್ದ. ಎಲ್ಲರೂ ಪಿಕ್ಕಾಪಟ್ಟೆ ಕುಡಿದೆವು. ಅತಿಯಾಗಿ ಪ್ರಜ್ಞೆ ತಪ್ಪಿದೆ. ನನಗೆ ಯಾವತ್ತೂ ಹಾಗಾಗಿರಲಿಲ್ಲ.

ಮಾರನೆಯ ಬೆಳಿಗ್ಗೆ ಪ್ರಜ್ಞೆ ಬಂದಾಗ ನೆರೆಯಲ್ಲಿದ್ದ ಮನೆಯ ಟೆರೇಸಿನಲ್ಲಿ ಚಾಪೆಯೊಂದರ ಮೇಲೆ ಮಲಗಿದ್ದೆ. ರಾತ್ರಿ ಏನಾಗಿತ್ತು ಎನ್ನುವುದರ ಪ್ರಜ್ಞೆಯೇ ಇರಲಿಲ್ಲ. ಪೂರ್ತಿ ಎಚ್ಚೆತ್ತಾಗ ಅತೀವ ಭಯವೊಂದು ನನ್ನನ್ನು ಆವರಿಸಿಕೊಂಡು ಬಿಟ್ಟಿತು.

ಈಗ ಮನೆಗೆ ಹೇಗೆ ಹೋಗಲಿ? ರಾತ್ರಿ ಎಲ್ಲ ಎಲ್ಲಿದ್ದೆ ಎಂದು ಕೇಳಿದರೆ? ನನ್ನ ಮೆದುಳು ಸತ್ತಂತಿತ್ತು. ಏನು ಮಾಡಬೇಕೋ ತಿಳಿಯಲಿಲ್ಲ.

ಜೋಶಿ ಮತ್ತು ಸೂತರ್ ಮನೆಯ ಒಳಗಡೆ ಇದ್ದರು. ಮತ್ತೆ ಕುಡಿಯಲು ಕೂತೆವು. ಬೆಳಗಾಗಿತ್ತು ನಿಜ. ಏನು ಮಾಡಬೇಕೆಂದು ತಿಳಿಯದೆ ಕುಡಿಯುತ್ತಾ ಕೂತೆವು. ದಿನ ಕಳೆದಂತೆಲ್ಲಾ ಮನೆಗೆ ಹೋಗುವುದು ಅಸಾಧ್ಯ ಅಂತೆನಿಸಿತು.

ಜೋಶಿ ಮತ್ತು ನಾನು ಪೂನಾಗೆ ಹೋಗಿ ಹೋಟೆಲ್ ಒಂದರಲ್ಲಿ ಉಳಿದೆವು. ಒಮ್ಮೆ ಭಂಡಾರ್ಕರ್‌ಗೆ ಫೋನ್ ಮಾಡಿ ಎಲ್ಲಿದ್ದೇನೆ ಎಂದು ತಿಳಿಸಬೇಕು ಅಂತ ಸಹ ಅನ್ನಿಸಿತ್ತು. ಕೆಲವೊಮ್ಮೆ ಕೊನೆಯ ಗಳಿಗೆಯಲ್ಲಿ ತುರ್ತಾಗಿ ಪೂನಾಗೆ ಹೋಗಬೇಕಾದಾಗ ಹಾಗೆ ತಿಳಿಸಿದ್ದುಂಟು. ಆದರೀಗ ಧೈರ್ಯವಿರಲಿಲ್ಲ. ತಪ್ಪು ಮಾಡಿದೆ ಎನ್ನುವ ಪ್ರಜ್ಞೆ ಕೊರೆಯುತ್ತಿತ್ತು. ಪೂನಾದಲ್ಲಿದ್ದಾಗಲೂ ಬರೀ ಕುಡಿತವೇ. ನನ್ನ ಮಟ್ಟಿಗೆ ಮನೆಯ ಬಾಗಿಲು ಮುಚ್ಚಿದೆ ಅಂತನ್ನಿಸುತ್ತಿತ್ತು. ಸನ್ನಿ ಹಿಡಿದಂತವಳ ಸ್ಥಿತಿಯಲ್ಲಿದ್ದೆ. ದಿಗಿಲು, ಗಾಬರಿಯಲ್ಲಿ ಮನೆ ಬಿಟ್ಟು ಈಗ ಆ ಭಯದಿಂದಲೇ ಮನೆ ಸೇರದವಳಾಗಿದ್ದೆ. ಯಾವುದೋ ದುಷ್ಟ ಶಕ್ತಿಯ ಪ್ರಭಾವಕ್ಕೊಳಗಾದವಳಂತೆ ನಿಸ್ಸತ್ವಳಾಗಿದ್ದೆ.

ಪೂನಾದಲ್ಲಿ ಜೋಶಿಯ ಜೊತೆ ಅಲೆದೆ. ಕರೆದಲ್ಲೆಲ್ಲಾ ಹೋದೆ. ಹೊಸಹೊಸ ಸಮಸ್ಯೆಗಳಿಗೆ ಸಿಕ್ಕಿಹಾಕಿಕೊಂಡೆ. ಮನೆಯಿಂದ ದೂರ, ಇನ್ನೂ ದೂರ ಹೋಗಲಾರಂಭಿಸಿದ್ದೆ. ಒಂದು ದಿನ ಬೆಂಗಳೂರು ತಲುಪಿದೆವು.

ಕುಡಿಯುತ್ತಾ, ಅಲೆಯುತ್ತಾ ಸ್ವಲ್ಪ ದಿನ ಕಳೆದೆವು. ಅವನ ಹತ್ತಿರ ಎಷ್ಟು ದುಡ್ಡಿತ್ತೋ ಗೊತ್ತಿರಲಿಲ್ಲ. ಎಲ್ಲವೂ ಖರ್ಚಾದಾಗ ಕಷ್ಟದ ಅರಿವಾಗಹತ್ತಿತು. ಮುಂದೇನು?

ಜೋಶಿ ಒಂದು ದಾರಿ ಕಂಡುಹಿಡಿದ. ಅವನ ಸ್ನೇಹಿತನೊಬ್ಬ ಬಂದ. ಅವನಿಂದ ಸ್ವಲ್ಪ ಹಣ ಪಡೆದು ಮರಾಠವಾಡದ ಕಡೆ ಹೊರಟೆವು.

ಅವನ ಹುಟ್ಟೂರು ಮರಾಠವಾಡದ ಒಂದು ಸಣ್ಣ ಹಳ್ಳಿ. ಅವನ ತಾಯಿ, ಇಬ್ಬರು ಹೆಂಡತಿಯರು ಮತ್ತು ಮಕ್ಕಳು ಅಲ್ಲಿ ವಾಸಿಸುತ್ತಿದ್ದರು.

ಅವನು ಕರೆದಲ್ಲಿಗೆಲ್ಲಾ ಹೋದೆ. ಏನು, ಎತ್ತ ಎಂಬ ಯಾವ ಪ್ರಶ್ನೆಯನ್ನೂ ಕೇಳಲಿಲ್ಲ. ಅವನ ಹೆಂಡತಿ ಮಕ್ಕಳನ್ನು ನೋಡಿದಾಗಲೂ ಯಾವ ಆಶ್ಚರ್ಯವನ್ನೂ ತೋರಿಸಲಿಲ್ಲ. ಬಂದದ್ದೆಲ್ಲವನ್ನೂ ಎದುರಿಸಲು ಮೌನವಾಗಿ ಸಿದ್ಧಳಾಗಿದ್ದೆ.

ಮುಂದಿನ ಮೂರು ವರ್ಷಗಳ ಕಾಲ ಜೋಶಿಯೊಂದಿಗೆ ಆ ಊರಲ್ಲಿ ಬದುಕಿದೆ. ಅದು ನನ್ನ ಬದುಕಿನ ಉಳಿದ ಭಾಗಗಳಿಗಿಂತ ತೀರಾ ಬೇರೆಯೇ ಆದ ಭಾಗ: ಕನಸಲ್ಲಿ ಇದ್ದವಳಂತಿದ್ದೆ.

ಜೋಶಿಗೆ ಸಾಕಷ್ಟು ಗದ್ದೆಗಳಿದ್ದವು. ಹೊಳೆಯ ಆಚೆಯ ದಡದಲ್ಲಿ ಮತ್ತು ಹಳ್ಳಿಯಿಂದ ದೂರದಲ್ಲಿ ಅವನ ಮನೆಯಿದ್ದದ್ದು. ಅವನ ತಾಯಿ ಅಲ್ಲಿಯೇ ಇದ್ದಳು. ಒಬ್ಬ ಹೆಂಡತಿ ಸತ್ತು ಇನ್ನಿಬ್ಬರು ಬದುಕಿದ್ದರು. ಹಿರಿಯಳಿಗೆ ಮಂದ ಕಣ್ಣು, ಮನೆ ತುಂಬ ಮಕ್ಕಳು. ಅಷ್ಟು ಮಕ್ಕಳಿದ್ದಾರೆ ಎನ್ನುವುದು ಗೊತ್ತಾಗಿದ್ದು ಸ್ವಲ್ಪ ದಿನಗಳ ನಂತರವೇ.


ಇಬ್ಬರು ಹೆಂಡತಿಯರಿಗೆ ಸದಾ ಜಟಾಪಟಿ. ನಾನು ಬಂದದ್ದರಿಂದ ಸಹಜವಾಗಿ ಹೊಸ ರೀತಿಯ ಕಿರಿಕಿರಿ ... ಹಿರಿಯವಳು ಎಷ್ಟೋ ಪರವಾಗಿಲ್ಲ, ವಿವೇಚನೆ ಅನು... ಇತ್ತು. ಕಿರಿಯವಳು ಮಾತ್ರ ಮಹಾ ಸಂಶಯಸ್ಥೆ, ಜಗ...

ನಾನು ಬಂದದ್ದೇ ತಡ ಅವಳ ಬೈಗುಳಗಳ ಪ್ರವಾ... ಹರಿಯಲಾರಂಭಿಸಿತು. ಮನೆಗೆ ಒಕ್ಕರಿಸಿದ ಮಾರಿ ಎಂ... ನನ್ನನ್ನು ಕಾಣುತ್ತಿದ್ದಳು. ಎಲ್ಲಿರಲಿ, ಹೇಗೇ ಇರಲಿ, ಸಂ... ದಿಂದ ಇರುವ ಪ್ರತಿಜ್ಞೆಯನ್ನು ಮಾಡಿಕೊಂಡಿದ್ದೆನಲ್ಲ...

ಹೊಸದಾಗಿ ಬಂದ ಮದುವಣಗಿತ್ತಿಯ ಉ... ನನಗೆ. ಅಂದರೆ, ಬೆಳಿಗ್ಗೆ ಬೇಗ ಎದ್ದು ಗುಡಿಸಿ, ಹಟ್ಟಿ... ಸೆಗಣಿಯಿಂದ ಸಾರಿಸಿ, ರಾತ್ರಿ ಪಾತ್ರೆಗಳನ್ನು ತಿಕ್ಕಿ, ತೊ... ಅಡಿಗೆ ಮಾಡಿ, ಇತ್ಯಾದಿ ಕೆಲಸಗಳು ನನ್ನ ಪಾಲಿಗೆ...

ಕ್ರಮೇಣ ಆ ಪರಿಸ್ಥಿತಿಗೆ ಒಗ್ಗಿಕೊಳ್ಳುವುದಷ್ಟೇ ... ಮನೆಯವರ ಮನಸ್ಸನ್ನೂ ಗೆಲ್ಲಲಾರಂಭಿಸಿದೆ. ಚಲ... ನಟಿ ಒಬ್ಬಳು ಮನೆ ಕೆಲಸವನ್ನು ಹೇಗೆ ಮಾಡ... ಎಂಬ ಆಶ್ಚರ್ಯ ಅವರಿಗೆ. ಮನಃಪೂರ್ವಕವಾಗಿ... ಪಾಲಿನ ಕೆಲಸಗಳೆಲ್ಲವನ್ನೂ ಮಾಡಿದೆ, ಇಬ್ಬರು ಹೆಂಡ... ಮಕ್ಕಳನ್ನೂ ನೋಡಿಕೊಂಡೆ. ಕಿರಿಯವಳ ಸಣ್ಣ ... ಮಗುವೊಂದು ನನ್ನನ್ನು ತುಂಬ ಹಚ್ಚಿಕೊಂಡಿತ್ತು. ... ಬಿಟ್ಟು ಇನ್ಯಾರ ಹತ್ತಿರವೂ ಹೋಗುತ್ತಿರಲಿಲ್ಲ. ಮನೆ... ಗುಡಿಸುತ್ತಾ, ಸಾರಿಸುತ್ತಾ, ಬಟ್ಟೆ ಹೊಲೆಯುತ್ತಾ, ... ದಿನ ಬೆಳಗ್ಗೆ ರಂಗೋಲಿ ಎಳೆಯುತ್ತಾ... ಹೀಗೆ ಕೆಲ... ವನ್ನೂ ತನ್ಮಯತೆಯಿಂದ, ಸಂತೋಷದಿಂದ ಮಾಡ...

ಇಬ್ಬರು ಹೆಂಡತಿಯರೂ ನನ್ನ ಬಗ್ಗೆ ಅ... ತೋರಿಸಲಾರಂಭಿಸಿದರು. ಅಲ್ಲಿಗೆ ಹೋದಾಗ ನನ್ನ ... ಇದ್ದದ್ದು ಒಂದೇ ಜೊತೆ ಬಟ್ಟೆ. ಜೋಶಿ ಒ... ಒಂಭತ್ತು ಗಜದ ಸೀರೆ, ರವಿಕೆಯನ್ನು ತಂದು ... ಒಂದು ವರ್ಷ ಬಾಳಿಕೆ ಬಂದವು. ಹೀಗೆಯೇ ... ನೂಕುತ್ತಿದ್ದೆ. ಆಳದಲ್ಲಿ ಮನಸ್ಸು ರೋದಿಸುತ್ತಿತ್ತು, ... ಉತ್ಸಾಹದಿಂದ ಕೆಲಸ ಮಾಡುತ್ತಿರುವಳಂತೆ ... ಕೊಳ್ಳುತ್ತಿದ್ದೆ. ಒಳಗೆ ಯಾಕೆ ಹೀಗೆ ಮಾಡಿಬಿಟ್ಟೆ...



...ೋ ಭಯಂಕರ ಅಪರಾಧ ...ತ್ತೆ ಅಂತನ್ನಿಸಿ ನೋಯುತ್ತಿದ್ದೆ. ...ಪರಿಹಾರವೂ ತೋರಲಿಲ್ಲ. ...ಳಿಯ ಆಚೆ ದಡದಲ್ಲಿದ್ದ ...ಯು ಮನೆಗೂ ಹೊರಗಿನ ...ಮ್ಮ ಸಂಪರ್ಕವೇ ಇರಲಿಲ್ಲ. ...ಮ್ಮ ಕೆಲಸದವರು ಅವನ ... ಮನೆಗೆ ಬರುತ್ತಿದ್ದರು. ನಾನು ... ಹೊರಗಿನವರೆಂದರೆ ಅವರೇ. ... ವರ್ಷಗಳನ್ನು ನೂಕುವ ... ಹತಾಶಳಾಗಿದ್ದೆ. ಮನೆಗೆ ...ದ ಮನಸ್ಸೆಳೆಯುತ್ತಿತ್ತು, ಆದರೆ

...ಶಿ ನನ್ನ ಮೇಲೆ ಕಟ್ಟುನಿಟ್ಟಿನ ನಿಗಾ ವಹಿಸಿದ್ದ ಹಟ್ಟಿಯಾಚೆ ...ಹೋಗುವಂತಿರಲಿಲ್ಲ. ನನ್ನ ಗಂಡನಿಗೆ ಪತ್ರವೊಂದನ್ನು ...ಮಾಹಿತಿ ಕೊಡುವ ಯೋಚನೆ ಆಗಾಗ್ಗೆ ಸುಳಿಯುತ್ತಿತ್ತು. ...ಣ ಕಳುಹಿಸುವ ಬಗೆ?

...ಮ ದಿನ ಸಂಜೆ ಧೈರ್ಯ ಮಾಡಿಯೇ ಬಿಟ್ಟೆ. ನನ್ನನ್ನು ... ಗಮನಿಸುತ್ತಿಲ್ಲವೆಂದು ಖಾತರಿಪಡಿಸಿಕೊಂಡು ಹಟ್ಟಿಗೆ ...ಅತ್ತಿತ್ತ ನೋಡುತ್ತಾ ಗೇಟನ್ನು ತಲುಪಿದೆ. ಆ ಗಳಿಗೆಯಲ್ಲೇ ...ನನ್ನನ್ನು ನೋಡಿಬಿಟ್ಟ. ನನ್ನ ಹಿಂದೆಯೇ ಓಡಿಬಂದ. ...ದರದರ ಒಳಗೆ ಎಳೆದು ಉರಿಯುತ್ತಿದ್ದ ಕೊಳ್ಳಿಯಿಂದ ...ರಂಭಿಸಿದ. ಹೊಡೆದದ್ದೆಂದರೆ ಅಷ್ಟಿಷ್ಟಲ್ಲ. ಅವನ ...ಮುರು ಬಂದು ಬಿಡಿಸುವ ತನಕವೂ ಬಡಿಯುತ್ತಲೇ

...ಮೇಲಿನ ಬಿಗಿ ಇನ್ನಷ್ಟು ಜಾಸ್ತಿಯಾಯ್ತು. ಎಲ್ಲಿಯತನಕ ... ಬದುಕಬೇಕೋ ಗೊತ್ತಿರಲಿಲ್ಲ. ಮನೆಯ ಕಡೆಗಿನ ...ಇನ್ನಷ್ಟು ಜಾಸ್ತಿಯಾಯ್ತು. ತಪ್ಪಿಸಿಕೊಳ್ಳುವುದರ ಬಗ್ಗೆ ...ಗಿ ಚಿಂತಿಸಿದೆ.

...ೂದೂ ಮಾರುವ ಹೆಂಗಸರು ಜೋಶಿಯ ಮನೆಗೆ ...ರು. ಅವರ ಪರಿಚಯ ಬೆಳೆಸಿಕೊಂಡೆ. ಗುಟ್ಟಾಗಿ ಒಮ್ಮೆ ...ಉಳಿಸಿದ ಚೂರುಪಾರು ದುಡ್ಡನ್ನು ಕೊಟ್ಟು ಪೋಸ್ಟ್ ...ದ ಕವರ್ ಒಂದನ್ನು ತರಲು ಕೇಳಿಕೊಂಡೆ. 'ದಯವಿಟ್ಟು ...ಷ್ಟರ ಈ ಸಹಾಯ ಮಾಡಿ. ಯಾರಿಗೂ ಹೇಳಬೇಡಿ.' ...ತಪ್ಪಿಸಿ ಪತ್ರವೊಂದನ್ನು ಬರೆದು ಪೋಸ್ಟ್ ಮಾಡಲು ...ಗೆ ಕೊಟ್ಟೆ. ಮನೆಯಿಂದ ಅಷ್ಟು ದೂರ ಹೋಗಿ ...ಾಗುವ ತನಕ ನೋಡುತ್ತಲೇ ಇದ್ದೆ. ಯಾರಿಗಾದರೂ ...ಡುತ್ತಾರೇನೋ ಎಂಬ ಭಯ!

...ತ್ರ ಭಂಡಾರ್ಕರ್‌ನಿಗೆ. ಎಲ್ಲಿದ್ದೇನೆ, ಹೇಗಿದ್ದೇನೆ ಎಲ್ಲವನ್ನೂ ... ಆ ಜಾಗವನ್ನು ಬಂದು ಸೇರುವ ಬಗ್ಗೆ ಮಾಹಿತಿ ಸಹ ... ನನ್ನದೇ ಕೆಲವು ಬಟ್ಟೆಗಳನ್ನು ಸಹ ಜೊತೆಯಲ್ಲಿ ...ಹೇಳಿದ್ದೆ.

...ವು ದಿನಗಳ ನಂತರ ಭಂಡಾರ್ಕರ್ ಬಂದ. ದೂರದಲ್ಲಿ ...ಇದ್ದು, ಜೊತೆಯಲ್ಲಿದ್ದ ಪೊಲೀಸರನ್ನು ಮಾತ್ರ ಕಳಿಸಿದ್ದ. ...ಮುಖ ನೋಡಿದ್ದೇ ಎಲ್ಲರೂ ಗೊಳೋ ಎಂದು ...ಭಿಸಿದರು. ಜೋಶಿಯನ್ನು ಬಂಧಿಸಿ ಎಳೆದುಕೊಂಡು ...ತ್ತಾರೆ ಎಂಬ ಭಯ. 'ಹೆದರಬೇಡಿ, ಜೋಶಿಯ ಬಗ್ಗೆ ...ಹೇಳುವುದಿಲ್ಲ' ಎಂದು ಮನೆಯ ಹೆಂಗಸರಿಗೆ ...ಯುತ್ತೆ, ಮೊದಲು ಅಲ್ಲಿಂದ ತೊಲಗಬೇಕಿತ್ತು.

...ಮೂ ಅಲ್ಲಿದ್ದಷ್ಟೂ ದಿನ ಮಕ್ಕಳನ್ನು, ಹೆಂಗಸರನ್ನು ...ಗಿ ಹಚ್ಚಿಕೊಂಡಿದ್ದೆ. ಕೊನೆಯ ಹೆಣ್ಣು ಮಗುವಂತೂ ...ಬಿಟ್ಟು ಅಲುಗಾಡುತ್ತಿರಲಿಲ್ಲ. ಅವಳೂ ...ಭಿಸಿದಳು. ಬೇಗ ಬರುವೆನೆಂದು ಭರವಸೆಯನ್ನಿತ್ತೆ. ...ನನ್ನು ಒತ್ತಟ್ಟಿಗೆ ಕರೆದು 'ನಾನು ಹೋಗುತ್ತಿದ್ದೇನೆ, ...ದರೂ ನಿನ್ನ ಗಂಡನನ್ನು ... ನೋಡಿಕೋ' ...ಹೇಳಿದೆ. ಹೊರಗೆ ...ತ್ತಿನ ...ಂದನ್ನು ತಂದಿದ್ದರು. ... ಅದರಲ್ಲಿ ಕೂತೆ. ...ರ್ ನನ್ನ ...ನ್ನೂ ನೋಡಲಿಲ್ಲ. ...ಮಾಡುವಾಗ 'ನಿನ್ನ ...ನ್ನು ತಂದಿದ್ದೇನೆ' ... ಹೇಳಿದ. ... ಹೊತ್ತಿನ ನಂತರ ...ಟ್ಟೆಗಳ ಕಡೆಗೆ ದೃಷ್ಟಿ ... ನನ್ನ ಹಳೆಯ ಬೆಲೆ ... ಬಟ್ಟೆಗಳು ಇನ್ನೂ ... ಆದರೂ ಆ ...ಲ್ಲಿ ಏನೆಲ್ಲಾ ...ಯಿಸಿತ್ತು! ಮೊದಲಿನ ...ಗಿದ್ದೆ. ಬಟ್ಟೆಗಳು ...ಒಪ್ಪುತ್ತಿದ್ದವು. ...ನ್ನು ಹಾಕಿಕೊಂಡಾಗ ...ನಿಸಿತು. ... ಕಾಯಿಲೆ ಬಿದ್ದು, ...ತ ಇದ್ದೆ.

ಸ್ವಲ್ಪ ದೂರವಿದ್ದ ದೊಡ್ಡ ಹಳ್ಳಿಯೊಂದನ್ನು ತಲುಪಿದೆವು. ಒಬ್ಬ ಮ್ಯಾಜಿಸ್ಟ್ರೇಟ್ ಎದುರು ನಾನು ಹಾಜರಾಗಬೇಕಿತ್ತು. ಮ್ಯಾಜಿಸ್ಟ್ರೇಟನ ಮನೆಯ ಮುಂದಿನ ಕೋಣೆಯೇ ಅವನ ಆಫೀಸು. ವಯಸ್ಸಾಗಿದ್ದ ಮ್ಯಾಜಿಸ್ಟ್ರೇಟ್ ಸಭ್ಯನಂತೆ, ಕರುಣೆಯುಳ್ಳವನಂತೆ ಕಂಡ.

'ಯಾರ ವಿರುದ್ಧವೂ ನಾನು ದೂರು ದಾಖಲಿಸುತ್ತಿಲ್ಲ, ನನ್ನ ಹೆಂಡತಿಯನ್ನು ಮನೆಗೆ ಕರೆದುಕೊಂಡು ಹೋಗಬೇಕು ಅಷ್ಟೆ' ಭಂಡಾರ್ಕರ್ ಅವನಿಗೆ ಹೇಳಿದ. ಯಾರದೋ ಸಹಿ ಹಾಕಿಸಿಕೊಂಡು ಬರುವಂತೆ ಹೇಳಿ ಮ್ಯಾಜಿಸ್ಟ್ರೇಟ್ ಅವನನ್ನು ಸಾಗಹಾಕಿದ.

ಅವನು ಹೋದದ್ದೇ ತಡ, ಮುದುಕ ಮ್ಯಾಜಿಸ್ಟ್ರೇಟ್ ದಾಖಲೆಯ ಪ್ರತಿಯನ್ನು ಕೈಯಲ್ಲಿ ಹಿಡಿದು 'ಒಳಗೆ ಬಾ, ಇಲ್ಲದಿದ್ದರೆ ಈ ಪ್ರತಿಯನ್ನು ಹರಿದುಹಾಕುತ್ತೇನೆ' ಎಂದು ಬೆದರಿಸಿದ.

ನಾನು ಭಯದಿಂದ ತತ್ತರಿಸಿದೆ. ಒಳಗೆ ಎಳೆದು ಬಾಗಿಲು ಮುಚ್ಚಿ ಚಿಲಕ ಹಾಕಿದ. ಅವನ ಹೆಂಡತಿ ಮಕ್ಕಳು ಪಕ್ಕದ ರೂಮಲ್ಲಿಯೇ ಇದ್ದರು. ಎಂಥಾ ಹೀನ ಮೃಗ! ಬಾಯಿ ತೆಗೆದು ಕಿರುಚಲೂ ಆಸ್ಪದವಿರಲಿಲ್ಲ. ನನ್ನ ಬಾಯನ್ನು ಕಟ್ಟಿ ಹೊಡೆದ.

ಅತ್ಯಾಚಾರವೆಂದರೆ ಏನು ಎಂದು ಆ ದಿನ ನನಗೆ ಅರ್ಥವಾಯಿತು.

ಸ್ವಲ್ಪ ಹೊತ್ತಿನ ನಂತರ ಭಂಡಾರ್ಕರ್ ಹಿಂತಿರುಗುವ ಹೊತ್ತಿಗೆ, ಆ ಮುದುಕನೆದುರು ಒಂದು ಬೆಂಚಿನ ಮೇಲೆ ತಲೆಯನ್ನು ಕೈಗಾನಿಸಿ ನನ್ನ ದುರ್ವಿಧಿಯನ್ನು ಹಳಿಯುತ್ತಾ ಕೂತಿದ್ದೆ. ಮನಸ್ಥೈರ್ಯವೆಂಬುದು ಮೂರಾಬಟ್ಟೆಯಾಗಿತ್ತು. ನೋವಿನಿಂದ ವಿಲಗುಡುತ್ತಿದ್ದೆ. ಏನು ನಡೆಯಿತೆಂದು ಬಾಯಿಬಿಡುವುದು ಅಸಾಧ್ಯವಾಗಿತ್ತು.

ಗತವೆಂಬುದನ್ನು ಹಿಂದೆಯೇ ಬಿಟ್ಟು, ಬದುಕನ್ನು ಮತ್ತೆ ಆರಂಭಿಸುವ ಆಸೆಭರವಸೆಗಳನ್ನು ಹೊತ್ತು ಗಾಡಿ ಹತ್ತಿದ್ದೆ. ಮುದುಕ ಮ್ಯಾಜಿಸ್ಟ್ರೇಟ್ ಎಲ್ಲವನ್ನೂ ಸುಟ್ಟು ಬೂದಿ ಮಾಡಿದ್ದ. ಇಡೀ ಪ್ರಪಂಚದ ಬಗ್ಗೆ ರೋಷ ಮತ್ತೆ ತಲೆಯೆತ್ತಿತ್ತು.

ಬಾಂಬೆಗೆ ಹಿಂತಿರುಗಿದೆವು. ದೂರ ಹೋಗಿ ಮೂರು ವರ್ಷಗಳಾಗಿತ್ತು. ರೇಖಾ ಮೆಟ್ಟಿಲ ಮೇಲೆ ನಿಂತಿದ್ದಳು. ಎಷ್ಟು ಬೆಳೆದಿದ್ದಳು! ಭಾವನೆಗಳ ಆವೇಗದಲ್ಲಿ ಮೂಕಳಾಗಿದ್ದೆ. ಓಡಿಹೋಗಿ ಅವಳನ್ನು ತಬ್ಬಿಕೊಳ್ಳಬೇಕೆನ್ನಿಸಿತ್ತು. ಅವಳ ಮುಖದ ಮೇಲೆ ಏನೋ ತುಯ್ತದ ಭಾವ. ನನ್ನನ್ನು ಗುರುತಿಸಲಿಲ್ಲವೋ ಏನೋ. ಗುರುತಿಸಲು ಸ್ವಲ್ಪ ಸಮಯ ಹಿಡಿಯಿತು.

ಓಡಿಬಂದವಳೇ ನನ್ನನ್ನು ಅವುಚಿಕೊಂಡಳು. 'ಅಮ್ಮಾ! ಎಲ್ಲಿದ್ದೆ ಇಷ್ಟು ದಿನ!' ಕಣ್ಣೀರಿಡುತ್ತಾ ಅವಳೊಂದಿಗೆ ಮನೆಯೊಳಗೆ ಕಾಲಿಟ್ಟೆ.

ನನ್ನ ಬದುಕಿನ ಒಂದು ವಿಚಿತ್ರ ಹಂತ ಹೀಗೆ ಕೊನೆಗೊಂಡಿತ್ತು. ಏನು ಮಾಡಬೇಕೆಂದು ತಿಳಿಯದೆ ತತ್ತರಿಸಿದ್ದೆ. ಅರ್ಥ ಮಾಡಿಕೊಳ್ಳುವವರಿಲ್ಲದೆ, ಆಸರೆ ನೀಡುವವರಿಲ್ಲದೆ ಮನೆಯನ್ನು ತೊರೆದಿದ್ದೆ.

ಯಶಸ್ಸಿನ ಉತ್ತುಂಗದಲ್ಲಿ, ಜನಪ್ರಿಯತೆಯ ತುತ್ತತುದಿಯಲ್ಲಿದ್ದಾಗ ಮನೆಯನ್ನು, ಚಿತ್ರ ಪ್ರಪಂಚವನ್ನು ತೊರೆದಿದ್ದೆ. ಯಾಕೆ ತೊರೆದೆ? ಮನೆಯಿಂದ ಯಾಕೆ, ಹೇಗೆ ದೂರ ಇದ್ದೆ? ಯಾಕೆ ಹೀಗೆಲ್ಲಾ ಆಯಿತು? ನನ್ನಲ್ಲಿ ಯಾವುದಕ್ಕೂ ಉತ್ತರವಿರಲಿಲ್ಲ. ವಿಧಿಯನ್ನು ಹಳಿದು ಏನು ಪ್ರಯೋಜನ?

ಹಿಂತಿರುಗಿ ಬರುವ ಹೊತ್ತಿಗೆ ನನ್ನ ಪ್ರಪಂಚವೇ ಬದಲಾಗಿತ್ತು. ನಾನು ಸಹಿ ಮಾಡಿದ್ದ ಒಪ್ಪಂದಗಳು ರದ್ದಾಗಿದ್ದವು. ಹೊಸ ಹೊಸ ತಾರೆಯರು ಉದಯಿಸಿದ್ದರು. ನನ್ನ ಪಾತ್ರಗಳು ಅವರ ಪಾಲಾಗಿದ್ದವು.

ಮೂರು ವರ್ಷಗಳ ಬದುಕು ನನ್ನನ್ನು ಸಂಪೂರ್ಣವಾಗಿ ಬದಲಾಯಿಸಿತ್ತು. ಒಂದು ಕಾಲದಲ್ಲಿ ಮಹಾರಾಷ್ಟ್ರದ ತುಂಬೆಲ್ಲ ನನ್ನ ಪ್ರತಿಭೆ ಮನೆಮಾತಾಗಿತ್ತು. ಚಿತ್ರರಂಗದ ಸಾಮ್ರಾಜ್ಞೆಯಾಗಿ ಮೆರೆಯುತ್ತಿದ್ದೆ. ನನ್ನ ಹೆಸರು ಎಲ್ಲರ ನಾಲಿಗೆಯ ಮೇಲೆ ನಲಿದಾಡುತ್ತಿದೆ ಎಂದರೆ ನಾನೇ ನಂಬುತ್ತಿರಲಿಲ್ಲ. ಈ ಮೂರುವರ್ಷಗಳ ಬದುಕು ಒಂದು ತಾತ್ಕಾಲಿಕ ಹಂತವೆನ್ನುವುದು ಒಂದು ಅರ್ಥದಲ್ಲಿ ನಿಜವಾದರೂ ಆದರಿಂದಾಗಿಯೇ ಕಾಲದ ಹಲಗೆಯ ಮೇಲಿಂದ ನನ್ನ ಹೆಸರು ಸಂಪೂರ್ಣವಾಗಿ ಅಳಿಸಲ್ಪಟ್ಟಿದೆ ಎನ್ನುವುದೂ ಸಹ ಅಷ್ಟೇ ನಿಜ.



ಹಂಸಾ ವಾಡ್ಕರ್ ಬದುಕನ್ನು ಆಧರಿಸಿ, ಶ್ಯಾಮ್ ಬೆನಗಲ್ ನಿರ್ದೇಶಿಸಿದ 'ಭೂಮಿಕಾ' ಚಿತ್ರದಲ್ಲಿ ಅಮೋಲ್ ಪಾಲೇಕರ್ ಮತ್ತು ಸ್ಮಿತಾ ಪಾಟೀಲ್

ಪುಸ್ತಕ ಪರಿಚಯ




• ಚಂದ್ರಶೇಖರ್ ಐಜೂರ್

ಈಗ ಅಳುವವರೂ ಇಲ್ಲ...!

'...ಅಲ್ಲಿಂದಾಚೆಗೆ ದಲಿತ ಸಂಘಟನೆ 'ಒತ್ತಿ ಬಸಾಡಿದ ಗಾಜಿನಂತೆ' ಚಪ್ಪಾಸ ಚೂರಾಗುತ್ತ ಛಿದ್ರಛಿದ್ರವಾಯಿತು. ಲೆಟರ್‌ಹೆಡ್ ಸಂಸ್ಥೆಗಳು ಅಣಬೆಯಂತೆ ತಲೆಯೆತ್ತಿದವು. ರೈತಸಂಘದ ಒಡಲಲ್ಲೂ ಇಂಥದೇ ಒಡಕಿನ ಪುರಾಣವಿರಬಹುದು...' 80ರ ದಶಕದ ಈ ಮಣ್ಣಿನ ದಲಿತ ಮತ್ತು ರೈತ ಚಳವಳಿಯ ಸಂಘರ್ಷದಿಂದ ಪತನದವರೆಗಿನ ಅಪರೂಪದ ವಿದ್ಯಮಾನಗಳನ್ನು ಭಾಷೆಯ ವಿದ್ವತ್ತಿನ ದೌಲತ್ತನ್ನು ಎಲ್ಲೂ ಪ್ರದರ್ಶಿಸದೆ ಕಂಡದ್ದನ್ನು ಕಂಡಹಾಗೆ ತಣ್ಣಗೆ ಹೇಳಿಕೊಂಡು ಹೋಗಿರುವ ವಿಶಿಷ್ಟ ಕೃತಿಯಿದು. ಲಂಕೇಶ್ ಮತ್ತು ಎಮ್‌ಡಿಎನ್ ನಡುವಿನ ಈರ್ಷ್ಯೆಯ ಎದುರು ಮುಖಾಮುಖಿಯಾಗಿದ್ದ ಪ್ರಗತಿರಂಗ ಮತ್ತು ರೈತಸಂಘದ ಪ್ರಣಾಳಿಕೆಗಳು, ಒಡಕಿನ ಸಣ್ಣ ರಂಧ್ರಗಳಿಗೆ ಸಿಕ್ಕಿ ಛಿದ್ರಗೊಂಡ ದಸಂಸದ ಬೇರುಗಳು, ಸಂಘರ್ಷದ ಉರಿಬೆಂಕಿಗೆ ತಮ್ಮನ್ನೇ ಒಡ್ಡಿಕೊಂಡ ಕಡಿದಾಳು ಶಾಮಣ್ಣನವರನ್ನು ರೈತಸಂಘದಿಂದಲೇ ಕೈಬಿಟ್ಟ ಪ್ರಸಂಗ, ದಸಂಸದ ಒಡಕಿನ ಮೂಲ ಶೋಧಿಸಲು ಹೊರಟು ಹತಾಶರಾಗಿ ಕಡೆಗೆ ಭಗ್ನಗೊಂಡದ್ದನ್ನು ಒಟ್ಟುಗೂಡಿಸುವ ಕೆಲಸಕ್ಕಿಳಿದು ಸೋತು ಸುಸ್ತಾಗಿ ಅದರಿಂದಲೇ ದೂರಾಗುವ ನಿರ್ಧಾರಕ್ಕಿಳಿದ ದೇವನೂರರ ಸಂಕಟದ ಮುಖ... ಕೊನೆಗೆ ನಮ್ಮೆದುರು ನಿಲ್ಲುವುದು 'ಕಣ್ಣೆದುರೇ ಕಳೆದುಹೋದ ಚಳವಳಿಗಳನ್ನು' ನೆನೆದು ಅಳುವವರೂ ಉಳಿದಿಲ್ಲ ಎಂಬ ಗಾಢ ವಿಷಾದ ಮಾತ್ರ.

40 ಪುಟಗಳ ಈ ಪುಟ್ಟಗಾತ್ರದ ಪುಸ್ತಕ ಇಲ್ಲಿ ಈ ನಾಡಲ್ಲಿ ಘಟಿಸಿದ ಎರಡು ಮಹತ್ವದ ಚಳವಳಿಗಳ ಆತ್ಮಶೋಧನೆಗಳಿಗಿಳಿವ ಮನಸ್ಸುಗಳಿಗೆ ಕ್ಲಾಸಿಕ್ ಸಿನಿಮಾವೊಂದನ್ನು ನೋಡಿದ ನಿರ್ವಿಣ್ಣ ಅನುಭವವನ್ನು ದಟ್ಟವಾಗಿ ಕಟ್ಟಿಕೊಡುತ್ತದೆ.



ಲೇಖಕರು
ಎನ್.ಎಸ್.ಶಂಕರ್
ಪ್ರಕಾಶಕರು
ಗರಿಕೆ ಪ್ರಕಾಶನ
27, ಮೊದಲ ಮಹಡಿ, ಪಾಪಯ್ಯ ಗಾರ್ಡನ್
ಬಸವೇಶ್ವರನಗರ, ಬೆಂಗಳೂರು -560 079
ಪುಟ: 40, ಬೆಲೆ: 15, ಪ್ರಕಟಣೆ: 2010

ಹರಿವ ನೀರೊಳಗಿನ ಉರಿ

ಜೀವ ಮಿಡಿತದ ಸದ್ದು, ಕೈಫಿ ಆಜ್ಮಿ ಕವಿತೆಗಳ ಅನುವಾದ 'ಬೆತ್ತಲೆ ರಸ್ತೆಯ ಕನಸಿನ ದೀಪ'ದ ನಂತರ ಬಂದ ಕೃತಿಯಿದು. ಏಳು ವರ್ಷಗಳ ಹಿಂದೆ ಅಕಾಲಿಕ ಸಾವಿಗೆ ತುತ್ತಾದ ವಿಭಾರ ಎಲ್ಲ ಕೃತಿಗಳು ಪ್ರಕಟಗೊಂಡದ್ದು ಅವರ ಸಾವಿನ ನಂತರವೇ. ಈ ಸಂಕಲನದಲ್ಲಿ ಅಲಿ ಸರ್ದಾರ್ ಜಾಫ್ರಿ, ಹರಿವಂಶರಾಯ್ ಬಚ್ಚನ್, ಗುಲ್ಜಾರ್, ಅನಿತಾ ನಾಯರ್, ರಾಮಸಿಂಗ್ ಚಹಾಲ್‌ರ ಕವಿತೆಗಳನ್ನು ವಿಭಾ ಕನ್ನಡಕ್ಕೆ ತಂದಿದ್ದಾರೆ. ಹರಿವಂಶರಾಯ್ ಬಚ್ಚನ್‌ರ 'ಮಧುಶಾಲೆ'ಯ ಶಾಯರಿಗಳು ಇಲ್ಲಿ ಕಿಕ್ಕಿರಿದಿವೆ.

ಮಂದಿರ-ಮಸೀದೆಗಳ ತಲುಪುವವರೆಗೆ
ಇಬ್ಬರೂ ಒಂದಾಗಿಯೆ ಇರುತ್ತಾರೆ
ದೂರವಾಗಿಸುತ್ತವೆ
ಮಸೀದೆ-ಮಂದಿರ
ಒಂದಾಗಿಸುತ್ತದೆ ಮಧುಶಾಲೆ

ವಿಭಾರ ಉರ್ದು ಕಾವ್ಯದ ಮೇಲಿನ ಕಡು ವ್ಯಾಮೋಹವನ್ನು ತಿಳಿಸಲು ಈ ಕೃತಿ ನೆರವಿಗೆ ಬರುತ್ತದೆ. ಇಸ್ರೇಲಿ ಕವಿ ಫೌಜಿಯಲ್ ಅಸ್ಮರ್‌ರ ಪದ್ಯದ ಅನುವಾದ ವಿಭಾ ಕಾಲಕ್ಕೆ ಮಾಡಿದ ಪ್ರಶ್ನೆಯಂತೆ ಅವರ ಹಠಾತ್ ನಿರ್ಗಮನವನ್ನೇ ಹೆಚ್ಚು ಧ್ವನಿಸುತ್ತಿದೆ.

ಇಂಥ ನನ್ನ ತಾಯ್ನೆಲವನ್ನೇ
ತ್ಯಜಿಸೆಂದು ಹೇಳುವ ಹಕ್ಕು
ನಿನಗಿಲ್ಲ ನನ್ನ ಗೆಳೆಯಾ!




ಲೇಖಕರು
ವಿಭಾ
ಪ್ರಕಾಶಕರು
ಲಡಾಯಿ ಪ್ರಕಾಶನ
21, ಪ್ರಸಾದ್ ಹಾಸ್ಟೆಲ್
ಗದಗ -582 101
ಪುಟ: 120, ಬೆಲೆ: 60, ಪ್ರಕಟಣೆ: 2010

ಸೂಫಿ ಮಹಿಳೆಯರು

ಗುಡ್ಡ ಪರ್ವತಗಳಲಿ, ಕಾಡು ಮೇಡುಗಳಲಿ ಜಾಲಾಡಿದೆ ಅವನಿಗಾಗಿ
ಪ್ರಾರ್ಥಿಸಿ ಹೇಳಿದೆ, 'ಯಾರವಳು ನನ ಸವತಿ ನಿನ್ನ ಬೆಂಬಿಡದಾಕೆ?'
ಯಾಕಾಗಿ ಕೊರೆದೆ ನನ್ನ ಹೃದಯವ ಕುಡುಗೋಲಿನಿಂದ?
- ಹಬಾ ಖಾತೂನ್

ಸೂಫಿ ಪಂಥಕ್ಕೆ ಸೇರಿದ ಗಂಡು ಜಗತ್ತಿನ ಅನೇಕ ಸಂತರ ಸಾಹಿತ್ಯ ಕಂಡಿದ್ದ ನಮಗೆಲ್ಲ ಸೂಫಿ ಮಹಿಳೆಯರ ಬೆರಗಿನ ಲೋಕವನ್ನು ಪ್ರವೇಶಿಸಲು ಈ ಕೃತಿ ಅನುವು ಮಾಡಿಕೊಡುತ್ತದೆ. ಕನ್ನಡಕ್ಕೆ ಪ್ರಾತಿನಿಧಿಕವಾಗಿ ಬಂದ ಹೆಚ್ಚಿನ ಸಂಖ್ಯೆಯ ಮಹಿಳಾ ಸೂಫಿಗಳ ಪ್ರತಿಭೆಯನ್ನು ಇಲ್ಲಿನ ಪ್ರತಿ ಪುಟದಲ್ಲೂ ಕಾಣಬಹುದಾಗಿದೆ. ರಾಬಿಯಾ ಅಲ್ ಅದವಿಯ, ಹಬಾ ಖಾತೂನ್, ಬೀಬಿ ಸಫೀಸಾ, ಮೌಲಾನಾ ರೂಮಿಯ ಮಹಿಳಾ ಸಂತರು, ದೆಹಲಿ ಮತ್ತು ಕರ್ನಾಟಕದ ಮಹಿಳಾ ಸೂಫಿಗಳು, ನಿಶಾಪುರದ ಸೂಫಿಗಳ ಜೊತೆಗೆ ಹಜ್ರಾ ಜ್ಞಾಕಿಯ್ಯರ ಆಧ್ಯಾತ್ಮದ ಹಸಿವಿನ ಬದುಕಿನ ವಿವರ ಹಾಗೂ ಅವರ ಕಾವ್ಯ ಕಥನಗಳ ಹೊಸ ಮಾದರಿಗಳನ್ನು ಇಲ್ಲಿ ಓದುಗರು ನೋಡಬಹುದು. ತೀರಾ ವಾಚ್ಯಗೊಂಡಂತಿರುವ ಕಾವ್ಯದ ಸಾಲುಗಳನ್ನು ಲೇಖಕರು ತಿದ್ದಿ ತೀಡಿ ಇನ್ನೂ ಚೂಪುಗೊಳಿಸಬಹುದಿತ್ತು.




ಲೇಖಕರು
ಫಕೀರ್ ಮುಹಮ್ಮದ್ ಕಟ್ಪಾಡಿ
ಪ್ರಕಾಶಕರು
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ
ಬೆಂಗಳೂರು -560 001
ಪುಟ: 96, ಬೆಲೆ: 60, ಪ್ರಕಟಣೆ: 2010

ಸ್ಮೃತಿ ಚಿಹ್ನೆಗಳು

ಒಂದು ಅನುಭವದ ಕತೆ

ಮಲಯಾಳಂ ಮೂಲ:
ಬಾಲಚಂದ್ರನ್ ಚುಳ್ಳಿಕ್ಕಾಡ್
ಕನ್ನಡಕ್ಕೆ: ಕೆ.ವಿ. ಚಂದ್ರಜ್ಯೋತಿ



"ಮಹಾತ್ಮಾ ಗಾಂಧಿ ಆತ್ಮಕಥೆ ಇದೆಯಾ?" ಅಟ್ಲಾಂಟಿಕ್ ಸಮುದ್ರ ತೀರದಲ್ಲಿನ ಗೊಥೆನ್‌ಬರ್ಗ್ ನಗರದಲ್ಲಿ ನಡೆಯುತ್ತಿದ್ದ ವರ್ಲ್ಡ್ ಬುಕ್ ಎಗ್ಜಿಬಿಷನ್‌ನಲ್ಲಿ ಪುಸ್ತಕಗಳನ್ನು ನೋಡುತ್ತಾ ನಡೆಯುತ್ತಿದ್ದ ನಾನು ಆ ಮಾತುಗಳನ್ನು ಕೇಳಿ ನಿಂತುಬಿಟ್ಟೆನು. ಗೋಧಿಬಣ್ಣದ ಓವರ್ ಕೋಟು, ಉಲ್ಲನ್ ಟೋಪಿ, ಕೈಗಳಿಗೆ ಗ್ಲೌಸ್‌ಗಳನ್ನು ಧರಿಸುವ ಓರ್ವ ನೀಗ್ರೋ ವೃದ್ಧ ಮಹಿಳೆ ಪುಸ್ತಕಗಳ ಷಾಪ್‌ನಲ್ಲಿನ ಬಂಗಾರಬಣ್ಣದ ಕೂದಲಿನ ಹುಡುಗಿಯನ್ನು ಕೇಳುತ್ತಿದ್ದಳು.

"ಇಲ್ಲ, ನಮ್ಮ ಬಳಿ ಸ್ವೀಡಿಷ್ ಭಾಷಾ ಪುಸ್ತಕಗಳು ಮಾತ್ರವೇ ಇವೆ."

"ಸ್ವೀಡಿಷ್ ಭಾಷೆಯಲ್ಲಿ ಗಾಂಧೀ ಆತ್ಮಚರಿತ್ರೆ ಇಲ್ಲವೇ?"

"ಇಲ್ಲ."

"ಸ್ವೀಡಿಷ್ ಭಾಷೆಯ ಗ್ರಹಚಾರ" ಗೊಣಗಿಕೊಳ್ಳುತ್ತಾ ಪಕ್ಕದ ಶಾಪ್‌ಗೆ ನಡೆದಳು ಆಕೆ. ಆಕೆಯ ಮುಂದೆ ಹೋಗಿ "ನಾನೊಬ್ಬ ಇಂಡಿಯನ್ ಪೊಯೆಟ್" ಎಂದು ಸ್ವೀಡಿಷ್‌ನಲ್ಲೇ ಪರಿಚಯ ಮಾಡಿಕೊಂಡನು.

"ಹೌದಾ. ತುಂಬಾ ಸಂತೋಷ" ನನ್ನೆಡೆಗೆ ತಲೆ ಎತ್ತಿ ನೋಡಿ ನಗುತ್ತಾ ಅಂದಳು. ನಂತರ ಆ ಪಕ್ಕದಲ್ಲೇ ಇದ್ದ ಪುಸ್ತಕಗಳ ಶಾಪ್‌ನಲ್ಲಿ ಗಾಂಧಿ ಆತ್ಮಕಥೆ ಮತ್ತೆ ಕೆಲವು ಪುಸ್ತಕಗಳನ್ನು ಕೊಂಡಳು.

ಐರೋಪ್ಯದಲ್ಲಿನ ಹಲವಾರು ದೇಶಗಳಿಂದ ಸಾವಿರಾರು ಪುಸ್ತಕಪ್ರಿಯರು, ರಚಯಿತರು ಆ ಪುಸ್ತಕ ಪ್ರದರ್ಶನಕ್ಕೆ ಹೊರಟುಬಂದಿದ್ದರು. 1997 ನವೆಂಬರ್ ಒಂದನೇ ತಾರೀಖಿನಂದು ದಕ್ಷಿಣಾಫ್ರಿಕಾದಿಂದ ಬಂದ ಮಾರ್ಥಾ ಎಂಬ ಹಿರಿಯಾಕೆ ನನಗೆ ಹಾಗೆ ಪರಿಚಯವಾದಳು. ಎಲ್ಲಾ ಶಾಪ್‌ಗಳನ್ನು ತಿರುಗಾಡಿ ನೋಡುವುದಕ್ಕೆ ಎರಡು ದಿನಗಳಾದರೂ ಹಿಡಿಯುತ್ತವೆ. ತುಂಬಾ ಶಾಪ್‌ಗಳನ್ನು ತಿರುಗಾಡಿ ನೋಡುವುದಕ್ಕೆ ಎರಡು ದಿನಗಳಾದರೂ ಹಿಡಿಯುತ್ತವೆ. ತುಂಬಾ ಶಾಪ್‌ಗಳನ್ನು ತಿರುಗಾಡಿ ನೋಡಿದ ಮೇಲೆ ನಾನೂ, ಮಾರ್ಥಾ ಹೊರಬಂದೆವು. ಸ್ವೀಡನ್‌ನಲ್ಲಿ ಅದು ವಸಂತಕಾಲ. ಬೆಳಿಗ್ಗೆ ಹನ್ನೊಂದು ಗಂಟೆ. ಚಳಿ ತುಂಬಾ ಇದೆ. ಸೂರ್ಯಕಾಂತಿ ಇಲ್ಲ, ಪುರಾತನ, ಆಧುನಿಕ ಸುಂದರ ಭವನಗಳು, ಬಂಗಾರಬಣ್ಣದ ಎಲೆಗಳ ಸಿಲ್ವರ್ ಫರ್ಸ್, ಓಕ್, ಮೇಪಲ್ ವೃಕ್ಷಗಳು ಮಂಜಿನಲ್ಲಿ ತೊಯ್ಯುತ್ತಾ ರಸ್ತೆಯ ಎರಡೂ ಕಡೆಗಳಲ್ಲೂ ನಿಂತಿವೆ.

"ನೀವೆಲ್ಲಿಗೆ ಹೋಗಬೇಕು ಮೇಡಂ?"

"ಕುಂಗ್ ಆಲ್ಸ್‌ಗೆ. ಬಸ್ ಇದೆ" ನಗುತ್ತ ಹೇಳಿದಳು.

"ಈ ದಿನ ಇಂಡಿಯಾದಲ್ಲಿ ಭಾಷಾವಾರು ರಾಜ್ಯವಾಗಿ ನಮ್ಮ ಕೇರಳ ಅವತರಿಸಿದ ದಿನ. ಸೆಲಬ್ರೇಟ್ ಮಾಡುವುದಕ್ಕೆ ನನ್ನೊಂದಿಗೆ ಸ್ವಲ್ಪ ವೈನ್ ತಗೋಬೇಕು ನೀವು. ಬನ್ನಿ. ಅಗೋ ಅಲ್ಲಿ ಕಾಣುತ್ತಿರುವುದೇ ನಾನಿರುವ ಹೋಟೆಲ್" ಆಹ್ವಾನಿಸಿದೆನು. ಪುಸ್ತಕ ಪ್ರದರ್ಶನ ಜರುಗುವ ಸ್ಥಳಕ್ಕೆ ಹತ್ತಿರದಲ್ಲಿರುವ ಸ್ಕಾಂಡಿಕ್ ಒಬಲಾನ್ ಎಂಬ ಫೈವ್‌ಸ್ಟಾರ್ ಹೋಟೆಲ್ ಅದು.

"ಮೈ ಗಾಡ್! ಶ್ರೀಮಂತರು ಮಾತ್ರವೇ ಇಳಿಯುವ ಅತಿ ದುಬಾರಿಯಾದ ಹೋಟೆಲ್ ಅಲ್ವಾ ಇದು. ನೀವು ಇಂಡಿಯನ್ ರೈಟರ್ಸ್ ಅಷ್ಟು ಧನವಂತರಾ?" ಆಶ್ಚರ್ಯದಿಂದ ಪ್ರಶ್ನಿಸಿದಳು.

"ಅದೇನಿಲ್ಲ, ನಾನು ಸ್ವೀಡಿಷ್ ಸರ್ಕಾರದ ಗೆಸ್ಟಾಗಿ ಬಂದಿರುವೆನು ಅಷ್ಟೇ. ನನ್ನ ಖರ್ಚನ್ನೆಲ್ಲಾ ಈ ಸರ್ಕಾರವೇ ಭರಿಸುತ್ತೆ" ವಿವರಿಸಿದೆನು.

ಆ ಫೈವ್‌ಸ್ಟಾರ್ ಹೋಟೆಲ್ ಬಾರ್‌ನಲ್ಲಿ ಕುಳಿತೆವು. 'ಕಾಂಬೋವೈಹೋ' ಎಂಬ ಸ್ಪಾನಿಷ್ ರೆಡ್‌ವೈನ್ ಸೇವಿಸುತ್ತಾ ಮಾರ್ಥಾ ತನ್ನ ಬದುಕಿನ ವಿವರಗಳನ್ನೆ ನನ್ನೊಂದಿಗೆ ಹಂಚಿಕೊಂಡಳು. ದಕ್ಷಿಣ ಆಫ್ರಿಕಾದಲ್ಲಿ ಒಂದು ಪ್ರಾಥಮಿಕ ಪಾಠಶಾಲೆಯಲ್ಲಿ ಟೀಚರ್ ಆಗಿದ್ದಾಳೆ ಮಾರ್ಥಾ. ಆಕೆಯ ಗಂಡ ಏಲೆನ್ ಓರ್ವ ಮೆಕ್ಯಾನಿಕ್. ಅವರಿಗೆ ನಾಲ್ವರು ಪುತ್ರರು. ಇಬ್ಬರು ಪುತ್ರಿಯರು. ದಕ್ಷಿಣಾಫ್ರಿಕಾ ಸ್ವಾತಂತ್ರ್ಯ ಹೋರಾಟದಲ್ಲಿ ಬಿಳಿಯರ ದೌರ್ಜನ್ಯಕ್ಕೆ ನಾಲ್ವರು ಪುತ್ರರೂ ಬಲಿಯಾಗಿ ಹೋದರು. ದೊಡ್ಡ ಮಗಳು- ಅಳಿಯ ಮೆಕ್ಸಿಕೋದಲ್ಲಿ ಟೀ ಶಾಪ್ ಇಟ್ಟುಕೊಂಡು ಜೀವನ ಸಾಗಿಸುತ್ತಿರುವರು. ಎರಡನೇ ಮಗಳು ಇಲ್ಲಿ ಗೊಥೆನ್‌ಬರ್ಗ್‌ನಲ್ಲೇ ಒಂದು ಲಾಂಡ್ರಿಯಲ್ಲಿ ಕೆಲಸ ಮಾಡುತ್ತಿರುವಳು. ಗಂಡ ಟ್ಯಾಕ್ಸಿ ನಡೆಸುತ್ತಾನೆ. ಇಂಡಿಯಾವನ್ನು ಕುರಿತು ಸಹಾ ಎಷ್ಟೋ ವಿಷಯಗಳನ್ನು ಕೇಳಿ ತಿಳಿದುಕೊಂಡಳು. ಪುನರ್ ಜನ್ಮಗಳನ್ನು ಕುರಿತು ತುಂಬಾ ಆಸಕ್ತಿ ತೋರಿದಳು. ಆ ವಿಷಯ ಕುರಿತು ನನಗೇನೂ ತಿಳಿಯದೆಂದು ಹೇಳಿದಾಗ ತುಂಬಾ ನಿರಾಶೆ ಹೊಂದಿದಳು.

ಹರಟೆಯಲ್ಲಿ ರಾತ್ರಿಯಾಗುವುದನ್ನು ಗಮನಿಸಲೇ ಇಲ್ಲ.

"ತುಂಬಾ ಕತ್ತಲೆಯಾಗಿದೆ. ನೀವೀಗ ಒಂಟಿಯಾಗಿ ಅಷ್ಟು ದೂರ ಹೋಗುವುದು ಅಷ್ಟು ಒಳ್ಳೇದಲ್ಲವೇನೊ. ಟ್ಯಾಕ್ಸಿಯಲ್ಲಿ ನಿಮ್ಮನ್ನು ಇಳಿಸಿಬರ್ತೀನಿ" ಅಂದೆನು. ನನ್ನ ಮಾತುಗಳಿಗೆ ಆಕೆ ಆತ್ಮೀಯವಾಗಿ ನನ್ನನ್ನು ಆಲಂಗಿಸಿಕೊಂಡು ನನ್ನ ಕೆನ್ನೆಗಳನ್ನು ಮುದ್ದಾಡಿದಳು.

"ನೀನೆಷ್ಟೋ ಒಳ್ಳೆಯವನ ಹಾಗಿದ್ದೀ. ಸರಿ ಆಗಲಿ." ಅಂದಳು ಸಂತೋಷದಿಂದ.

ಇಬ್ಬರೂ ಟ್ಯಾಕ್ಸಿಯಲ್ಲಿ ಹೊರಟೆವು. ಕುಂಗ್ ಆಲ್ಸ್ ಹತ್ತಿರದ ನದೀತೀರದ ಸಿಲ್ವರ್ಸ್, ಮೇಪಿಲ್ ವೃಕ್ಷಗಳ ನಡುವೆ ಕೆಂಪುಬಣ್ಣದ ಚಿಕ್ಕ ಮನೆಯ ಮುಂದೆ ಟ್ಯಾಕ್ಸಿ ನಿಂತಿತು.

"ಒಳಗೆ ಬಾ. ಒಳ್ಳೆ ಬ್ರೆಜಿಲ್ ಕಾಫಿ ಕುಡಿದು ಹೋಗುವೆಯಂತೆ" ಎಂದು ಆಹ್ವಾನಿಸಿದಳು ಮಾರ್ಥಾ. ಓರ್ವ ಕೃಷ್ಣವರ್ಣೀಯ ಸ್ತ್ರೀ ಬಾಗಿಲು ತೆರೆದಳು. ಆಕೆಯ ಮುಡಿಕಟ್ಟು ಬಲೆಗಳಂತೆ ಕೆಳಗೆ ನೇತಾಡುತ್ತಿದ್ದವು. ಅವಳ ವಿಶಾಲ ನೇತ್ರಗಳು ನನ್ನನ್ನು ನಖಶಿಖಾಂತ ಪರಿಶೀಲಿಸಿದವು.

"ಇಂಡಿಯಾದಿಂದ ಬಂದಿದ್ದಾನೆ. ಕವಿ. ಬುಕ್ ಎಗ್ಜಿಬಿಷನ್‌ನಲ್ಲಿ ಭೇಟಿಯಾದೆವು" ಎಂದು ನನ್ನನ್ನು ಪರಿಚಯ ಮಾಡಿಸಿದಳು. ಎಗ್ಜಿಬಿಷನ್‌ನಲ್ಲಿ ತಾನು ಕೊಂಡ ಪುಸ್ತಕಗಳ ಬ್ಯಾಗನ್ನು ಆಕೆಯ ಕೈಗೆ ಕೊಟ್ಟಳು. "ನನ್ನ ಚಿಕ್ಕಮಗಳು ಮೆಯೊ" ಎಂದು ಹೇಳಿದಳು. ನನ್ನೆಡೆಗೆ ನೋಡಿ ಸಣ್ಣಗೆ ನಕ್ಕು ಒಳನಡೆದಳು ಮೆಯೊ.

ಹಾಲ್ ನಡುವೆ ಫೈರ್‌ಪ್ಲೇಸ್. ಪಕ್ಕದಲ್ಲೇ ಇದ್ದ ಸೋಫಾದಲ್ಲಿ ಕುಳಿತು ಅಂಗೈಗಳನ್ನು ಚಾಚಿ ಚಳಿ ಕಾಯಿಸಿಕೊಂಡೆನು. ಆ ಮನೆ ಬಡತನವನ್ನು ಪ್ರದರ್ಶಿಸುತ್ತಿದೆ. ಹಳೆಯದಾದ ಕುರ್ಚಿಗಳು, ಸೋಫಾಗಳು. ಗೋಡೆಗೆ ಶಿಲುಬೆಗೇರಿದ ಜೀಸಸ್ ಚಿತ್ರಪಟ ತೂಗಾಡುತ್ತಿದೆ. ಕೆಲವು ಫೋಟೋ ಆಲ್ಬಂಗಳನ್ನು ತಂದು ನನ್ನೆದುರಿಗೆ ಕುಳಿತಳು ಮಾರ್ಥಾ. ಆಗ ಗಮನಿಸಿದೆನು ಗ್ಲೌಸ್‌ಗಳನ್ನು ತೆಗೆದು ಹಾಕಿದ ಆಕೆಯ ಕೈಗಳನ್ನು. ಆ ಕೈಗಳಲ್ಲಿ ಕೆಲವು ಬೆರಳುಗಳು ಇಲ್ಲ!

"ಏನಾಯ್ತು ನಿಮ್ಮ ಕೈ ಬೆರಳುಗಳಿಗೆ?" ಬೆರಗಾಗುತ್ತಾ ಕೇಳಿದೆನು. "ಯುದ್ಧದಲ್ಲಿ ನಾನು ಹೆತ್ತ ಮಕ್ಕಳು ಒಬ್ಬೊಬ್ಬರಾಗಿ ಬಲಿಯಾಗುತ್ತಾ ಹೋದಾಗ ಅವರ ಸ್ಮೃತಿ ಚಿಹ್ನೆಯಾಗಿ ಒಂದೊಂದು ಬೆರಳನ್ನೂ ಕೊಯ್ದುಕೊಂಡೆನು. ಅದು ನಮ್ಮ ಆಚಾರ. ಹತ್ತು ಕೈ ಬೆರಳುಗಳು, ಕೆಲವು ಕಾಲ್ಬೆರಳುಗಳನ್ನೂ ಸಹಿತ ಕಳೆದುಕೊಂಡ ತಾಯಂದಿರು ನಮ್ಮ ದೇಶದಲ್ಲಿದ್ದಾರೆ" ನಿಧಾನವಾಗಿ ಹೇಳಿದಳು ಮಾರ್ಥಾ.

ನಾನು ನಿಶ್ಚೇಷ್ಟಿತನಾದೆನು. ಏನೆನ್ನಬೇಕೋ ತೋಚಲಿಲ್ಲ ಅಂಥ ಪ್ರೇಮಕ್ಕೆ ಆಚಾರಗಳಿಗೆ.

ಭೂಮಿ ಸಣ್ಣದಾಗಿದೆಯಂತೆ

೧

ಅವ್ವಾ!
ಭಯವಾಗುತ್ತಿದೆ!!
ಅಷ್ಟೂ ಖಂಡಗಳ ಭಂಡ
ಮಿಂಡರು
ನನ್ನ ಮಾಂಸಖಂಡಗಳ ಕಬಾಬ್
ಮಾಡಿ ಪಶ್ಚಿಮ ವಿಷ್ಯಾದ
ಎಣ್ಣೆಯಲಿ ಹುರಿದು ಮುಕ್ಕುತಿದ್ದಾರೆ
ಭೂಮಿ ಸಣ್ಣದಾಯಿತೆನ್ನುತ್ತ
ನೆತ್ತಿಯಿಂದ ಪಾದದವರೆಗೆ
ಒಪ್ಪಂದಗಳ ಸರಪಳಿಯಿಂದೆನ್ನ ಬಿಗಿದಿದ್ದಾರೆ;

೨

ಉಣ್ಣುವ ಅಕ್ಕಿಗೆ ಅವರ ಹೆಸರ ಬರೆದು
ಕುಡಿಯುವ ನೀರಿಗವರ ಕಾರ್ಖಾನೆ ವಿಷವನೆರೆದು
ಗೌರಿ ಹಸುವಿನ ನೆತ್ತಿಗೂ ಅವರ ಲಾಂಛನವ ಕೆತ್ತಿ
ಭೂಮಿಗವರ ಹೈಬ್ರೀಡ್ ಬೀಜವ ಬಿತ್ತಿ
ಗಾಳಿಯೊಂದನು ಬಿಟ್ಟು ಮಿಕ್ಕೆಲ್ಲವೂ
ಪೇಟೆಂಟ್ ಅನ್ನೊ ಭೂತದ ಬೊಂಬೆ ಕಟ್ಟಿ
ಆಡಿಸುತಿದ್ದಾರೆ ನನ್ನ ಗಿರಿಗಿಟ್ಟೆ!

೩

ಕಾಡುಗಳ ಕಡಿಸಿ ಕಾರ್ಖಾನೆಗಳ ಕಟ್ಟಿಸಿ
ಗೋಮಾಳಗಳಲಿ ಹಾಳು ಅಕೇಶಿಯಾ ಬೆಳೆಸಿ
ಕೆರೆಗಳ ಸೋಸಿ ಕಾಲೋನಿಗಳನೆಬ್ಬಿಸಿ
ನನ್ನ ಅನಾಥವನ್ನಾಗಿಸಿದ್ದಾರೆ.


೪

ನಮ್ಮೂರ ಯಜಮಾನಪ್ಪಗೋಳು ಮಾತ್ರ
ಅವರ ಹವಾಲಾದ ಹೇಲು ತಿನ್ನುತ್ತಾ
"ಆಹಾ! ಪಶ್ಚಿಮವೇ ಅಭಿವೃದ್ಧಿಯ ಸಂಕೇತವೇ"
ಅನ್ನುತ್ತಾ ಆರಾಮ ಕುರ್ಚಿ ಮೇಲೆ ಆಸೀನರಾಗಿದ್ದಾರೆ
ಅವರು ಕೊಟ್ಟ ಬಂದೂಕನ್ನು ನನ್ನೆದೆಗೆ
ಗುರಿಯಿಟ್ಟು ನರಸತ್ತವನ್ನಾಗಿಸಿದ್ದಾರೆ
ಹೇಗೇ ತಾಳಲೀ ಅವ್ವಾ?

೫

ನನ್ನ ಕೈಯಿಂದಲೇ ನನ್ನ ಸಮಾಧಿಗೆ
ಗುಂಡಿ ಅಗೆಸಿ
ಅದರ ಸುತ್ತ ಅವರ ಧ್ವಜಗಳನ್ನು ನೆಡಿಸಿ
ಗಹ-ಗಹಿಸುತ್ತಿದ್ದಾರೆ
ಹೇಗೇ ಹೇಳಲೀ ಅವ್ವಾ?
ಹೆಂಗೆ ತಪ್ಪಿಸಿಕೊಳ್ಳಲೀ?
ಏನಾದರೂ ದಾರಿ ತೋರವ್ವಾ!


• ಕು.ಸು. ಮಧುಸೂದ



ಗೇನಾರ ಯಲಕ್ಸನ್ನಾದ್ರೆ ಮತ್ತೆ ಮಹಮ್ಮದ್ ಬಿನ್ ತೊಗಲಕ್ ವಕ್ರಿಸ್ತಾನೆ

ೂರು ಚುನಾವಣಾ ಫಲಿತಾಂಶದ ಸುದ್ದಿ ೀರ "ಸ್ಲೊ" ಎಂದು ಸುಳ್ಳು ನಿಟ್ಟುಸಿರು

ುತೂ ದ್ಯಾವೇಗೌಡನ ಸಭವ ೀಪುರದಲ್ಲೇ ಧಪನ್ ಮಾಡಂಗಾಯ್ತು"



ದ್ಯಾಕ್ಲ ಅಂತ ಮಾತಂತೀ?" ಎಂದ ವ.

ಪಟ್ಟಣದಲ್ಲಿ ನಮ್ಮ ಪಾರ್ಟಿ ಗೆದ್ರೇ ನನ್ನ ದು ಇಲ್ಲೆ ದಪನ್ ಮಾಡಿ ಅಂತ ುತೆ."

ಗನ್ನಕುಲವಲ್ಲಾ?"

ುತ್ತು ಉಗ್ರಿನೆ ಕೇಳಪ್ಪ, ನಾನೇನು ದಿ."

ವೇಗೌಡ್ರು ಅಂಗಂದಿರದು ನಿಜ ವ" ಎಂದ ಉಗ್ರಿ.

ಗ್ಯಲ್ಲ ಅನ್ನಬಾರದು ಕಂಡ್ಯ."

ದ್ಯಾಕಂಗದ ಗೊತ್ತೆ ಮಾವ? ಕಳದ ಸೆಲಿ ಕುಮಾರಸ್ವಾಮಿ ಅಳೊಮುಖ ುಡು 'ಒಂದು ತೊಟ್ಟು ವಿಷ ಕೊಟ್ಟು ಸುಡುದು ಸತ್ತೋಯ್ತಿನಿ' ಅಂತ ಭಾಷಣ . ಜನ ಲ್ವಚಗರದು 'ಅದ್ಯಾಕಂತ , ಓಟು ಕೊಡ್ತಿವಿ ಹೋಗಪ್ಪ' ಅಂತ . ಆದ್ರೆ ಈ ಸತಿ ಅವುನೇನು ಅನ್ನಲಿಲ್ಲ, ಡ್ರು ಸಭೆನೆ ಪಣಕಿಟ್ರೂ ಕೂಡ ಜನ ಬುಟ್ರು. ಇದಕೇನೇಳ್ತೀ?"

ವೇಗೌಡ್ರ ಸಭಕಿಂತ ಬಿಜೆಪಿ ದುಡ್ಡೇ ಅಂದ್ರು ಜನ" ಎಂದ ಸೀರ.

ತೊಂತರ ದುಡ್ಡು ಸುರುದ್ರೇ?" ಎಂದಳು

ಕಣೇ, ಇನ್ನುಮ್ಯಾಲೆ ಯಡಗ್ಯೆಲಿ ಬಲಗ್ಯೆಲಿ ಓಟು ಅನ್ನೊ ಚುನಾವಣೆ ಬುರದೇನು ಬಂದಾಯ್ತಲ್ಲ, ಮೂರು ಸೆಲಿ ಬಿಜೆಪಿ ಗೆಲ್ಲಬೇಕಾದ್ರೆ ಗೆಲುವ ದಿರದು ಗೊತ್ತೆ" ಎಂದು ಉಗ್ರಿ ಹೇಳಿದ ಕಾಳಮಾವನ ಬಾಯಿಂದ ಮಾತೇ ಲಿಲ್ಲ.

ಜೆಪಿಲಿ ನಿಂತಿದ್ದೋರ್‍ಯಲ್ಲ ಗೆಲ್ಲೊ ಕ್ಯಾಂಡೇಟೆ !?"

"ಅಷ್ಟೇ ಅಲ್ಲ, ಅವುರ್‍ಯಲ್ಲ ಕಾಂಗ್ರೆಸ್ಸಿನೋರು ಕಣೇ. ಕಾಂಗ್ರೆಸ್ ಓಟು, ಜ್ವತಿಗೆ ಬಿಜೆಪಿ ಓಟು ಸೇರಿದ್ರೆ ಗೆಲ್ಲದಿಲವೆ. ಅದರಲ್ಲೂ ಇದೊಂತರ ಹಾದರಕುಟ್ಟಿದ ಚುನಾವಣೆ. ಕಾಂಗ್ರೆಸ್ಸಿನಿಂದ ರಾಜೀನಾಮೆ ಕೊಟ್ಟು ಬಿಜೆಪಿಯಿಂದ ಗೆದ್ದು ಬಂದವುರೆ. ಅದ್ಯಾವ ಗಳಿಗೆಲಿ ಗೆದ್ದರೊ, ಹದುನಾರು ಜನಗಳ ತೀರ್ಪು ಅವತ್ಲೆ ಬರಬೇಕೆ. ಅವುರಾರಿಸಿ ಬಂದ್ರೆ ಇವುರು ಹಕನಾಯಿಸಿಗಂಡ್ರು ಅನ್ನಂಗಾಯ್ತು."

"ಹದುನಾರು ಜನ್ಯಾರು?" ಎಂದ ಕಾಳಮಾವ.

"ಅವುರು ಕುಮಾರಸ್ವಾಮಿ ಪಾಲೋಯರ್ಸ್ ದೊಡಪ್ಪ, ಅದಕೂ ಮೊದ್ಲು ಎಡೂರಪ್ಪನ ಹಿಂದಿದ್ರು. ಬ್ರೋಕರ್ ರೇಣುಕಾಚಾರಿ ಮುಖಾಂತರ ಅವುರನ್ಯಲ್ಲ ಕುಮಾರಣ್ಣ ತುಂಬಿಕಂಡೋಗಿ ಗೋವಾ ರೆಸಾರ್ಟ್‌ನಲ್ಲಿ ಸುರಕಂಡು ಎಡೂರಪ್ಪನ್ನ ಇಳಸಕ್ಕೆ ಟ್ರೈ ಮಾಡಿದ. ಆದ್ರೆ ಆದಾಗಲಿಲ್ಲ, ಯಾಕಪ್ಪ ಅಂದ್ರೆ ಎಡೂರಪ್ಪನ ಪರ ಸ್ಪೀಕರು, ಕೋರ್ಟಿನ ಜಡಜಗಳು ಇದ್ದು ಎಡೂರಪ್ಪನ್ನ ಕಾಪಾಡಿದ್ರು. ಆ ಟೈಮಲ್ಲೇ ಜಡಜ್‌ಗಳ ಮ್ಯಾಲೆ ಕರಪ್ಸನ್ ಚಾರ್ಜ್ ಜನಗಳೇ ಮಾಡಿದ್ರು."

"ಜನಗಳೇನು ಮಾತಾಡ್ತರೆ ಬುಡ್ಯ. ಇಲಿ ಹೋಯ್ತು ಅಂದ್ರೆ ಹುಲಿಯೇ ಹೋಯ್ತು ಅಂತವೆ."

"ಅಲ್ಲಿಗೆ ಹೈಕೋರ್ಟು ಜಡಜಗಳು ಇಲಿ ಅಂತ ತೀರ್ಪು ಕೊಟ್ಟಿದ್ದು ಸುಪ್ರೀಂಕೋರ್ಟ್‌ನ ಜಡಜಗಳ ದೃಷ್ಟಿಲಿ ಹುಲಿಯಂಗಾಯ್ತು ದ್ವಡಪ್ಪ, ಇಲ್ಲಾಗಿದ್ದು ಅಲ್ಲಾಗಬೇಕು ತಾನೆ. ಹೈಕೋರ್ಟು ಜಡಜಗಳತ್ರ ಕೇಸಿರುವಾಗ್ಲೆ ಬಿಜೆಪಿಗಳು ದೆಪನೆಟ್ಟ್ರೆ ನಾವೆ ಗೆಲ್ಲದು, ನಾವಾಗ್ಲೆ ಗೆದ್ದಿದ್ದಿವಿ ಅನ್ನೊ ಮಾತಂದವುರೆ."

"ಅಂಗ್ಯಲ್ಲ ಅಂದ್ರು ಅಂದ್ರೆ ಯಾವನಿಗಾದ್ರು ಅನುಮಾನ ಬತ್ತದೆ ಬುಡು."

"ಸುಪ್ರೀಂಕೋರ್ಟ್ ತೀರ್ಪಿನಿಂದ ಅನುಮಾನವೆ ನಿಜ ಆಯ್ತಲ್ಲ ದ್ವಡಪ್ಪ, ದೇವರ ದಯದಿಂದ ನಮ್ಮ ಅನುಮಾನಗಳು ಸುಳ್ಳಾಗ್ಲಿ."

"ಸುಳ್ಳೊ, ನಿಜವೊ ಯಾವನು ಕಂಡಿದ್ದನ್ಲ. ಆ ಎಡೂರಪ್ಪ ಯಾವಾಗ ಮುಖ್ಯಮಂತ್ರಿಯಾದ್ನೊ ಅವತ್ತಿಂದ ಹತ್ತಿದ್ದು ಹರಿತಾಯಿಲ್ಲ. ಅಂತೂ ಇಲ್ಲಿಗೆ ಬಂದು ನಿಂತೋಯ್ತು. ಬ್ಯಾರೆ ಮಾತಾಡಿ ಅತ್ತಗೆ" ಎಂದ ಕಾಳಮಾವ.

"ಇಂತ ಟೇಮಲ್ಲಿ ಬ್ಯಾರೆ ಮಾತಾಡದ ದ್ವಡಪ್ಪ? ಮಾತಾಡಕ್ಕೆ ಮನಸು ಬತ್ತದ? ರಾಜ್ಯಪಾಲ ಭಾರದ್ವಾಜ್ ಸಂವಿಧಾನ ಹಿಡಕಂಡು ಕುಂತವುನೆ. ಬಿಜೆಪಿಗಳು ಅವುರ ಪಾರ್ಟಿ ಅಜೆಂಡ ಹಿಡಕಂಡು ಕುಂತವುರೆ, ಯಾರ್ ಗೆಲ್ತರೆ ನೋಡಬೇಕು."

"ಬಿಜೆಪಿಯವರ ಅಜೆಂಡಾ ಯಾವುದೊ?"

"ಭಂಡತನ ಕಣೊ. ಮನ್ನ ಮನೆವರಿಗೂ ಹದುನಾರು ಜನ ಎಮ್ಮೆಲ್ಲೆಗಳ ವಿರುದ್ಧ ಹೋರಾಡಿ ಕೋರ್ಟಲಿ ಸೋತೋರು, ಇವತ್ತು ಗೆದ್ದು ಬಂದೋರ ಮುದ್ದಾಡದೇನು, ಮುತ್ತು ಕೊಡದೇನು, ಮಂತ್ರಿಯಾಯ್ತಿರೊ, ನಿಗಮ ಮಂಡ್ಳಿ ಛೇರಮನ್ನುರಾಯ್ತಿರೊ ಅಂತ ಕೇಳದೇನು" ಎಂದು ವಾಟಿಸ್ಸೆ ವರಲುತ್ತಿದ್ದಾಗ ಕಾಣಿಸಿಕೊಂಡ ಸಿದ್ಲಿಂಗನನ್ನ ಕೂಗಿ ಕರೆದ ವಾಟಿಸ್ಸೆ,

"ಸಿದ್ಲಿಂಗಣ್ಣ ನೀನು ಲಿಂಗಾಯಿತ್ನೆ ಇರಬವುದು, ಆದ್ರು ಎಡೂರಪ್ಪನ ಬಗ್ಗೆ ಸರಿಯಾಗಿ ಮಾತಾಡು" ಎಂದ. ಬುಕ್ಕಲು ಗದ್ದದ ಸಿದ್ಲಿಂಗ ಮುಖ ಕೆಂಪೇರಿಸಿಕೊಂಡು,

"ನಮ್ಮ ಎಡೂರಪ್ಪಾಗೊ ವತ್ತಿಗೆ ಇವುರು ಕೊಡೊ ತೊಂದ್ರೆನ್ಯಲ್ಲ ನಿಭಾಯಿಸಿಗಂಡು ಮುಖ್ಯಮಂತ್ರಿಯಾಗಿ ಮುಂದುವರದವುನೆ. ಇನ್ಯಾರೆ ಆಗಿದ್ರು ನ್ಯಾಣಾಯ್ಕತಿದ್ರು" ಎಂದ.

"ಪಾಪ ಸಿದ್ಲಿಂಗ ಇನ್ನೇನು ಮಾತಾಡ್ತನ್ಲ?" ಎಂದ ಸೀರ.

"ಅಂಗಲ್ಲ ಚಿಗಪ್ಪ, ಸಿದ್ಲಿಂಗನ ದ್ವನಿ ನನಿಗೆ ಭಾಳ ಮುಖ್ಯ. ಯಾಕಪ್ಪ ಅಂದ್ರೆ ಎಡೂರಪ್ಪನ್ನ ನಾವು ನೋಡ್ತಯಿರದೆ ಬ್ಯಾರೆ, ಇವುರು ನೋಡದೆ ಬ್ಯಾರೆ. ಅಲವೇನೊ ಸಿದ್ಲಿಂಗ?"

"ಇದೇ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಇಪ್ಪತ್ತು ತಿಂಗಳು ಯಂಗಿದ್ರಪ್ಪ, ಯಾರಾರ ಕೂಗಾಡಿದ್ರಾ? ಅದೇ ಎಡೂರಪ್ಪ ಮುಖ್ಯಮಂತ್ರಿಯಾದ ಇಪ್ಪತ್ತು ದಿನದಿಂದ ಕಾಡ್ತಾಯಿದ್ದಿರಿ."

"ನೋಡೊ ಸಿದ್ಲಿಂಗ, ನಮ್ಮ ಕಾಳದೊಡ್ಡಪ್ಪನಿಗೆ ದೇವೇಗೌಡ್ರು ಕಾಣಂಗೆ ನಿನಿಗೆ ಎಡೂರಪ್ಪ ಕಾಣ್ತಾಯಿರಬವುದು."

"ಕಾಣದಲ್ಲ ಕಣೊ, ಎಷ್ಟು ಕ್ಯಲಸ ಮಾಡಿಸ್ಯವುನೆ ಹೋಗಿ ಶಿವಮೊಗ್ಗ ನೋಡು ಕಾಣ್ತದೆ."

"ನೀನ್ಯಾವಾಗೋಗಿದ್ದೆ?"

"ಅಸೋಕ್ ಪೈ ನೋಡನ ಅಂತ ಹೋಗಿದ್ದೆ ಕಣೊ."


"ಅಂಗರೆ ನಿನ್ನ ಜೊತೆ ಮಾತಾಡದಕ್ಕಿಂತ ಅಶೋಕ್ ಪೈ ಕಾಂಟ್ಯಾಕ್ಟ್ ಮಾಡಿ ಮಾತಾಡ್ತಿನಿ ಬುಡು."

"ಏ, ಅಸೋಕ್ ಪೈಯತ್ರಕೆ ನಾನೋಗಿರಲಿಲ್ಲ ಕಣೊ. ನಮ್ಮ ಅಕ್ಕನ ಮಗಳ ಕರಕಂಡೋಗಿದ್ದೆ. ಆಗ ನೋಡಿದ್ರೆ ಅದೇನು ರಸ್ತೆ, ಬಿಲ್ಡಿಂಗು, ಪಾರ್ಕು, ಎಷ್ಟು ಕ್ಯಲಸ ಮಾಡಿಸ್ಯವುನೆ ಗೊತ್ತೆ? ಅಂಥೊನಿಗೆ ಕೊಡಬಾರದ ತೊಂದ್ರೆ ಕೊಟ್ಟು ಮುಖ್ಯಮಂತ್ರಿ ಜಾಗದಿಂದ ಇಳಸಕ್ಕೋಯ್ತಿರಲ್ಲಾ, ಬಗ್ಗತನ ಅವುನು. ಗಂಡು ಅಂದ್ರೆ ಎಡೂರಪ್ಪ" ಎಂದ ಸಿದ್ಲಿಂಗ.

"ಆಹಾ ಏನೇಳಿದೊ ಸಿದ್ಲಿಂಗ. ಲಿಂಗಾಯಿತ್ರ ಕಾಮನ್‌ಮ್ಯಾನ್ ನಾಡಿಬಡಿತ ಇದು. ಇಂತ ಟೇಮಲ್ಲಿ ಯಲಕ್ಷನ್ ಏನಾರ ಆದ್ರೆ ಎಡೂರಪ್ಪ ನೂರಿಪ್ಪತ್ತೈದು ಸೀಟು ಗೆಲ್ತನೆ, ಕಾಂಗ್ರೆಸ್ ಅರವತ್ತು ಸೀಟು, ಜೆಡಿಎಸ್ ನಲವತ್ತು ಸೀಟು ಬತ್ತದೆ ಗೊತ್ತ."

"ಅದ್ಯಂಗೇಳ್ತಿಯೊ ವಾಟಿಸ್ಸೆ?"

"ನೋಡೋ ಉಗ್ರಿ, ಇಡೀ ಲಿಂಗಾಯಿತ್ರು, ಬ್ರಾಂಬ್ರು ಮತ್ತೆ ಆ ಲೆವೆಲ್ಲಿನ ಜಾತಿ ಬಿಜೆಪಿಗೆ ಓಟು ಮಾಡ್ತರೆ. ಇನ್ನು ಒಂದು ಓಟಿಗೆ ಒಂದು ಸವುರ ಕೊಡೊ ಶಕ್ತಿಯಿರದು ಬಿಜೆಪಿಗೆ. ದಳ ಐನೂರು ಕೊಡ್ತದೆ. ಕಾಂಗ್ರೆಸ್ಸು ನೂರು ಅಥವಾ ಐವತ್ತು ಕೊಡ್ತದೆ. ಆದ್ರಿಂದ ಈಗೇನಾರ ವಿಧಾನಸಭೆ ವಿಸರ್ಜನೆ ಆಗಿ ಯಲಕ್ಷನ್ನಿಗೋದ್ರೆ ತಿರಗ ಮಹಮದ್ ಬಿನ್ ತೊಗಲಕ್ಕನ ಆಡಳಿತ ಮುಂದುವರಿತದೆ."




"ಅಂಗೇಳಕ್ಕೆ ಬರದಿಲ್ಲ ಕಣೊ. ಆಗಿನ ಕಾಲದಲ್ಲಿ ಅಂತ ರಾಮಕೃಷ್ಣ ಯಗಡೆನ ಸೋಲಿಸಿದ್ರು ಜನ" ಎಂದ ಉಗ್ರಿ.

"ಕಾಲ ಬದ್ಲಾಗ್ಯದೆ ಕಣೊ ಉಗ್ರಿ. ಮೊನ್ನೆ ನಡೆದ ಚುನಾವಣೆಲಿ ಕಾಂಗ್ರೆಸ್, ದಳ ಯರಡೂ ಸೋತವೆ. ಕನಿಷ್ಠ ನೂರು ಕ್ಷೇತ್ರದಲ್ಲಿ ಇಂತ ಯಡವಟ್ಟಾದ್ರೆ ಯಡ್ಡಿ ಹೊಸ ಹಲ್ಲು ಉಗುರಿನ ಜೊತೆ ವಕ್ಕರಿಸಿಗತ್ತನೆ."

"ನಿನ್ನ ಮಾತ ಕೇಳಿದ್ರೆ ಹೆದ್ರಿಕಾಯ್ತದೆ ಕಂಡ್ಯ" ಎಂದಳು ಜುಮ್ಮಿ.

"!!" ●

ುರಿ ಅಂಕಲ್‌ಗೆ ಾಟಾ ಮಾಡು!'



ಬಹುಪಾಲು ತಂದೆತಾಯಿಯರಿಗೆ ತಮ್ಮ ಪುಟ್ಟಮಕ್ಕಳು ಎಷ್ಟು ಕೋಮಲವಾಗಿರುತ್ತಾರೆ ಎಂಬುದು ಗೊತ್ತಿರುವುದಿಲ್ಲ. ಅವರಿಗೆ ಈಗಿನಿಂದಲೇ ಒಳ್ಳೆಯ ನಡವಳಿಕೆ, ಮ್ಯಾನರ್ಸ್ ಕಲಿಸಬೇಕೆಂದು ಪಣ ತೊಟ್ಟಂತಿರುತ್ತಾರೆ. ಯಾರಾದರೂ ಅತಿಥಿಗಳು ಮನೆಗೆ ಬಂದರೆ ಆ ಮಕ್ಕಳಿಂದ ಹಾಡು ಹೇಳಿಸುವುದು, ಏಕಪಾತ್ರಾಭಿನಯ ಮಾಡಿಸುವುದು, ಅವರು ಆತಿಥ್ಯ ಸ್ವೀಕರಿಸಿ ಹೊರಡುವಾಗ 'ಮತ್ತೆ ಬನ್ನಿ ಅಂಕಲ್', 'ಆರೋಗ್ಯ ಸರಿಯಾಗಿ ನೋಡಿಕೊಳ್ಳಿ ಅಂಕಲ್', 'ಟಾಟಾ', 'ಬೈಬೈ' ಮುಂತಾದ್ದು ಹೇಳಿಸುವುದು ತೀರಾ ಸಾಮಾನ್ಯ. ಇದು ತಂದೆತಾಯಿಯರು ಮಕ್ಕಳನ್ನು ಅರಿಯದಷ್ಟು ಭಂಡರಾಗಿರುತ್ತಾರೆ ಎನ್ನುವುದನ್ನು ತೋರುತ್ತದೆ. ತಾವೂ ಒಂದು ಕಾಲದಲ್ಲಿ ಹಸುಳೆಗಳಾಗಿದ್ದವು ಎಂಬುದು ಅವರಿಗೆ ಮರೆತುಹೋಗಿರುತ್ತದೆ.

ಪುಟ್ಟ ಮಗು ಯಾರಾದರೂ ಹೊಸಬರನ್ನು ನೋಡಿದರೆ ಅದಕ್ಕೆ ತಕ್ಷಣ ಆಗುವುದು ದಿಗಿಲು, ಅಲ್ಲಿಂದ ಓಡಿಹೋಗಬೇಕು ಎನ್ನುವ ಆಶೆ. ಆ ಮಗುವಿಗೆ ಚಿಟ್ಟೆ, ಬೆಕ್ಕು, ಗುಂಗೆ, ನಾಯಿ ಮುಂತಾದ ಪ್ರಾಣಿಗಳಿಗೂ ಮನುಷ್ಯನಿಗೂ ಇರುವ ವ್ಯತ್ಯಾಸ ಗೊತ್ತಾಗಿರುತ್ತದೆ. ಬೆಳೆದಿರುವವರ ಲೋಕದಲ್ಲಿ ಎಲ್ಲವೂ ಭಯಾನಕ. ಅವರ ಮನೆ, ಕಚೇರಿ, ಪೊಲೀಸರು, ಶಾಲೆ-ಎಲ್ಲವೂ ಮನುಷ್ಯನ ಕೆಟ್ಟತನದ ಫಲವಾಗಿಯೇ ರೂಪುಗೊಂಡಂಥವು. ಆತ ಬಹುಪಾಲು ಮಾತಾಡುವುದು ಕೂಡ ಮನಸ್ಸಿನಲ್ಲಿರುವ ಭಾವನೆಯನ್ನು ಹೇಳುವುದಕ್ಕೆ ಬದಲಾಗಿ ಮುಚ್ಚಿಡುವುದಕ್ಕೆ. ಅವನ ಬಹುಪಾಲು ಕೆಲಸಗಳ ಉದ್ದೇಶ ಬೇರೆಯವರನ್ನು ಹತ್ತಿಕ್ಕಲು, ಹಣ ಗಳಿಸಲು, ಪ್ರದರ್ಶಿಸಲು; ಮುಖ್ಯವಾಗಿ ಆಕ್ರಮಣದ ಉದ್ದೇಶದಿಂದ ಆತ ಹುಂಬ ಕೃತ್ಯಗಳಲ್ಲಿ ಮುಳುಗಿರುತ್ತಾನೆ. ಇದು ಮಗುವಿನ ಸೂಕ್ಷ್ಮಜ್ಞತೆ ಮತ್ತು ಮುಗ್ಧತೆಯಿಂದಾಗಿಯೇ ತಿಳಿದಿರುತ್ತದೆ.

ಬ್ಲೇಕ್‌ನ 'ಮುಗ್ಧತೆಯ ಹಾಡುಗಳು' ಮತ್ತು 'ಅನುಭವದ ಹಾಡುಗಳು' ಪುಸ್ತಕ ಓದಿದರೆ ಮಗುವಿನ ಬಗ್ಗೆ ನಮಗರಿಯದ ಅನೇಕ ಸಂಗತಿಗಳು ತಿಳಿಯುತ್ತವೆ; ಮಗು ಆಸಕ್ತಿ ವಹಿಸುವ ಕತೆಗಳನ್ನು ನೋಡಿ. ನಾನು ಈ ಬಗ್ಗೆ ಹೆಚ್ಚಿಗೆ ಹೇಳುವುದಿಲ್ಲ.

ಮಗುವನ್ನು ನಾನಾ ರೀತಿಯಲ್ಲಿ ವಂಚಿಸುತ್ತೇವೆ. ಅದಕ್ಕೆ ಏಕಪಾತ್ರಾಭಿನಯವನ್ನು ಅಪರಿಚಿತರೆದುರು ಪ್ರದರ್ಶಿಸಲು ಹೇಳಿ ಮುಗ್ಧತೆ ಕಿತ್ತುಹಾಕುತ್ತೇವೆ. ಹಳ್ಳಿಯಲ್ಲಿ ತಂದೆ ತನ್ನ ಮಾಧ್ಯಮಿಕ ಶಾಲೆಯ ಮಗು ಬಂದವರೆದುರು ತನ್ನ ಇಂಗ್ಲಿಷ್ ಜ್ಞಾನ ತೋರಲು ಹೇಳಿ ಹಿಂಸಿಸುತ್ತಾನೆ. ಪ್ರತಿಯೊಬ್ಬ ತಂದೆ, ತಾಯಿಗೂ ತನ್ನ ಮಗು ಶ್ರೇಷ್ಠ ಎಂಬ ಭ್ರಮೆ ಇರುತ್ತದೆ. ದಿನಗಳು ಉರುಳಿದಂತೆ ಈ ಮಗುವೇ ಕೆಟ್ಟ ಜಂತುವಾಗುವುದನ್ನು, ಒಳ್ಳೆಯ ವ್ಯಕ್ತಿಯಾಗುವುದನ್ನು, ಎಲ್ಲರಂತೆಯೇ ಆಗುವುದನ್ನು ನೋಡುತ್ತಾರೆ. ಮಗುವಿನ ಸಂಕೋಚ ಅದರ ಚಿಕ್ಕಂದಿನ ಆಸ್ತಿ. ಅದನ್ನು ಹಾಳುಮಾಡಬಾರದು.



'ಮಗು ದೊಡ್ಡವನ ತಂದೆ' (**Child is the father of man**) ಎಂದು ವರ್ಡ್ಸ್‌ವರ್ತ್ ಹೇಳಿದ. ಮಗು ದೇವರು ಎನ್ನುವವರಿದ್ದಾರೆ. ಮಗುವಿನ ಮುಗ್ಧತೆಯನ್ನು ದೃಷ್ಟಾರರ, ಅವಧೂತರ, ಮಹಾತ್ಮರ ಸರಳತೆಗೆ ಹೋಲಿಸುತ್ತಾರೆ. ಅದೆಲ್ಲ ನಾನು ಮಾಡುವುದಿಲ್ಲ, ಮಗುವನ್ನು ಮಗುವಿನಂತೆ ನೋಡಿಕೊಳ್ಳಬೇಕು. ಅದಕ್ಕೆ ಸ್ವಾತಂತ್ರ್ಯ ಕೊಡಬೇಕು. ಅದಕ್ಕೆ ಮಾರ್ಗದರ್ಶನ ಮಾಡುವಾಗ ಕೂಡ ನಮ್ಮಲ್ಲಿ ಅಹಂಕಾರ ಇರಕೂಡದು. ನಾವು ತಲೆಮರೆಸಿಕೊಂಡಿರಬೇಕು.

ತಾಯಿಯ ಮಡಿಲಲ್ಲಿ ಮಲಗಿದ ಮಗು..... ತಾಯಿಯ ಹಾಲು, ಬೆವರು, ಕಂಬನಿ, ಜೊಲ್ಲು ಎಲ್ಲದರ ಸೊಗಡಿನಲ್ಲಿ ಕಣ್ಣುಬಿಟ್ಟು ನಗುವ ಮಗು. ಅದಕ್ಕೆ ಅಲ್ಲಿ ಸ್ವಾತಂತ್ರ್ಯವಿರುತ್ತದೆ, ಸಂತೋಷವಿರುತ್ತದೆ.

ಮೇ 3, 1995

ಭ್ರಷ್ಟತೆಗೆ ಭ್ರಷ್ಟತೆಯೇ ಮದ್ದು!

ಭ್ರಷ್ಟಾಚಾರ ಒಂದು ಪಿಡುಗು. ಖಂಡಿತವಾಗಿ!

ಭ್ರಷ್ಟರದ್ದೂ ಇದೇ ಅಭಿಪ್ರಾಯ. ಪ್ರಾಮಾಣಿಕರು ಹೇಳುವುದೂ ಇದನ್ನೆ.

ಇದಕ್ಕೆ ಪರಿಹಾರವೇ ಇಲ್ಲವೆ?

ಇದೆ. ಬುದ್ಧಿಜೀವಿಗಳ ಬಳಿ!


ಅಂತಹ ಬುದ್ಧಿಜೀವಿ, ಚಿಂತಕ ಎಸ್. ಗುರುಮೂರ್ತಿ ಹೆಸರು ಜಗತ್ ಪ್ರಸಿದ್ಧ. ಜಗದ್ಗುರುಗಳ ಜಗತ್ತು ಇದ್ದ ಹಾಗೆ ಇವರ ಜಗತ್ತೂ ಸಹ ಎನ್ನುವವರ ಮಾತಿಗೆ ಮೌನವೇ ನಮ್ಮ ಪ್ರತಿಕ್ರಿಯೆ.

ಅಣ್ಣಾ ಹಜಾರೆ ಜನಲೋಕಪಾಲ್ ಮಸೂದೆಗೆ ಒತ್ತಾಯಿಸಿ ಧರಣಿ ಕುಳಿತ ದಿನದಿಂದ ಇವರ ಲೇಖನಿಗೆ ಹರಿತ ಹೆಚ್ಚಿದೆ.

'ಭ್ರಷ್ಟತೆಗೆ ಭ್ರಷ್ಟತೆಯೇ ಮದ್ದು' ಇದು ಅವರ ಹೊಸ ಸೂತ್ರ.

ಗೊಂದಲ ಬೇಡ. ಅತಿಭ್ರಷ್ಟರನ್ನು ತೆಗೆಯಲು ಕಡಿಮೆ ಭ್ರಷ್ಟರೆಲ್ಲ ಒಂದಾಗಬೇಕು. ಹಾಗೆ ಆಗದೆ ಹೋದಲ್ಲಿ ಅಣ್ಣಾ ಹಜಾರೆ ಚಳುವಳಿಯೂ ವಿಫಲವಾಗುತ್ತದೆ ಎಂಬುದು ಅವರ ನೇರ ನುಡಿ.

ಭ್ರಷ್ಟತೆಗೆ ಮಾನದಂಡ ಏನು? ಅತಿ ಭ್ರಷ್ಟತೆ ಎಂದರೆ ಎಷ್ಟು? ಅವರು ತಿಳಿಸಿಲ್ಲ. ಆದರೂ 2G ತರಂಗಾಂತರ, ಕಾಮನ್‌ವೆಲ್ತ್ ಹಗರಣಗಳು ಈ ಗುಂಪಿನವು ಎನ್ನುವುದು ಅವರ ಒಳ ಅರ್ಥ. ಕಡಿಮೆ ಭ್ರಷ್ಟತೆ ಎಂದರೆ ಅಕ್ರಮ ಗಣಿಗಾರಿಕೆ, ಡಿನೋಟಿಫಿಕೇಷನ್ ತರಹದವು ಇರಬೇಕು. ಅವರು ವ್ಯಕ್ತಪಡಿಸದಿದ್ದರೂ ಸಾಫ್‌ಸೀದಾ ಅರ್ಥ ಏನು ಎಂದರೆ ಕಾಂಗ್ರೆಸ್‌ನವರದ್ದು ಅತಿಭ್ರಷ್ಟತೆ, ಉಳಿದವರದ್ದು ಕಡಿಮೆ ಭ್ರಷ್ಟತೆ. ಕಾಂಗ್ರೆಸ್ ಅರ್ಥಾತ್ ಸೋನಿಯಾ ತೊಲಗಿಸಲು ಇತರರೆಲ್ಲ ಒಂದುಗೂಡಬೇಕು! ಹಾಗಾದರೆ ಅಧಿಕಾರ ಸೂತ್ರ ಯಾರ ಕೈಗೆ....



ಇತಿಹಾಸ ನೋಡಿ. ಜಯಪ್ರಕಾಶ್ ನಾರಾಯಣರ ಸಂಪೂರ್ಣ ಕ್ರಾಂತಿ ಅಭ್ಯಾಸ ಮಾಡಿ. ಭ್ರಷ್ಟೆ ಇಂದಿರಾ ತೊಲಗಿಸಲು ಉಳಿದೆಲ್ಲರನ್ನೂ ಒಗ್ಗೂಡಿಸಿ ಹೋರಾಟ ನಡೆಸಿದರು. ಅದು ಯಶಸ್ವಿಯಾಯಿತು. ಈಗಲೂ ಹಾಗೇ ಮಾಡಬೇಕಾದ ಜರೂರತ್ತು ಇದೆ ಅನ್ನುವುದು ಅವರ ವಾದ.

ಅದೇನೋ ಸರಿ, ಮುಲಾಯಂಸಿಂಗ್ ಯಾದವ್, ಲಲ್ಲೂ ಪ್ರಸಾದ್ ಯಾದವ್ ಅಂತಹವರೂ 'ಸಂಪೂರ್ಣ ಕ್ರಾಂತಿ'ಯಿಂದ ಒಡಮೂಡಿದ ಕುಡಿಗಳೇ ಅಲ್ಲವೆ. ಈ ಸೂತ್ರ ಅನುಸರಿಸಿದರೆ ಭ್ರಷ್ಟ ಸಂತಾನಕ್ಕೆ ಬೀಜಾಂಕುರ ಮಾಡಿದ ಹಾಗಾಗುತ್ತದೆ ಎಂದರೆ ಮುಂದೆ ಆಗುವುದನ್ನು ಹೇಳಲು ನಾನು ಜ್ಯೋತಿಷಿ ಅಲ್ಲ ಅನ್ನಬಹುದೋ ಏನೋ.....

ಆಹಾ ಎಂತಹ ಬುದ್ಧಿಜೀವಿಗಳು! ಏನು ಸೂತ್ರ!

ಸರ್ವರಿಗೆ ಸಮಪಾಲು!

ಮಂಡ್ಯ ನಗರದಲ್ಲಿ ನಗರ ಸಾರಿಗೆ ಇಲ್ಲ, ಎಲ್ಲ ಸರ್ಕಾರಗಳೂ ಇವನ್ನ ಹಾಕ್ತೀವಿ ಅಂತ ನೀಡೋ ಭರವಸೆಗೇನೂ ಕೊರತೆ ಮಾಡಿಲ್ಲ. ಗ್ರಾಮಾಂತರ ಬಸ್ಸುಗಳು ನಗರದಲ್ಲಿ ಅಲ್ಲಲ್ಲಿ ನಿಲುಗಡೆ ಕೊಡುತ್ತವೆ. ಈ ಬಸ್ಸುಗಳಲ್ಲಿ ಒಂದು ವ್ಯವಸ್ಥೆ ಇದೆ. ನಗರ ಬಸ್ ನಿಲ್ದಾಣದಲ್ಲಿ ಬಸ್ಸು ಹತ್ತಿದವರಿಗೆ ಟಿಕೆಟ್ಟು ನೀಡುವ ತೊಂದರೆ ತೆಗೆದುಕೊಳ್ಳುವುದಿಲ್ಲ, ಒಂದೆರಡು ಮೂರು ಸ್ಟಾಪುಗಳ ನಂತರ ಅವನ್ನ ಕೊಡೋಕೆ ಪ್ರಾರಂಭಿಸುತ್ತಾರೆ. ಇದರಿಂದ ಏನೂ ಅನರ್ಥ ಆಗುವುದಿಲ್ಲ ಎಂಬುದೇ ಸಾಮಾನ್ಯ ನಂಬಿಕೆ. ಅಷ್ಟರಲ್ಲಿ ಇಳಿಯಬೇಕಾದವರು ಕಂಡಕ್ಟರ್ ಕೈಗೆ ಒಂದೋ ಎರಡೋ ರೂಪಾಯಿ ತುರುಕಿ ಇಳಿಯುತ್ತಾರೆ. ಅಕಸ್ಮಾತ್ ಕೊಡದೆ ಇಳಿದರೆ ಕಂಡಕ್ಟರ್ ಮಹಾಶಯರು ವಸೂಲಿ ಮಾಡದೆ ಬಿಡುವುದಿಲ್ಲ. ಇದು ಇಲ್ಲಿರೋ ಪದ್ಧತಿ.

ನಮ್ಮ ಮನೆಯಿಂದ ನಗರ ಬಸ್‌ನಿಲ್ದಾಣಕ್ಕೆ ಮೂರು ಕಿಲೋಮೀಟರ್ ದೂರ. ಬಸ್ಸಿನಲ್ಲಿ ಮೂರು ರೂಪಾಯಿ ದರ. ಬಸ್ಸಿನ ಪ್ರಯಾಣ ನನ್ನ ಅಭ್ಯಾಸ. ಹೀಗೊಂದು ದಿನ ಬಸ್ ಹತ್ತಿದೆ. ಬಸ್ಸು ಭರ್ತಿಯಾಗಿತ್ತು. ಯಥಾಪ್ರಕಾರ ಕಂಡಕ್ಟರ್ ಟಿಕೆಟ್ ಕೊಡುತ್ತಾ ಬಂದರು. ಓರ್ವ ಹೆಂಗಸು ಹಣ ಕೊಟ್ಟಳು. ಕಂಡಕ್ಟರ್ ಟಿಕೆಟ್ ನೀಡಲಿಲ್ಲ. ಹಿಂದೆಹಿಂದಕ್ಕೆ ಹೋದ. ಹಣ ಕೊಟ್ಟಾಕೆ 'ಏಯ್ ಇದೇನಕ್ಕ... ನೋಡ್ದ ಈವಯ್ಯ. ದುಡ್ಡ ತಗಂಡ. ತಿಕೀಟು ಕೊಡ್ಲಿಲ್ಲ' ಎಂದು ತನ್ನ ಜೊತೆಗಾತಿಯೊಂದಿಗೆ ಅಸಮಾಧಾನ ವ್ಯಕ್ತಪಡಿಸಿದಳು. 'ಸರ್‍ಯಾಗಿ ತಗಂಡವ್ನೆ?' ಕೇಳಿದಳು ಜೊತೆಗಾತಿ. 'ಹೂಂಕನ. ಹಂಗಿದ್ರೂ ಕೊಟ್ಟಿಲ್ಲ ನೋಡು ಮತ್ತೆ' ಅಂದ್ಳು ಅವ್ಳು. 'ಹಂಗಾರೆ ಅವ್ನನ್ನ ಕೇಳು' ಅಂದ್ಳು ಜೊತೆಗಾತಿ. ಕಂಡಕ್ಟರ್ ಬರುವುದನ್ನೇ ಕಾಯುತ್ತಿದ್ದವಳು 'ತಿಕೇಟ್ನೆ ಕೊಡ್ಲಿಲ್ವಲ್ಲಯ್ಯಾ' ಅಂತ ಕೇಳಿದಳು. ಕಂಡಕ್ಟರ್ ಅವಳ ಮುಖ ನೋಡಿದ. ಟಿಕೇಟು ಕೊಡಲಿಲ್ಲ. ಜೇಬಿನಿಂದ ಒಂದು ರೂಪಾಯಿ ತೆಗೆದು ಅವಳ ಕೈಗೆ ಹಾಕಿದ! 'ಈಗ ಸರಿಯಾಯ್ತು ಕನಕ್ಕ' ಅಂದ್ಳು ಅವ್ಳು.


'ಕೇಳಿದ್ಕೇನೋ ಸರೋಯ್ತು. ಸುಮ್ನಿದ್ರೆ ಮೋಸ ಹೋಯ್ತಿದ್ದಲ್ಲ' ಅಂದ್ಳು ಜೊತೆಗಾತಿ!

ಮದುವೆ ಆದರೂ ಸಂತಾನಭಾಗ್ಯ ಇರಲ್ಲ!

ದೇವರುದಿಂಡರು ಅಂದರೆ ನಮಗೆ ವಿಪರೀತ ಭಯ, ಭಕ್ತಿ. ಅವುಗಳ ಮೇಲಿನ ನಂಬಿಕೆಗೆ ಎಂದೂ ಚ್ಯುತಿ ಬಂದುದಿಲ್ಲ. 'ನಾನೇ ದೇವರು' ಎಂದು ಯಾರಾದರೂ ಹೇಳಿ ಪವಾಡ ಮಾಡಿದರೆ ಹೋಗಿ ಭಕ್ತಿಯಿಂದ ಕಾಲು ಮುಗೀತೀವಿ. ಅವರು ಮಾಡುವುದು ಪವಾಡವಲ್ಲ ಕೇವಲ ಕೈಚಳಕ, ಯಾವುದೇ ಯಕ್ಷಿಣಿಗಾರ ಅದನ್ನ ಮಾಡಬಲ್ಲ ಎಂದರೂ, ಅದನ್ನ ಮಾಡಿ ತೋರಿಸಿದರೂ ನಮ್ಮ ನಂಬಿಕೆ ಮಾತ್ರ ತೃಣ ಮಾತ್ರವೂ ಬದಲಾಗಲ್ಲ. ಅಂತಹ ಒಬ್ಬ ದೇವರು ಇತ್ತೀಚೆಗೆ ಶಿವನ ಪಾದ ಸೇರಿದರು. ಛೇ ಅವರು ಬದುಕಿರುವಾಗಲೇ ನೋಡಲಾಗಲಿಲ್ಲ ಅಂತ ಮನಸ್ಸು ಪರಿತಪಿಸುತ್ತಲೇ ಇತ್ತು.

ನಾವೆಷ್ಟು ಒಳ್ಳೆಯವರು ಎಂದರೆ ಯಾರಾದರೂ ಯಾವುದಾದರೂ ಕ್ಷೇತ್ರದಲ್ಲಿ ಸಾಧನೆ ಮಾಡಿದರೆ ಅವ[ರ] ದೇವರು ಅಂತಾನೆ ಭಾವಿಸ್ತೀವಿ. ದೈವಾಂಶ ಇಲ್ಲದಿ[ದ್ದ] ಇಂತಹ ಸಾಧನೆ ಸಾಧ್ಯವೇ ಇಲ್ಲ ಎಂಬುದು ನ[ಮ್ಮ] ಅಚಲ ವಿಶ್ವಾಸ. ಕ್ರಿಕೆಟ್ಟೇ ನಮ್ಮ ಧರ್ಮ ಎಂದು ನಂಬಿರು[ವ] ದೇಶದ ಪ್ರಜೆ ನಾನು. ಅಂತಹ ದೇವರುಗಳ ದರ್ಶ[ನ] ಪಡೆದು ಪುನೀತನಾಗಬೇಕು ಎಂದು ಐಪಿಎಲ್ ಪಂದ್ಯಾವಳಿಯನ್ನು ಬಿಡದೆ ನೋಡುವ ಅಭ್ಯಾಸ ಬೆಳೆಸಿಕೊಂ[ಡೆ]. ಅಲ್ಲಿ ಎಂತೆಂತಹ ದೇವರು ಪ್ರತ್ಯಕ್ಷರಾಗುತ್ತಾರೋ ಏನೋ, ಮತ್ತೆ ಪರಿತಪಿಸುವಂತಾಗಬಾರದಲ್ಲ ಎಂಬ ಕಾರಣಕ್ಕೆ.

ಈ ಪಂದ್ಯಾವಳಿಯಲ್ಲಿ ಯುವಕ ಯುವತಿಯರು ಹರ್ಷದಿಂದ ಕುಣಿದು ಕುಪ್ಪಳಿಸೋದು, ದುಃಖದಿಂದ ಅಳುವೋರೆ



ಎಚ್.ಎಲ್. ಕೇಶವಮೂರ್ತಿ

ಅಣಕ

ಮಾಡ್ಕೋಳೋದು ನೋಡೋದೆ ಒಂದು ಚಂದ ಬಿ[...] ಅದನ್ನ ನೋಡ್ತಾ ಇದ್ದಾಗ ಕೆಲವು ಚೆಂದುಳ್ಳಿ ಚೆಲುವೆಯ[...] '............ ಮ್ಯಾರಿಮಿ' ಅನ್ನೋ ಫಲಕ ಹಿಡಿ[...] ಅಲವತ್ತುಕೊಳ್ತಿರೋವಾಗ... ಅದ್ಯಾವುದೋ ಜಿಲ್ಲೇ[...] ಅದ್ಯಾವುದೋ ಜಾತಿ ಯುವಕರು ಹೆಣ್ಣುಗಳೇ ಸಿಗ[...] ಮದುವೆಯಾಗದೆ ಮುದುಕರಾಗ್ತಿದಾರೆ ಅಂತ ಓದಿ[...] ನೆನಪಿಗೆ ಬಂತು. ಅಲ್ಲಾ ಆ ಹೈಕಳು ಕ್ರಿಕೆಟಿಗರಾಗಿ[...] ಸುಲಭವಾಗಿ ಹೆಣ್ಣು ಬೇಟೆ ಆಡಬಹುದಿತ್ತಲ್ಲಾ ಅಂತಾ[...] ಅನ್ನಿಸಿತು. ಅದನ್ನ ಸ್ನೇಹಿತನ ಹತ್ತಿರ ಹಂಚಿಕೊಂ[...] 'ಹುಡುಗೀರು ಬಲೆಗೆ ಬಿದ್ರೂಬೀಳಬಹುದು. ಆದರೆ ವ[...] ಮುಂದುವರೆಯುವ ಸಾಧ್ಯತೆ ಇಲ್ಲ' ಅಂದ್ರು. ಅದ[...] ಅಂದದ್ದೆ ಅವರು ಹೇಳಿದ್ದು ಏನು ಅಂದ್ರೆ......

ಮದುವೆಯಾದ ಹುಡುಗಿ ಗಂಡನ ಹತ್ತಿರ ಬರ್[...] ಅನ್ನಿ. ಅವಳು ಅವನ ಯಾವ ಅಂಗಾಂಗಾನು ಮುಟ್ಟೋ[...] ಹಂಗಿಲ್ಲ. ಯಾಕೇಂತೀರಾ ಒಂದೊಂದು ಅಂಗಾಂಗಾನ[...] ಒಬ್ಬೊಬ್ಬರಿಗೆ ಅಡ ಮಡ್ಗಿರ್‍ತಾರೆ. ಮತ್ತು ಬರಿಸೋ ಮು[...] ಕೊಡೋದು ಹಾಗಿರಲಿ. ಕೆನ್ನೆ ಸವರಾನ ಅಂದ್ರೂ ಅ[...] ಯಾವುದೋ ಕಂಪ್ನಿಗೆ ಮಾರಿರ್‍ತಾರೆ. ತೋಳಿಗೆ ಒರಗಿಕೊಳ್[...] ಅಂದ್ರೆ ಅದೂ ಇನ್ನೊಬ್ಬರ ಸ್ವತ್ತು. ಹಾಯಾಗಿ ಎದೆ[...] ಹುದುಗೋಣ ಅಂದ್ರೆ ಅಲ್ಲಿ ಯಾವುದೋ ಕಂಪನಿ ಲಾಂ[...] ರಾರಾಜಿಸುತ್ತಾ ಇರುತ್ತೆ. ಹಿಂಗೆ ತೊಡೆ, ಕಾಲು, ಪಾ[...] ಎಲ್ಲವೂ ಇನ್ನೊಬ್ಬರ ಸ್ವತ್ತು. ವಿಷಯ ಹೀಗಿರುವಾ[...] ವಂಶೋದ್ಧಾರ ಆಗು ಅಂದ್ರೆ ಎಲ್ಲಿ ಆಗುತ್ತೆ ಹೇಳಿ. ಪಾ[...] ಈಪಾಯಿಗಳು ಮದುವೆ ಆದರೂ ಬ್ರಹ್ಮಚಾರಿಗಳೇ[...]

ಪ್ರೇಮ್-ರಕ್ಷಿತಾ ಡೈವೋರ್ಸ್ ಬಗ್ಗೆ ಕಟ್ಟಿಕೊಂಡು ನಮಗೇನಾಗಬೇಕು?

ಅಲ್ಲ ಪ್ರೇಮ್ ಮತ್ತು ರಕ್ಷಿತಾಳ ದಾಂಪತ್ಯ ಜೀವನದಲ್ಲಿನ ಬಿರುಕುಗಳನ್ನು ಕಟ್ಟಿಕೊಂಡು ನಮಗೇನಾಗಬೇಕಿದೆ? ಈಗ ನಮ್ಮ ಬದುಕಿನಲ್ಲಿರುವ ಸಮಸ್ಯೆಗಳೇ ಸಾಕಷ್ಟಿರುವಾಗ ಇವರ ರಗಳೆಯನ್ನೂ ನಮ್ಮ ಮೇಲೆ ಹೇರುತ್ತೀರಲ್ಲ, ಯಾಕೆ?

ಇಂತಹ ವರದಿಗಳನ್ನು ಪ್ರಕಟಿಸಲು ಬೇರೆ ಪತ್ರಿಕೆಗಳಿವೆ. ನಮ್ಮಲ್ಲಿ ಇಂತಹಕ್ಕೆ ಜಾಗ ವೇಸ್ಟ್ ಮಾಡುವುದು ಬೇಡ. ಏನಂತೀರಿ?

- ಶಶಿಕಲಾ, ಬೆಂಗಳೂರು



ನಿಮ್ಮ ಪತ್ರಿಕೆಯಲ್ಲಿ 'ರಕ್ಷಿತಾ-ಪ್ರೇಮ್ ಡೈವೋರ್ಸ್?' ಎಂಬ ವರದಿ ಪ್ರಕಟವಾದ ನಂತರ ಇವರಿಬ್ಬರೂ ವಿವಿಧ ಪತ್ರಿಕೆಗಳಿಗೆ ಸಂದರ್ಶನಗಳನ್ನು ನೀಡಿ "ಇಲ್ಲ, ಇಲ್ಲ, ನಮ್ಮ ನಡುವೆ ಯಾವ ಸಮಸ್ಯೆಯೂ ಇಲ್ಲ, ಇಂತಹ ಗಾಸಿಪ್ ಅದು ಹೇಗೆ ಹುಟ್ಟಿಕೊಂಡಿತೊ ಗೊತ್ತಿಲ್ಲ" ಎಂದೆಲ್ಲ ಹೇಳುವ ಮೂಲಕ ತಮ್ಮ ಹೊಸ ಸಿನಿಮಾ 'ಜೋಗಯ್ಯ'ನಿಗೆ ಸಾಕಷ್ಟು ಪುಕ್ಕಟೆ ಪ್ರಚಾರ ಪಡೆದಿರುವುದನ್ನು ಗಮನಿಸಿದೆ.

ಅದನ್ನೆಲ್ಲ ಕಂಡು ಇದೂ ಕೂಡ ನೌಂಟಕಿ ರಾಜಾ ಪ್ರೇಮ್‌ನ ಗಿಮ್ಮಿಕ್ಕಿರಬಹುದೇ ಎಂದೆನಿಸಿತು ನನಗೆ. ಏಕೆಂದರೆ ಈಗಾಗಲೇ ಪುಕ್ಕಟೆ ಪ್ರಚಾರಕ್ಕಾಗಿ ಈ ಪ್ರೇಮ್ ಏನನ್ನು ಬೇಕಾದರೂ ಮಾಡಲು ಹಿಂಜರಿಯುವವನಲ್ಲ ಎಂಬುದು ಸಾಬೀತಾಗಿದೆ.

- ಎಚ್. ಗಣೇಶ್, ತುಮಕೂರು

ಧನದಾಹ ಮತ್ತು ಅಧಿಕಾರ ದಾಹ ಮನುಷ್ಯನನ್ನು ಎಂತಹ ಕೃತ್ಯಗಳಿಗೆ ತಳ್ಳುತ್ತವೆ ಎಂಬುದಕ್ಕೆ ಕುರುಂಜಿ ಸಾಮ್ರಾಜ್ಯದ ಕುಡಿ ರೇಣುಕಾ ಪ್ರಸಾದ್ ಮಾಡಿಸಿದ ಸುಪಾರಿ ಕೊಲೆಯೇ ಸಾಕ್ಷಿ.

ರೇಣುಕಾ ಪ್ರಸಾದನಿಗೆ ಯಾವುದರಲ್ಲಿ ಕೊರತೆ ಇತ್ತು? ಆತನಿಗೆ ಐಶ್ವರ್ಯ, ಶಿಕ್ಷಣ, ಆಹಾರ ಆಸ್ತಿ, ಉತ್ತಮ ಕುಟುಂಬದ ಹಿನ್ನೆಲೆ ಎಲ್ಲವೂ ಇತ್ತು ಆದರೇನಂತೆ. ಇದೆಲ್ಲ ಆತನಲ್ಲಿ ವಿವೇಕ ಮತ್ತು ವಿನಯವನ್ನು ಹುಟ್ಟುಹಾಕುವ ಬದಲಾಗಿ ಕಿಡಿಗೇಡಿತನವನ್ನೇ ಬೆಳೆಸಿದವು.

ಪರಿಣಾಮವಾಗಿ ಆತನೀಗ ಜೈಲು ಕಂಬಿ ಎಣಿಸುವಂತಾಗಿದೆ. ಇದೆಲ್ಲ ಆತನಿಗೆ ಬೇಕಿತ್ತೇ?

- ಸಂತೋಷ್ ರೈ, ಮಂಗಳೂರು

ನಾನು ಈಗ ತಾನೆ ಪ್ರಥಮ ಪಿಯು ಕ್ಲಾಸಿಗೆ ಸೇರಿದ್ದು ಕಳೆದ ಮೂರು ವರ್ಷಗಳಿಂದ ನಿಮ್ಮ ಪತ್ರಿಕೆಯನ್ನು ಓದುತ್ತಿದ್ದೇನೆ.

ನಮ್ಮ ತಂದೆಯವರಂತೂ ಮೊದಲಿನಿಂದಲೂ ಪಿ.ಲಂಕೇಶರ ಅಭಿಮಾನಿಯಾಗಿದ್ದು ಬಹಳ ವರ್ಷಗಳಿಂದ ಪತ್ರಿಕೆಯ ಓದುಗರಾಗಿದ್ದಾರೆ. ಅವರಿಂದಲೇ ನಾನೂ ಪತ್ರಿಕೆಯನ್ನು ಓದುವುದನ್ನು ಅಭ್ಯಾಸ ಮಾಡಿಕೊಂಡಿದ್ದೇನೆ.

ನಮ್ಮಿಬ್ಬರಿಗೂ ಲಂಕೇಶರ ಬರಹಗಳೆಂದರೆ ತುಂಬಾ ಇಷ್ಟ. ಅದರಲ್ಲೂ ಪತ್ರಿಕೆಯ ನಿಲುವುಗಳು, ಚಿಂತನೆಗಳು ಮತ್ತು ಬರಹದ ಶೈಲಿ ನಮಗೆ ಹಿಡಿಸುತ್ತಿದೆ.

ಇತ್ತೀಚಿನ ಸಂಚಿಕೆಯೊಂದರಲ್ಲಿ ನಾಗಾರ್ಜುನ ಥರ್ಮಲ್ ಪವರ್ ಪ್ರಾಜೆಕ್ಟ್ ಬಗ್ಗೆ ಪ್ರಕಟವಾದ ವರದಿಯು ಇಲ್ಲಿನ ಢೋಂಗಿ ರಾಜಕಾರಣಿಗಳ ಇಬ್ಬಂದಿತನವನ್ನು ಮತ್ತು ಈ ಯೋಜನೆಯಿಂದಾಗುವ ಅನಾಹುತಗಳನ್ನು ಬಯಲುಗೊಳಿಸಿತು. ಇಂತಹ ವರದಿಗಳು ಹೆಚ್ಚು ಪ್ರಕಟಗೊಂಡು ಜನರಲ್ಲಿ ಅರಿವನ್ನು ಮೂಡಿಸುವಂತಾಗಲಿ.

ನಾವು ಈ ಯೋಜನೆಯ ಹತ್ತಿರದಲ್ಲೇ ವಾಸಿಸುತ್ತಿದ್ದ ಇದು ಹೊರಚೆಲ್ಲುವ ಹಾರು ಬೂದಿಯಿಂದ ಬಹಳ ಕಷ್ಟಗಳನ್ನು ದಿನನಿತ್ಯ ಎದುರಿಸುತ್ತಿದ್ದೇವೆ.


ಹಾಗೆಯೇ ಗೌರಿ ಅವರು ಬರೆದ 'ಪಾಕಿಸ್ತಾನ ಹಳಸಿತ್ತು, ಅಮೆರಿಕ ಹಸಿದಿತ್ತು' ಮತ್ತು ಶಿವಸುಂದರ್ ಅವರ 'ಒಸಾಮಾ-ಒಬಾಮಾ' ಲೇಖನಗಳೂ ನಮಗೆ ಇಷ್ಟವಾದವು.

- ಸಾವಿಯೋ ಬರ್ಬೋಜಾ, ಉಡುಪಿ

ಹೊಸಾ ನೀತಿ ಹಳೇ ಪಜೀತಿ

...ವಿಹಳ ಸಮಯದಿಂದ ನೆನೆಗುದಿಗೆ ಬಿದ್ದಿದ್ದ 'ಚಲನಚಿತ್ರ ಹೊಸನೀತಿ'ಯನ್ನು ಸರ್ಕಾರ ಕೊನೆಗೂ ಜಾರಿಗೆ ತರುತ್ತಿದೆ.

ಹೊಸ ನೀತಿಯಿಂದಾಗಿ ಮುಖ್ಯವಾಗಿ ಲಾಭವಾಗುವುದು ಕಲಾತ್ಮಕ ಚಿತ್ರಗಳ ವರ್ಗದ ಜನರಿಗೆ. ಯಾಕೆಂದರೆ 'ಚಲನಚಿತ್ರ ನೀತಿ'ಯಲ್ಲಿ ಸರ್ಕಾರ ಅನೇಕ ಹೊಸ ಪ್ರಶಸ್ತಿಗಳನ್ನು ಘೋಷಿಸಿದೆ. ಮುಖ್ಯವಾಗಿ ಮೊದಲ ಬಾರಿ ನಿರ್ದೇಶನ ಮಾಡಿದವರಿಗೆ ಒಂದು ಪ್ರಶಸ್ತಿ, ಕನ್ನಡ ನಾಡು ನುಡಿ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಚಿತ್ರಕ್ಕೊಂದು ಪ್ರಶಸ್ತಿ, ಕಾದಂಬರಿ ಆಧಾರಿತ ಚಿತ್ರಕ್ಕೊಂದು ಪ್ರಶಸ್ತಿ ಹಾಗೆಯೇ ಬಾಕ್ಸಾಫೀಸ್‌ನಲ್ಲಿ ತುಂಬಿದ ಪ್ರದರ್ಶನ ಕಂಡು ಪ್ರೇಕ್ಷಕರಿಗೆ ಮನರಂಜನೆ ನೀಡಿದ ಚಿತ್ರಕ್ಕೆ ಅತ್ಯುತ್ತಮ ಮನರಂಜನಾತ್ಮಕ ಪ್ರಶಸ್ತಿ.... ಹೀಗೆ ಹತ್ತು ಹಲವು ಹೊಸ ಪ್ರಶಸ್ತಿಗಳನ್ನು ಸರ್ಕಾರ ಘೋಷಿಸಿದೆ. ಇದರೊಂದಿಗೆ ಸಿನಿಮಾಕ್ಕೆ ಸಂಬಂಧಪಟ್ಟ ಅತ್ಯುತ್ತಮ ಪುಸ್ತಕಕ್ಕೂ ಒಂದು ಪ್ರಶಸ್ತಿ ಎಂದು ಘೋಷಿಸಿದೆ. ಒಟ್ಟಾರೆ ಹೇಳುವುದಾದರೆ ರಾಜ್ಯ ಸರ್ಕಾರವು ಕೇಂದ್ರದ ಮಾದರಿಯಲ್ಲೇ ಪ್ರಶಸ್ತಿಗಳನ್ನು ವಿತರಿಸಲು ಹೊರಟಿದೆ.




ಇದೆಲ್ಲವೂ ಸ್ವಾಗತಾರ್ಹ. ಇದರ ಜೊತೆಗೆ ಆಯಾ ವರ್ಷದ ಪ್ರಶಸ್ತಿಗಳನ್ನು ಆಯಾ ವರ್ಷವೇ ಆಯ್ಕೆ ಮಾಡಿ, ಆಯಾ ವರ್ಷವೇ ವಿತರಣೆ ಮಾಡುವತ್ತ ಕೂಡಾ ಸರ್ಕಾರ ಗಮನಹರಿಸಬೇಕಾಗಿದೆ. ಈಗಾಗಲೇ ಕಳೆದ ವರ್ಷದ ಪ್ರಶಸ್ತಿಗಳನ್ನು ಆಯ್ಕೆ ಮಾಡಲು ಭಾರತಿ ವಿಷ್ಣುವರ್ಧನ್ ನೇತೃತ್ವದಲ್ಲಿ ಒಂದು ಕಮಿಟಿಯನ್ನು ರಚಿಸಿದೆ. ಈ ಮಧ್ಯೆ ದಿಢೀರನೇ ಎರಡು ವರ್ಷದ ಹಿಂದಿನ ಪ್ರಶಸ್ತಿ ವಿತರಣಾ ಸಮಾರಂಭವನ್ನು ಸರ್ಕಾರ ಹಮ್ಮಿಕೊಂಡಿದೆ.

...ದುವ ಶನಿವಾರ 2008-09ರ ಸಾಲಿನ ಪ್ರಶಸ್ತಿಯನ್ನು ಕೋರಮಂಗಲದ ಒಳಾಂಗಣ ಕ್ರೀಡಾಂಗಣದಲ್ಲಿ ಸರ್ಕಾರ ವಿತರಿಸಲಿದೆ. ಈ ...ಘೋಷಣೆಯಾಗಿಯೇ ಎರಡು ವರ್ಷಗಳು ಸಂದುಹೋಗಿವೆ. ಈ ಚಿತ್ರಗಳು ನಿರ್ಮಾಣಗೊಂಡಿದ್ದು ಮೂರು ವರ್ಷಗಳ ಹಿಂದೆ. ...ಪ್ರಶಸ್ತಿ ಪಡೆಯುವ ಹುಮ್ಮಸ್ಸು, ಉತ್ಸಾಹ ಅವರಿಗಿರುವುದೂ ಇಲ್ಲ. ಇದೆಲ್ಲವೂ ಬಿಸಿಬಿಸಿಯಾಗಿ ಒಂದೇ ವರ್ಷದಲ್ಲಿ ನಡೆದುಹೋದರೆ ...ಚೆನ್ನಾಗಿರುತ್ತದೆ.

...ದ್ದ ಸರ್ಕಾರದಂತೆ ಪ್ರಶಸ್ತಿಗೆ ಸಿನಿಮಾ ಆಹ್ವಾನ, ಆಯ್ಕೆಯ ಪ್ರಕ್ರಿಯೆ ಮತ್ತು ವಿತರಣಾ ...ರಂಭಗಳ ದಿನಾಂಕಗಳೆಲ್ಲವೂ ಮೊದಲೇ ನಿಗದಿಯಾದರೆ ಒಳ್ಳೆಯದು. ಆದರೆ ಇಲ್ಲಿ ಪ್ರಶಸ್ತಿ ...ಭ ನಡೆಯುವುದೇ ಮುಖ್ಯಮಂತ್ರಿಗಳ ಅನುಕೂಲಕ್ಕೆ ತಕ್ಕಂತೆ. ಒಂದೋ ಅವರ ಜಿಲ್ಲೆಯಲ್ಲೇ ...ಪ್ರಿಯ ಜಾತ್ರೆ ನಡೆಯುತ್ತದೆ. ಇಲ್ಲದಿದ್ದರೆ ಮುಖ್ಯಮಂತ್ರಿಯ ಜನಪ್ರಿಯತೆ ಕುಂದಿಹೋಗಿರುವಾಗ ತಳಕುಬುಳುಕಿನ ಸಮಾರಂಭವನ್ನು ದಿಢೀರನೇ ಏರ್ಪಡಿಸಲಾಗುತ್ತದೆ.

...ಗ ಶನಿವಾರದಂದು ತರಾತುರಿಯಲ್ಲಿ ಪ್ರಶಸ್ತಿ ವಿತರಣಾ ಸಮಾರಂಭ ಯಾಕೆ ಹಮ್ಮಿಕೊಂಡಿದ್ದಾರೆ ನಿಮಗೆ ಸುಲಭವಾಗಿ ಅರ್ಥವಾಗಿರಬೇಕಲ್ಲವೇ? ❧

ಇದು ಸಾಧುವೇ?




ನಟ, ಸಂಗೀತ ನಿರ್ದೇಶಕ, ನಿರ್ದೇಶಕ ಎನಿಸಿಕೊಂಡಿರುವ ಸಾಧುಕೋಕಿಲ ಮೊನ್ನೆ ಹೊಸ ಟ್ರೆಂಡ್ ಒಂದನ್ನು ಹುಟ್ಟುಹಾಕಿದ್ದಾರೆ. ಈ ಹಿಂದೆ ಹಿಂದಿಯ ಟ್ಯೂನ್‌ಗಳನ್ನು ಭಟ್ಟಿ ಇಳಿಸುವುದರಲ್ಲಿ ಎಕ್ಸ್‌ಪರ್ಟ್ ಆಗಿದ್ದ ಸಾಧು ಆ ನಂತರ ರಿಮೇಕ್ ಚಿತ್ರ ಮಾಡುವುದರಲ್ಲೂ ತನ್ನ ಚಾಕಚಕ್ಯತೆಯನ್ನು ಪ್ರದರ್ಶಿಸಿದ್ದರು. ಮೊನ್ನೆ ಇದಕ್ಕಿಂತಲೂ ಒಂದು ಹೆಜ್ಜೆ ಮುಂದೆಹೋದ ಸಾಧುಕೋಕಿಲ ತನ್ನ ಪರಭಾಷಾ ಪ್ರೇಮವನ್ನು ತನ್ನ ಹೊಸ ಚಿತ್ರದ ಮುಹೂರ್ತದ ಸಂದರ್ಭದಲ್ಲಿ ಪ್ರದರ್ಶಿಸಿದರು.

ಸಾಧು ನಿರ್ದೇಶನದ ಹೊಸ ಚಿತ್ರದ ಹೆಸರು 'ಅನಾರ್ಕಲಿ'. ಹಾಗಂತ ಇದು ಹಿಂದಿ 'ಅನಾರ್ಕಲಿ' ಚಿತ್ರದ ರಿಮೇಕ್ ಅಲ್ಲವಂತೆ. ಆದರೆ ಮುಹೂರ್ತದ ದಿನದಂದು ಹಿಂದಿಯ 'ಅನಾರ್ಕಲಿ' ಚಿತ್ರದ 'ಯೇ ಜಿಂದಗೀ....' ಹಾಡಿನ ಮೇಲೆ ಚಿತ್ರದ ಮೊದಲ ದೃಶ್ಯವನ್ನು ಚಿತ್ರಿಸಿಕೊಂಡರು.

ಸಾಮಾನ್ಯವಾಗಿ ರಿಮೇಕ್ ಚಿತ್ರವಾದರೂ ಮುಹೂರ್ತದ ಶಾಟ್‌ಅನ್ನು ನಿರ್ದೇಶಕರು ಅತ್ಯಂತ ಜಾಣ್ಮೆಯಿಂದ ಆಯ್ಕೆ ಮಾಡುತ್ತಾರೆ. ಕನಿಷ್ಠ ನಾಯಕ-ನಾಯಕಿಯನ್ನು ಹುರಿದುಂಬಿಸುವ ಅಥವಾ ಕನ್ನಡ ನಾಡು-ನುಡಿಯ ಬಗ್ಗೆ ಡೈಲಾಗನ್ನು ಹೊಡೆಯುವ ದೃಶ್ಯವನ್ನು ಚಿತ್ರೀಕರಿಸುತ್ತಾರೆ. ಆದರೆ ಹಿಂದಿ ಚಿತ್ರದ ಹಾಡಿನ ಮೇಲೆ ಕನ್ನಡ ಚಿತ್ರವೊಂದು ಮುಹೂರ್ತ ಕಂಡಿರುವುದು ಇದೇ ಮೊದಲು. ಕನಿಷ್ಠ ಮುಹೂರ್ತದ ಸಂದರ್ಭದಲ್ಲಾದರೂ ನಮ್ಮ ಕನ್ನಡದ ಕುವರ ಸಾಧು ಕೋಕಿಲನಿಗೆ ಕನ್ನಡ ಹಾಡಿನ ನೆನಪಾಗದಿದ್ದದ್ದು ವಿಪರ್ಯಾಸ.

ಮುಹೂರ್ತದ ಸಂದರ್ಭದಲ್ಲೇ ಬಂದ ಗಣ್ಯ ಅತಿಥಿ ಮಹಾಶಯರುಗಳ ಎದುರಲ್ಲೇ ಬಹಿರಂಗವಾಗೇ ಹೀಗೆ ಮಾಡಿರುವ ಸಾಧು ಇನ್ನು ಚಿತ್ರ ಮುಗಿಯುವಷ್ಟರಲ್ಲಿ ಇನ್ನೇನೆಲ್ಲಾ ಮಾಡುತ್ತಾರೋ ನೋಡಬೇಕು. ಅಂದಹಾಗೆ ಸಾಧು ಕೋಕಿಲ ನಿರ್ದೇಶನದ ಈ ಚಿತ್ರದಲ್ಲಿ ದಿಗಂತ್ ನಾಯಕ. ಈತನಿಗೆ ಜೋಡಿಯಾಗಿ ಪ್ರಜ್ಞಾ ಮತ್ತು ರವಮ್ಯಾ ಬಾರ್ನೆ ನಟಿಸುತ್ತಿದ್ದಾರೆ. ❧



ಕ್ರೇಜಿಸ್ಟಾರ್ ಕಷ್ಟ ಸುಖ

ಈ ಬಾರಿಯೂ ರವಿಚಂದ್ರನ್ ಸದ್ದುಗದ್ದಲವಿಲ್ಲದೆ ತನ್ನ ಹುಟ್ಟು ಹಬ್ಬವನ್ನಾಚರಿಸುವಂತೆ ಕಾಣಿಸುತ್ತಿದೆ. ಇದಕ್ಕೆ ಕಾರಣ ಅವರ ಮಹತ್ವಾಕಾಂಕ್ಷೆಯ 'ಮಂಜಿನ ಹನಿ' ಚಿತ್ರ ಇನ್ನೂ ಸಂಪೂರ್ಣವಾಗದಿರುವುದು. ವಾಸ್ತವವಾಗಿ ತಮ್ಮ ಹುಟ್ಟುಹಬ್ಬದಂದೇ 'ಮಂಜಿನ ಹನಿ' ಬಿಡುಗಡೆ ಮಾಡಬೇಕೆಂಬ ಉದ್ದೇಶದಿಂದ ಕ್ರೇಜಿಸ್ಟಾರ್ ಕಳೆದೆರಡು ತಿಂಗಳಿಂದ ಡೇ & ನೈಟ್ ಕೆಲಸ ಮಾಡಿದ್ದರು. ಆದರೆ ಇನ್ನೂ ಕ್ಲೈಮ್ಯಾಕ್ಸ್ ಭಾಗ ಚಿತ್ರೀಕರಣಗೊಂಡಿಲ್ಲದ ಕಾರಣ ಚಿತ್ರ ಜುಲೈನಲ್ಲಿ ಬಿಡುಗಡೆಯಾಗುವ ಸಾಧ್ಯತೆ ಇದೆ. ಆದ್ದರಿಂದ ರವಿಚಂದ್ರನ್ ಅಭಿಮಾನಿಗಳ ಪಾಲಿಗೆ ಈ ಸಾಲಿನ ಹುಟ್ಟುಹಬ್ಬವೂ ಸಪ್ಪೆಯಾಗಲಿದೆ.

'ಮಂಜಿನ ಹನಿ' ಚಿತ್ರಕ್ಕೆ ಕಳೆದ ಮೂರು ವರ್ಷಗಳಿಂದ ಚಿತ್ರೀಕರಣ ನಡೆಯುತ್ತಲೇ ಇದೆ. ಈ ಚಿತ್ರ ಯಶಸ್ವಿಯಾಗಲೇಬೇಕು ಎಂದು ಹಠ ಹಿಡಿದಿರುವ ರವಿಚಂದ್ರನ್ ತನ್ನ ಸರ್ವಸ್ವವನ್ನು ಈ ಚಿತ್ರಕ್ಕೆ ಧಾರೆಯೆರೆದಿದ್ದಾರೆ. ಕಳೆದ ಹಲವಾರು ವರ್ಷಗಳಿಂದ ತಾರಾವರ್ಚಸ್ಸನ್ನು ಕಳೆದುಕೊಂಡಿರುವ, ಗೆಲುವಿನ ಮರೀಚಿಕೆಯಲ್ಲಿ ಸಿಲುಕಿಕೊಂಡಿರುವ ರವಿಗೆ ಈ ಚಿತ್ರ ಪುನರ್ಜನ್ಮ ನೀಡಲಿ.

ದಾಂಪತ್ಯ ಜೀವನಕ್ಕೆ ಕಾಲಿಟ್ಟ ಇಪ್ಪತ್ತೈದನೇ ವರ್ಷ ಮತ್ತು ಐವತ್ತನೇ ಹುಟ್ಟುಹಬ್ಬವನ್ನು ಆಚರಿಸುತ್ತಿರುವ ಕ್ರೇಜಿಸ್ಟಾರ್‌ಗೆ ಇದೇ ನಮ್ಮ ಶುಭಹಾರೈಕೆ.

• ಶೆಣೈ



ಹೈವೇಗಿಳಿದ ಪುಟ್ಟಕ್ಕ!

ಹನ್ನೆರಡು ವರ್ಷಗಳ ಬಳಿಕ

'ಪುಟ್ಟಕ್ಕನ ಹೈವೇ' ಎಂಬ ಚಿತ್ರ ಈ ವಾರ ತೆರೆ ಕಾಣಲಿದೆ. ಇದನ್ನು ನಿರ್ದೇಶಿಸಿರುವವರು ಬಿ.ಸುರೇಶ್. ಕಳೆದ ವರ್ಷ ಇವರು ಪ್ರಕಾಶ್ ರೈ ಜೊತೆ ಸೇರಿಕೊಂಡು 'ನಾನೂ ನನ್ನ ಕನಸು' ಚಿತ್ರವನ್ನು ನಿರ್ಮಿಸಿದ್ದರು. ಅದು ಪ್ರಕಾಶ್ ರೈ ಅವರ ಚೊಚ್ಚಲ ನಿರ್ದೇಶನದ ಚಿತ್ರವಾಗಿತ್ತು. ಈ ಬಾರಿ ಸುರೇಶ್ ನಿರ್ದೇಶನದ ಜವಾಬ್ದಾರಿಯನ್ನು ತಮ್ಮ ಹೆಗಲಿಗೇರಿಸಿಕೊಂಡಿದ್ದರು. ಹಾಗಂತ ಸುರೇಶ್ ಪಾಲಿಗೆ ಇದು ಚೊಚ್ಚಲ ನಿರ್ದೇಶನದ ಚಿತ್ರವೇನೂ ಅಲ್ಲ, ಅವರು ಈಗಾಗಲೇ ಕೆಲವು ಸಿನಿಮಾಗಳನ್ನು, ಹತ್ತಾರು ನಾಟಕಗಳನ್ನು ಮತ್ತು ಹಲವಾರು ಧಾರಾವಾಹಿಗಳನ್ನೂ ನಿರ್ದೇಶಿಸಿದ್ದಾರೆ.

ಆದರೆ ಸುರೇಶ್ ಮತ್ತು ಪ್ರಕಾಶ್ ಇಬ್ಬರೂ ಆಪ್ತಮಿತ್ರರು. ಹೀಗಾಗಿ ಒಬ್ಬರಿಗೊಬ್ಬರು ಸ್ನೇಹಹಸ್ತ ಚಾಚಿಕೊಂಡು ತಮ್ಮ ತಮ್ಮ ಅಭಿರುಚಿಗೆ ತಕ್ಕಂತೆ ಚಿತ್ರ ನಿರ್ಮಾಣ, ನಿರ್ದೇಶನಗಳನ್ನು ಮಾಡುತ್ತಿದ್ದಾರೆ.

'ಪುಟ್ಟಕ್ಕನ ಹೈವೇ' ಚಿತ್ರದ ಬಗ್ಗೆ ಹೇಳುವುದಾದರೆ ಇದು ಸುಮಾರು ಒಂದು ದಶಕದ ಹಿಂದೆ ನಾಗತಿಹಳ್ಳಿಯವರು ಬರೆದ ಒಂದು ಸಣ್ಣ ಕಥೆಯನ್ನಾಧರಿಸಿದ ಚಿತ್ರ. ಅಂದಿನಿಂದಲೂ ಈ ಕಥೆಯ ಬಗ್ಗೆ ಸುರೇಶ್‌ಗೆ ಎಲ್ಲಿಲ್ಲದ ವ್ಯಾಮೋಹ. ಹಿಂದೆ ಒಂದೆರಡು ಬಾರಿ ಈ ಚಿತ್ರ ಸೆಟ್ಟೇರುವ ಬಗ್ಗೆ ಸುದ್ದಿಯೂ ಬಂದಿತ್ತು, ಆದರೆ ಸುರೇಶ್ ಕನಸು ನನಸಾಗಲು ಎಂಟು ವರ್ಷಗಳ ಸುದೀರ್ಘವಾದ ಕಾಲ ತಗುಲಿದೆ. ಈ ಎಂಟು ವರ್ಷಗಳ ಅವಧಿಯಲ್ಲಿ ಸಮಯ ಸಿಕ್ಕಾಗಲೆಲ್ಲಾ ಚಿತ್ರಕಥೆ ಮತ್ತು ಸಂಭಾಷಣೆಯನ್ನು ತಿದ್ದಿ ತೀಡುವ ಹವ್ಯಾಸವನ್ನು ಸುರೇಶ್ ಇಟ್ಟುಕೊಂಡಿದ್ದರಂತೆ. ಅದರಂತೆ ಅವರೇ ಹೇಳುವ ಪ್ರಕಾರ ಒಟ್ಟು ಹನ್ನೆರಡು ಬಾರಿ ಚಿತ್ರಕಥೆಯನ್ನು ಬದಲಾಯಿಸಿದ್ದಾರೆ. ಹನ್ನೆರಡು ವರ್ಷಗಳ ವನವಾಸದ ನಂತರ ಪುಟ್ಟಕ್ಕ ಈಗ ಬೆಳ್ಳಿತೆರೆಗೆ ಬಂದಿದ್ದಾಳೆ.

ಕಥಾಸಾರಾಂಶವಿಷ್ಟೆ: ಸರ್ಕಾರ ಹೈವೇಯನ್ನು ಮಾಡುವಾಗ ಪುಟ್ಟಕ್ಕ ಎಂಬ ಬಡ ಮಹಿಳೆ ತನ್ನ ಜಮೀನನ್ನು ಕಳೆದುಕೊಂಡು ಆಕೆ ಪಡುವ ಆತಂಕ ಮತ್ತು ಕಷ್ಟಗಳೇ ಚಿತ್ರದ ಜೀವಾಳ. ಈ ಒಂದು ಸಮಸ್ಯೆಗೆ ಆಕೆಯ ಸುತ್ತಮುತ್ತಲಿನ ಸಂಬಂಧಿಕರು, ಅಧಿಕಾರಿಗಳು, ಊರ ಜಮೀನುದಾರರು ಹೇಗೆ ಸ್ಪಂದಿಸುತ್ತಾರೆ, ಕೊನೆಗೆ ಅವರೆಲ್ಲರೂ ಹೇಗೆ ಅವಕಾಶವಾದಿಗಳಾಗಿ ವ್ಯವಸ್ಥೆಯ ಜೊತೆಗೆ ಕೈಜೋಡಿಸುತ್ತಾರೆ ಎಂಬುದನ್ನು ನಿರ್ದೇಶಕ ಸುರೇಶ್ ಅತ್ಯಂತ ಮಾರ್ಮಿಕವಾಗಿ ಮತ್ತು ವ್ಯಂಗ್ಯವಾಗಿ ನಿರೂಪಿಸಿದ್ದಾರೆ.

ಅಭಿವೃದ್ಧಿಯ ಹೆಸರಿನಲ್ಲಿ ಆಗುವ ಕೆಲಸ ಕಾರ್ಯಗಳಲ್ಲಿ ಬಡವರು ಪಡುವ ಕಷ್ಟಕಾರ್ಪಣ್ಯಗಳ ಬಗ್ಗೆ ನಿರ್ದೇಶಕ ಹೆಚ್ಚು ಒತ್ತು ನೀಡಿ ಬಡವರ ಪಕ್ಷಪಾತಿಯಾಗಿ ಕೆಲಸ ಮಾಡಿದ್ದಾರೆ. ಇಂತಹ ಕಥಾವಸ್ತುವನ್ನು ಆಯ್ಕೆ ಮಾಡುವಾಗ ಅದು ಅಭಿವೃದ್ಧಿ ವಿರೋಧಿಯಾಗಿ ಕಾಣಿಸಿಕೊಳ್ಳುವ ಅಪಾಯವೂ ಇದೆ. ಆದರೆ ಅಂತಹ ಇಕ್ಕಟ್ಟಿಗೆ ಸಿಗದಂತೆ ಸುರೇಶ್ ಜಾಣ್ಮೆಯಿಂದ ಕಥೆಯನ್ನು ನಿರೂಪಿಸಿದ್ದಾರೆ.


ಆದರೂ ಇಡೀ ಚಿತ್ರ ನೋಡಿದ ನಂತರ ನಾಯಕಿ ಶೃತಿಯ ಪಾತ್ರವನ್ನು ಇನ್ನಷ್ಟು ಸಬಲೆಯಾಗಿ ತೋರಿಸಬಹುದಿತ್ತೋ ಎಂದೆನಿಸುತ್ತದೆ. ಪ್ರಕಾಶ್ ರೈಯಂತ ಅದ್ಭುತ ಕಲಾವಿದನಿಗೆ ಒಂದು ಮಾಮೂಲಿ ಪಾತ್ರವನ್ನು ನೀಡಿ ನಿರ್ದೇಶಕ ನಿರಾಶೆಗೊಳಿಸಿದ್ದಾರೆ. ಚಿತ್ರದ ಛಾಯಾಗ್ರಾಹಕ ರಾಮಚಂದ್ರ, ಸಂಗೀತ ನಿರ್ದೇಶಕ ಹಂಸಲೇಖ ಮತ್ತು ಸಂಕಲನಕಾರ ಜಾನಿ ಹರ್ಷ ಇವರೆಲ್ಲಾ ಚಿತ್ರದ ಗುಣಮಟ್ಟವನ್ನು ವೃದ್ಧಿಸುವಲ್ಲಿ ಸಫಲರಾಗಿದ್ದಾರೆ.



ಈ ಚಿತ್ರದಲ್ಲಿ ಮಸಾಲೆ, ಮನರಂಜನೆಗಿಂತ ಬಡವರ ಅಸಹಾಯಕತೆ ಮತ್ತು ಅವರು ಎದುರಿಸುವ ಸೂಕ್ಷ್ಮತೆಗಳಿಗೆ ನಿರ್ದೇಶಕ ಒತ್ತು ನೀಡಿದ್ದಾರೆ. ಹೀಗಾಗಿ ಇದು ಎಲ್ಲಾ ವರ್ಗದ ಜನರಿಗೆ ಇಷ್ಟವಾಗಲಾರದು. ಆದರೂ ಈ ಸಿನಿಮಾ ನಮ್ಮ ಸಮಾಜ ಮತ್ತು ವ್ಯವಸ್ಥೆಗೆ ಹಿಡಿದ ಕೈಗನ್ನಡಿ ಎಂಬ ಕಾರಣಕ್ಕಾಗಿ ನೋಡಬಹುದು.

• ಶೆಣೈ

ಸುರೇಶ್‌ಗೆ ಶುಭಾಷಯ



ಪ್ರಗತಿಪರ ಚಿಂತನೆಗಳನ್ನು ಒಳಗೊಂಡ, ಕ್ರಿಯಾಶೀಲ ನಿರ್ದೇಶಕ ಬಿ. ಸುರೇಶ್. ಏಕಕಾಲಕ್ಕೆ ಕಿರುತೆರೆ, ಹಿರಿತೆರೆ ಮತ್ತು ರಂಗಭೂಮಿಗಳಲ್ಲಿ ನಟನೆ ಮತ್ತು ನಿರ್ದೇಶನದ ಮೂಲಕ ತಮ್ಮದೇ ಆದ ಛಾಪು ಮೂಡಿಸುತ್ತಾ ಬಂದಿರುವ ಸುರೇಶ್ ಪ್ರತಿಭಾವಂತ. ಈಗ ಸುರೇಶ್ ನಿರ್ದೇಶಿಸಿ, ನಿರ್ಮಿಸಿರುವ 'ಪುಟ್ಟಕ್ಕನ ಹೈವೇ'ಗೆ 'ಅತ್ಯುತ್ತಮ ಸಾಮಾಜಿಕ ಪರಿಣಾಮ ಬೀರುವ ಚಿತ್ರ' ಎಂಬ ರಾಷ್ಟ್ರಪ್ರಶಸ್ತಿ ದೊರೆತಿದೆ.

ಬಿ. ಸುರೇಶ್ ತಮ್ಮ ಸಾಂಸ್ಕೃತಿಕ ನಡಿಗೆ ಮತ್ತಷ್ಟು 'ಹೈವೇ'ಗಳನ್ನು ರೂಪಿಸಿಕೊಳ್ಳಲಿ. ಅಭಿನಂದನೆಗಳು...

ಸಖತ್ ಹಾಟ್ ಮಗಾ!

ಗೋಲ್ಡನ್ ಸ್ಟಾರ್ ಗಣೇಶ್ ತಮ್ಮ ಚೊಚ್ಚಲ ನಿರ್ದೇಶನದ 'ಕೂಲ್' ಚಿತ್ರವನ್ನು ಬಿಡುಗಡೆ ಮಾಡಿದ ನಂತರ ಸಿಕ್ಕಾಪಟ್ಟೆ 'ಬಿಸಿ'ಯಾಗಿದ್ದಾನೆ. ಇದಕ್ಕೆ ಕಾರಣ: ಅವನ ಚಿತ್ರಕ್ಕೆ ಪ್ರೇಕ್ಷಕ ಮತ್ತು ಅಭಿಮಾನಿಗಳಿಂದ ಸಿಕ್ಕಿರುವ 'ಕೂಲ್' ಪ್ರತಿಕ್ರಿಯೆ!

ಇತ್ತೀಚಿನ ದಿನಗಳಲ್ಲಿ ಕ್ರಿಕೆಟ್ ಮ್ಯಾಚ್ ಬಿಟ್ಟರೆ ಈ ಚಿತ್ರದ ಯಶಸ್ಸು ಮತ್ತು ಅಪಯಶಸ್ಸಿನ ಬಗ್ಗೆ ಇಡೀ ಗಾಂಧಿನಗರ ಅತ್ಯಂತ ಕುತೂಹಲದಿಂದ ಎದುರುನೋಡುತ್ತಿದ್ದದ್ದಕ್ಕೆ ಕಾರಣ 'ಕೂಲ್' ಬಗ್ಗೆ ಆರಂಭದಲ್ಲೇ ಹುಟ್ಟಿದ್ದ ವಿವಾದ.

ಈ ಚಿತ್ರಕ್ಕೆ ನಿರ್ದೇಶಕ ಮುಸ್ಸಂಜೆ ಮಹೇಶ್ ಆರಂಭದಲ್ಲಿ ಆಯ್ಕೆಯಾಗಿದ್ದರು. ಒಂದೆರಡು ದಿನಗಳ ಚಿತ್ರೀಕರಣದ ನಂತರ ಅದೇಕೋ ಮಹೇಶ್‌ಗೂ ಗಣೇಶ್‌ಗೂ ಭಿನ್ನಾಭಿಪ್ರಾಯವುಂಟಾಗಿ ನಿರ್ದೇಶಕ ಮಹೇಶ್ ಆ ಚಿತ್ರದಿಂದ ಹೊರಬಂದರು. ಆ ಸಂದರ್ಭದಲ್ಲಿ ನಿರ್ಮಾಪಕಿ ಶಿಲ್ಪಾ ಗಣೇಶ್ ನಿರ್ದೇಶಕನ ಬಗ್ಗೆ ತುಚ್ಛವಾಗಿ ಮಾತನಾಡಿದ್ದಕ್ಕೆ ಇಡೀ ನಿರ್ದೇಶಕರ ಸಂಘ ಒಗ್ಗಟ್ಟಿನಿಂದ ಗಣೇಶ್ ವಿರುದ್ಧ ತಿರುಗಿಬಿದ್ದಿತ್ತು. ಆಗ ವಿಧಿ ಇಲ್ಲದೆ ಸ್ವತಃ ಗಣೇಶ್ ನಿರ್ದೇಶನದ ಕೆಲಸಕ್ಕೆ ಇಳಿದಿದ್ದರು.



ಇದಕ್ಕಿಂತ ಮೊದಲು ಗಣೇಶ್ ಅನೇಕ ನಿರ್ಮಾಪಕರ ಜೊತೆಗಿನ ಸಂಬಂಧವನ್ನು ಕೆಡಿಸಿಕೊಂಡಿದ್ದ. ಸಿನಿಮಾ ಬಿಡುಗಡೆಯಾಗುವ ಸಂದರ್ಭದಲ್ಲಿ ಪ್ರಚಾರ ಕಾರ್ಯಗಳಲ್ಲಿ ಭಾಗವಹಿಸದೆ ನಿರ್ಮಾಪಕರನ್ನು ಇಕ್ಕಟ್ಟಿಗೆ ದೂಡುವ ಗಣೇಶ್ ಹವ್ಯಾಸ ಕೂಡಾ ಚೇಂಬರಿನಲ್ಲಿ ದೊಡ್ಡ ಚರ್ಚೆಯಾಗಿತ್ತು. ಹೀಗಾಗಿ ನಿರ್ಮಾಪಕರು ಕೂಡಾ ಗಣೇಶ್ ವಿರುದ್ಧ ಬಂಡಾಯ ಎದ್ದಿದ್ದರು.

ಒಂದೆಡೆ ನಿರ್ದೇಶಕರ ಮತ್ತು ಇನ್ನೊಂದೆಡೆ ನಿರ್ಮಾಪಕರ ವಿರೋಧ ಕಟ್ಟಿಕೊಂಡಿದ್ದ ಗಣೇಶ್‌ಗೆ 'ಕೂಲ್' ಚಿತ್ರದ ಯಶಸ್ಸು ಮುಖ್ಯವಾಗಿತ್ತು. ಆದರೆ ಈ ಚಿತ್ರ ಬಾಕ್ಸ್ ಆಫೀಸಿನಲ್ಲಿ ಅಂತಹ ಓಪನಿಂಗ್ ಪಡೆದಿಲ್ಲ.

ಸಾಮಾನ್ಯವಾಗಿ ಒಂದು ದೊಡ್ಡ ಚಿತ್ರ ಬಿಡುಗಡೆಯಾಗುವಾಗ ಅದು ಗೆಲ್ಲುತ್ತೋ, ಸೋಲುತ್ತೋ ಎಂದು ಗಾಂಧಿನಗರದ ಜನ ಶುಕ್ರವಾರ ಬೆಳಗಿನಿಂದಲೇ ಕಾತುರದಿಂದ ಕಾಯುತ್ತಿರುತ್ತಾರೆ. ಆದರೆ ಆ ಚಿತ್ರ ಬಿದ್ದರೆ ಯಾರೂ ಸಂಭ್ರಮಿಸುವುದಿಲ್ಲ. ಆದರೆ ಇದೇ ಮೊದಲ ಬಾರಿಗೆ 'ಕೂಲ್' ಚಿತ್ರದ ಸೋಲನ್ನು ಕಂಡು ನಿರ್ದೇಶಕರ ಸಂಘ ಸಂಭ್ರಮವನ್ನಾಚರಿಸಿದೆ ಎಂಬ ಸುದ್ದಿ ಗಾಂಧಿನಗರದಿಂದ ಬಂದಿದೆ.

ಗಣೇಶ್ ವೃತ್ತಿಜೀವನ ಈಗ ನಿಜಕ್ಕೂ ಕವಲುದಾರಿಯಲ್ಲಿದೆ. ಕಳೆದ ಮೂರು ವರ್ಷಗಳಿಂದ ಅವನ ಯಾವ ಚಿತ್ರಗಳೂ ಬಾಕ್ಸಾಫೀಸ್‌ನಲ್ಲಿ ಗೆದ್ದಿಲ್ಲ. ಈಗ ಆತನ ಸ್ವಂತ ಬ್ಯಾನರಿನ, ಸ್ವಂತ ನಿರ್ದೇಶನದ ಚಿತ್ರವೂ ಬಾಕ್ಸಾಫೀಸ್‌ನಲ್ಲಿ ಮುಗ್ಗರಿಸಿದೆ.

ಇಂತಹ ಸೋಲು ಬಹುತೇಕ ಎಲ್ಲ ನಾಯಕನಟರ ವೃತ್ತಿಜೀವನದಲ್ಲಿ ಬಂದುಹೋಗಿವೆ. ಈ ಹಿಂದೆ ಕೆಲವು ನಾಯಕರು ಸೋಲಿನ ನಂತರ ಮತ್ತೆ ಮೈಕೊಡವಿ ನಿಂತ ಉದಾಹರಣೆಗಳೂ ಇವೆ. ಗಣೇಶ್ ಅದೇ ರೀತಿ ಎದ್ದು ನಿಲ್ಲುತ್ತಾನೆಯೇ ಎಂಬುದೇ ಸದ್ಯದ ಪ್ರಶ್ನೆ. ●

ಗಣೇಶ್ ಕತೆ ಮುಗಿಸಿದ ಕೂಲ್



ಯಾರು ಯಾವ ಕೆಲಸ ಮಾಡಬೇಕೋ ಅದನ್ನು ಬಿಟ್ಟು ಮತ್ತೊಂದನ್ನು ಮಾಡಿದರೆ ಎಂಥಾ ರಿಜಲ್ಟು ಬರುತ್ತೆ ಅನ್ನೋದಕ್ಕೆ ಉದಾಹರಣೆ ಮಾಜಿ ಗೋಲ್ಡು ಹಾಲಿ ರೋಲ್ಡ್ ಸ್ಟಾರ್ ಗಣೇಶ್. ಆನೆ ನಡೆದದ್ದೇ ಹಾದಿ ಎನ್ನುವಂತೆ ಗಣೇಶ ತಾನು ಯಾವುದರಲ್ಲಿ ಕೈಯಿಟ್ಟರೂ ಯಶಸ್ಸು ಗ್ಯಾರೆಂಟಿ ಎಂದುಕೊಂಡಿದ್ದ. ಆದರೆ ಆತನ ಓವರ್ ಕಾನ್ಫಿಡೆನ್ಸು ಮೇಲಿಂದ ಮೇಲೆ ಕೈಕೊಡುತ್ತಲೇ ಇದೆ. ಮೊದಮೊದಲಿಗೆ ಒಬ್ಬ ಕಮರ್ಷಿಯಲ್ ಹೀರೋ ಆಗಿ ಎಡವಿದ ಗಣೇಶ ಈ ಬಾರಿ ನಿರ್ದೇಶನ ಕ್ಕಿಳಿದು ಮೂಗು ಮುರಿದುಕೊಂಡಿದ್ದಾನೆ.



ನಿಜಕ್ಕೂ ತಾನು ನಿರ್ದೇಶಕನಾಗಬೇಕು ಎಂದು ಕನಸಿಟ್ಟುಕೊಂಡು, ಅದನ್ನು ಬಹಳಷ್ಟು ವರ್ಷ ಕಲಿತು ಈ ಕೆಲಸಕ್ಕೆ ಗಣೇಶ್ ಇಳಿದಿದ್ದರೆ ಅದು ಬೇರೆ ಮಾತಾಗುತ್ತಿತ್ತು. ಆದರೆ ಗಣೇಶ್ ಮಾಡಿದ್ದೇ ಬೇರೆ. ನಿರ್ದೇಶಕ ಮುಸ್ಸಂಜೆ ಮಹೇಶನನ್ನು ಹೊರದಬ್ಬಿದ ಗಣೇಶ್ ಹೆಂಡತಿ ಶಿಲ್ಪಾ ಮತ್ತು ಗಣೇಶ್ ಇಬ್ಬರು ಸೇರಿ 'ಕೂಲ್' ಸಿನಿಮಾ ಚಿತ್ರಮಂದಿರದಲ್ಲಿ ಸಂಪೂರ್ಣವಾಗಿ 'ಥಂಡಾ' ಹೊಡೆಯುವಂತೆ ಮಾಡಿದ್ದಾರೆ.

'ಕೂಲ್' ಚಿತ್ರದ ಕಥೆಯನ್ನು ತೆಲುಗಿನ ಪೆಡಾಲ ಶಿವಸುಬ್ರಮಣ್ಯ ಬರೆದಿದ್ದರು. ಮೂಲ ಕತೆಯ ಎಳೆಯನ್ನು ಇಟ್ಟುಕೊಂಡ ಮಹೇಶ್ ಹೊಸದಾಗಿ ಚಿತ್ರಕತೆ ರಚಿಸಿ, ಸಂಭಾಷಣೆಯನ್ನೂ ಬರೆದಿದ್ದರು. ಆದರೆ ಮಹೇಶ್ ಹೊರಹೋದಮೇಲೆ ಚಿತ್ರದ ಮೇಲೆ ಗಣೇಶ್‌ಗೆ ಹಿಡಿತವೇ ಸಿಗಲಿಲ್ಲ. ಆದರೂ ತಾನು ಮಾಡಿದ್ದೆಲ್ಲ ಸರ್ವಶ್ರೇಷ್ಠವೆನಿಸಲು ಶುರುವಾಯಿತು. ಸಿನಿಮಾಕ್ಕೆ ಗೋದ್ರೆಜ್ ಸಂಸ್ಥೆಯ ಪ್ರಾಯೋಜಕತ್ವ ಪಡೆದ ಗಣೇಶ್ ಕಥೆಗೆ ಅಗತ್ಯವಿಲ್ಲದಂತೆ ಗೋದ್ರೆಜ್ ಪ್ರಾಡಕ್ಟನ್ನು ತುರುಕಿದ. ಹಿಂದಿಯಲ್ಲಿ ಹಿಟ್ ಆಗಿದ್ದ 'ಕಹೋನಾ ಪ್ಯಾರ್ ಹೇ' ಮತ್ತು 'ಥ್ರೀ ಈಡಿಯಟ್ಸ್'ನ ಕೆಲವು ಅಂಶಗಳನ್ನು ತನ್ನ ಚಿತ್ರದಲ್ಲಿ 'ಕೂಲಾ'ಗಿ ಅಳವಡಿಸಿಕೊಂಡ. ಇವೆಲ್ಲಾ ಅಂಶಗಳು ತೂರಿಕೊಳ್ಳುತ್ತಿದ್ದಂತೇ ಸಿನಿಮಾ ಬ್ರೇಕ್ ಫೇಲ್ಯೂರ್ ಆಗಿಹೋಯ್ತು.

ಚಿತ್ರಕ್ಕೆ ದುಡಿದ ತಂತ್ರಜ್ಞರಿಗೆ ದಿನದ ಬಟವಾಡೆಯನ್ನೂ ಕೊಡಲು ಹಿಂಜರಿಯುವ ಶಿಲ್ಪಾ ಗಣೇಶ್ ತಮಿಳಿನ ಛಾಯಾಗ್ರಾಹಕ ರತ್ನವೇಲುಗೆ ಕೊಟ್ಟ ಬಾಬ್ತು ಬರೋಬ್ಬರಿ ಐವತ್ತೈದು ಲಕ್ಷ. ಮೊದಮೊದಲು ಸಿಕ್ಕಾಪಟ್ಟೆ ಉತ್ಸಾಹದಿಂದ ಕೆಲಸ ಆರಂಭಿಸಿದ ರತ್ನವೇಲು ಆನಂತರ ಆಸಕ್ತಿಯನ್ನೇ ಕಳೆದುಕೊಂಡದ್ದು ಚಿತ್ರದಲ್ಲಿ ಕಾಣಿಸುತ್ತದೆ.

'ಗಜಿನಿ' ಚಿತ್ರಕ್ಕೆ ಸಂಕಲನ ಮಾಡಿದ್ದ ಅಂತೋಣಿ 'ಕೂಲ್'ಗೂ ಎಡಿಟರ್. ಅವರು ಕ್ರಿಯಾಶೀಲ ಸಂಕಲನಕಾರರಾದರೂ ಸಿನಿಮಾಕ್ಕೆ ಬೇಕಿರುವ ಕಥೆ, ಚಿತ್ರಕಥೆ ಮತ್ತು ನಿರ್ದೇಶಕನ ಕೌಶಲ್ಯವಿಲ್ಲದಿದ್ದರೆ ಅವರು ಏನಂತ ಎಡಿಟ್ ಮಾಡುತ್ತಾರೆ. ಅಂತೆಯೇ ಗಣೇಶ್ ಚಿತ್ರೀಕರಿಸಿಕೊಂಡು ಬಂದಿದ್ದ ರೀಲುಗಳ ತಲೆ-ಬಾಲ ಗೊತ್ತಾಗದ ಅಂತೋಣಿ ಇಷ್ಟಬಂದಹಾಗೆ ಕತ್ತರಿಸಿ-ಅಂಟಿಸಿಕೊಟ್ಟಿದ್ದಾರೆ.

ಸಿನಿಮಾ ಮೊದಲ ವಾರವೇ ಎಲ್ಲ ಕೇಂದ್ರಗಳಲ್ಲೂ ವಾಶ್‌ಔಟ್ ಆಗಿದೆ. ವಿನೋದ್ ಪ್ರಭಾಕರ್ ನಟಿಸಿರುವ 'ಹೋರಿ', ಲೂಸ್ ಮಾದನ 'ದೇವದಾಸ್'ಗೆ ಆಗಿರುವ ಕಲೆಕ್ಷನ್ ಕೂಡಾ 'ಕೂಲ್'ಗೆ ಆಗಿಲ್ಲ. ಟೀವಿ ರೈಟ್ಸ್ ಮತ್ತು ಆಡಿಯೋ ಹಕ್ಕುಗಳನ್ನು ಗಣೇಶ್ ಒಳ್ಳೇ ರೇಟಿಗೇ ಮಾರಿದ್ದಾನೆ. ಆದರೆ 'ಕೂಲ್' ಕನಿಷ್ಠ ನಾಲ್ಕು ಕೋಟಿ ರೂಪಾಯಿಗಳನ್ನು ನುಂಗಿರುವುದರಿಂದ ಗಣೇಶ್‌ಗೆ ನಷ್ಟವೇ ಆಗಿದೆ.

ಈ ಹಿಂದೆ ಶಿಲ್ಪಾ ಗಣೇಶ್ ನಿರ್ಮಿಸಿದ್ದ 'ಮಳೆಯಿರಲಿ ಜೊತೆಯಿರಲಿ' ಸಿನಿಮಾಕ್ಕೆ ಹೂಡಿದ್ದ ಅರ್ಧ ದುಡ್ಡೂ ವಾಪಾಸು ಬರಲಿಲ್ಲ. ಈಗ 'ಕೂಲ್' ಸಿನಿಮಾ ಗಣೇಶನ ವೃತ್ತಿಬದುಕಿನ ದಿಕ್ಕು ದೆಸೆಯನ್ನೇ ತಿರುಗಾಮುರುಗಾ ಮಾಡಿ ಕೂಡಿಸಿದೆ. ಆದರೂ ಶಿಲ್ಪಾಳ ತಿಮಿರು ಮಾತ್ರ ಅಡಗಿಲ್ಲ.

'ಹೇಗೂ ಗಣೇಶ್ ಸೋಲಿನ ಸರಪಳಿಯಲ್ಲಿದ್ದಾನೆ. ಸುಲಭವಾಗಿ ಕಾಲ್‌ಶೀಟ್ ಸಿಗುತ್ತದೆ' ಎಂದು ನಿರ್ಮಾಪಕರೊಬ್ಬರು ಕಾಲ್‌ಶೀಟ್ ಕೇಳಲು ಹೋದರೆ ಶಿಲ್ಪಾ 'ಒಂದು ಕೋಟಿ ಎಂಭತ್ತು ಲಕ್ಷ ಕೊಡ್ತೀರಾ' ಎಂದಳಂತೆ. 'ಅಷ್ಟೊಂದು ಕೊಡ್ಬೇಕಾ?' ಎಂದಿದ್ದಕ್ಕೆ 'ಪುನೀತ್ ರಾಜ್‌ಕುಮಾರ್‌ಗೆ ಎರಡೂವರೆ, ಮೂರು ಕೋಟಿ ಕೊಡ್ತೀರಾ? ಗಣೇಶ್‌ಗಿರೋ ವ್ಯಾಲ್ಯೂಗೆ ಇಷ್ಟಾದರೂ ಬ್ಯಾಡ್ವಾ' ಎಂದಳಂತೆ. ಗಾಬರಿಗೆ ಬಿದ್ದ ನಿರ್ಮಾಪಕ ಗೇಟು ತೆರೆದು ಹೊರಬಂದವನು ಹಿಂದೆ ನೋಡದಂತೆ ಓಡಿಬಂದನಂತೆ.

ಹೀಗೆ ಗಣೇಶನ ಒಂದೊಂದು ಸೋಲಿಗೆ ಆತನ ಪತ್ನಿ ಶಿಲ್ಪಾಳೇ ಪರೋಕ್ಷ ಕಾರಣವಾಗುತ್ತಿದ್ದಾಳೆ.

• ಅರುಣೋದಯ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667642
Fax : 26604536, E-mail :lankesh70@rediffmail.com, Printed at Rajhans Enterprises ...